


ಲಮಾಣಿ ಚಿನ್ನಿ

ಆತ್ಮಚರಿತೆ

ಡಾ. ಶಿರಗಾನಹಳ್ಳಿ ಶಾಂತ ನಾಯ್ಕ

ಲಮಾಣಿ ಚಿಮ್ನಿ
ಆತ್ಮಚರಿತೆ

ಲೇಖಕರು

ಡಾ. ಶಿರಗಾನಹಳ್ಳಿ ಶಾಂತನಾಯ್ಕ

ಪ್ರಕಾಶಕರು

ಶ್ರೀ ಚೂಡಾ ಪ್ರಕಾಶನ

419/1, F131, ಮೊದಲನೇ ಮಹಡಿ, ವೀಣೆಶಾಮಣ್ಣ ರಸ್ತೆ,
ಮೈಸೂರು - 570 004

LAMANI CHIMNI AATHMA CHARITHE : written by **Dr. SHIRAGANAHALLI SHANTHANAIK**

Published by : **Shree Chooda Prakashana,** # 419/1, F131, First floor, Veeneshamanna Road, Mysore - 570 004

ಪ್ರಥಮ ಮುದ್ರಣ : 2012

ಪುಟಗಳು : 78

ಬೆಲೆ : 50/-

ಮುದ್ರಕರು : ತಾರಾ ಪ್ರಿಂಟರ್ಸ್, ಮೈಸೂರು

ಅರ್ಪಣೆ

ಪುರುಷನ ದೌರ್ಜನ್ಯದಿಂದ
ನಿರಂತರ ನಲುಗಿ
ದಮನಗೊಳ್ಳುತ್ತಿರುವ
ದನಿಗಳಿಗೆ.

ಪುಟ ತೆರೆಯುವ ಮುನ್ನ...

ಲಮಾಣಿ ಚಿಮ್ನಿ ಆತ್ಮಚರಿತೆ... ಬಹಳ ದಿನಗಳಿಂದ ನನ್ನ ಕಾಡುತ್ತಿತ್ತು. ಅನೇಕ ಸಲ ಒತ್ತಡದ ಬದುಕಿನಲ್ಲಿ ಏನನ್ನು ಬರೆಯಲು ಆಗುವುದಿಲ್ಲ. ದೆಹಲಿಯ ಗೆಸ್ಟ್‌ಹೌಸ್ ಒಂದರಲ್ಲಿ ಕುಳಿತು ಹಳೆಯ ಗೋಡೌನ್‌ನಲ್ಲಿದ್ದ ಸಾಮಾನುಗಳನ್ನು ಹೊರಹಾಕುವಂತೆ ಬರೆಯುವ ಪ್ರಯತ್ನ ಮಾಡಿದೆ. ಈ ಆತ್ಮಚರಿತೆ ಯಾರಿಗೂ ಸಂಬಂಧಪಟ್ಟದಲ್ಲ ಇದೊಂದು ಕತೆ, ಯಾರಿಗಾದರು ಅನ್ವಯಿಸದ್ದೆ ಆದರೆ ಇದೊಂದು ಕಾಕತಾಳೀಯ. ಈ ದೇಶದ ಕೋಟ್ಯಾಂತರ ಜನರಿಗೆ ತಿನ್ನಲು ಕೂಳಿಲ್ಲ, ವಾಸಿಸಲು ಮನೆಗಳೆ ಇಲ್ಲ. ದೆಹಲಿಯ ಫುಟ್‌ಪಾತ್‌ಗಳಲ್ಲಿ ಆಶ್ರಯುವೇ ಇಲ್ಲದೆ ಪೋಲಿಸರ ಬೂಟಿನೇಟಿಗೆ ಬಲಿಯಾಗುತ್ತಿರುವವರು ಅನೇಕರು ಬದುಕಿನ ಬಗ್ಗೆ ಯೋಚನೆನೆ ಮಾಡುವುದಿಲ್ಲ. ಹಾಳು ಬದುಕೆ ಹೀಗೆ. ಕೆಲವರ ಕೈಗಷ್ಟೆ ಸಿಕ್ಕಿರುತ್ತದೆ. ಇನ್ನು ಕೆಲವರಿಗೆ ದಕ್ಕುವುದೇ ಇಲ್ಲ. ಇಂತಹದ್ದೆ ಕತೆ ಚಿಮ್ನಿದೂ ಕೂಡ. ಬದುಕಿನ ಬಗ್ಗೆ ಕನಸು ಕಾಣದವರಿದ್ದಾರೆ, ಆದರೆ ಕನಸು ಕಂಡವರ ಕನಸುಗಳು ಯಾವತ್ತು ಈಡೇರುವುದೇ ಇಲ್ಲಾ, ನುಚ್ಚು ನೂರಾಗಿ ಬಿಡುತ್ತವೆ. ಇಂತಹ ಕರಾಳ ಕನಸು ಕಂಡು ಬದುಕಬೇಕೆಂದು ಹಂಬಲಪಟ್ಟಿದ್ದ ಚಿಮ್ನಿಗೆ ಅವಳ ಎದೆಯೊಳಗೆ ತೂತಾಗಿದೆ ಎಂದು ಕೇಳಿದಾಗ ನಿಂತ ನೆಲ ಕಾಲಡಿ ಕುಸಿದಿತ್ತು. ಸಾವನ್ನ ಹೊತ್ತು ಬದುಕುವುದು ಬಹಳ ಕಷ್ಟ. ಒಂದು ನಿರ್ದಿಷ್ಟ ಗೆರೆಯನ್ನು ಎಳೆದು ಇಲ್ಲಿಂದ ಇಲ್ಲಿಯವರೆಗೆ ಮುಂದೆ ದಾಟುವುದಿಲ್ಲವೆಂದಾಗ ಖಂಡಿತ ಅದು ಪ್ರಯಾಸವಾಗುತ್ತದೆ, ಶೋಚನೀಯವಾಗಿ ಬಿಡುತ್ತದೆ. ಹೀಗೆ ಅವಳಿಗೂ ಆಗಿದ್ದು. ಬಡತನ, ದಾರಿದ್ರ್ಯ, ಮನೆ ತುಂಬ ಮಕ್ಕಳು ಕೇಳುವವರ್‍ಯಾರು ಹುಟ್ಟಿದ್ದು ತಮಗೆ, ಉಳದ್ರೆ ನಸೀಬಗಟ್ಟಿ ಐತೆ ಅಂದ್ಕೊಳೊದು, ಸತ್ರೆ ಶಿವನವು ಅಂದ್ಕೊಂಡು ಹೊಟ್ಟೆ ತುಂಬ ಹೆಂಡಸರಾಯಿ ಕುಡಿದು ಅಮಲಿನಲ್ಲಿ ವಾರ ಹದಿನೈದು ದಿನಗಳ ಕಾಲ ನೆನಪು ಮಾಡಿಕೊಂಡು ಬೇಸರಪಟ್ಟು, ಮತ್ತೆ ಯತಾಸ್ಥಿತಿಗೆ ಮರಳುವ ಬದುಕಿಗೆ ಹೊಣೆ ಯಾರು? ನನ್ನ ಮೂರನೇ ಕಾದಂಬರಿ ಲಮಾಣಿ ಚಿಮ್ನಿಯ ಆತ್ಮಚರಿತೆ-ಲಂಬಾಣಿ ಸಮುದಾಯದ

ಹುಡುಗಿಯೊಬ್ಬಳ ಕತೆ, ಅನಕ್ಷರಸ್ಥ ಬಡ ಕುಟುಂಬದ ಅನೇಕ ಮಕ್ಕಳು ಹೀಗೆ ಹಾದಿ ಹೆಣವಾಗುತ್ತಾರೆ. ಅಂತಹವರ ಸಾವು ದಾಖಲಾಗುವುದೇ ಇಲ್ಲ. ಅಂತಹದೊಂದು ಸಾವು ನನ್ನನ್ನ ಬಹಳ ವರ್ಷಗಳಿಂದ ತೀವ್ರವಾಗಿ ಕಾಡಿತ್ತು. ಅದು ಈಗ ಕೃತಿ ರೂಪದಲ್ಲಿ ಬಂದಿದೆ. ಇದನ್ನು ಕನ್ನಡ ಸಾರಸ್ವತ ಲೋಕ ಸ್ವೀಕರಿಸುತ್ತೆ ಅಂದುಕೊಂಡಿದ್ದೇನೆ.

ಶಿರಗಾನಹಳ್ಳಿ ಶಾಂತನಾಯ್ಕ
ಬಳ್ಳಾರಿ

ಈಗ್ಗೆ ಸುಮಾರು ಇಪ್ಪತ್ತು ವರ್ಷಗಳಾಗಿರಬಹುದು. ನನ್ನಕ್ಕ ಸತ್ತು. ನನ್ನಕ್ಕ ಅಂದರೆ ನನ್ನ ಸ್ವಂತ ಅಕ್ಕ ಅಲ್ಲ, ಚಿಕ್ಕಪ್ಪನ ಮಗಳು. ಈ ನೆನಪಿನಾಳದ ಕತೆಯನ್ನು ಚಿನ್ನಾನಾಯ್ಕ ಹೇಳ್ತಾ‌ಇದ್ದ. ಅವನೀಗ ಯಾವುದೋ ಸರ್ಕಾರಿ ಕೆಲಸದಲ್ಲಿ ಸೇರ್ಕೊಂಡು ಸುಖವಾಗಿದ್ದಾನೆ ಅನ್ನೋದಕ್ಕಿಂತ, ಸುಮಾರು 30 ವರ್ಷಗಳ ಹಿಂದೆ ಪಟ್ಟ ಪಡಿಪಾಟ್ಲು ಈಗಿಲ್ಲ. ಹತ್ತ ಮೈಲಿದೂರದವರಿಗೆ ದೊಡ್ಡರ ಹಿಂದೆ ಹೋಗಿ ಶೇಂಗಾ ಆರ್ಸಿ, ಹೊಲದ ಮಾಲೀಕನಿಂದ ಛೀ! ಥು ಅನ್ನೊಸಿಕೊಂಡು ಬದುಕಿನ ಬಂಡಿಸಾಗೋದಕ್ಕೆ ತಾನು ಸಾಕಾರಿಯಾಗಿದ್ದನ್ನ ಮರಿಯಾಕ ಆಗದೆ ಒಳಗೊಳಗೆ ತಮ್ಮಂಥವರ ಬದುಕೇಕೆ ಹೀಗೆಂದು ತಡಬಡಿಸುತ್ತಾನೆ. ರಾಗಿಗಂಜಿ, ಉಪ್ಪಿಲದಹುರಳಿ, ಕೊಲಾಣಿಸೊಪ್ಪು ತಿಂದು ಬದುಕಿದ ದಿನಗಳನ್ನ ಮರೆಯಲು ಬಲು ಪ್ರಯತ್ನ ಪಟ್ಟರು ಅವನಿಂದಾಗ್ತಾನೆ ಇಲ್ಲ. "ಛೇ, ಹಾಳಾದ ದಿನಗಳು" ಚಿನ್ನಾನಾಯ್ಕ ಇವತ್ತಿಗೂ ಬೆಚ್ಚುಬಿಳ್ತಾನೆ. ಧೋ ಅಂಥ ಸುರಿಯೋ ಮುಂಗಾರು ಗಟ್ಟಿ ಸೂರಿಲ್ಲದ ಗುಡಿಸಲೊಳಗೆ ಮಳೆಯದ್ದೆ ಕಾರುಬಾರು. ಅವನಪ್ಪ ಮದ್ವಿಯಾದಾಗ ಹನ್ನೊಂದೋ ಹನ್ನೆರಡ ವರ್ಷಗಳಂತೆ, ಅವ್ವನಿಗಿರಬೇಕು ಏಳೋ ಎಂಟು ವರ್ಷ. ಅವಕ್ಕೆ ಮದ್ವೆ ಅಂದ್ರೇನಂತ ತಿಳಿಯದಕಾಲ. ಚಿನ್ನನಿಗೆ ಏಳುಮಂದಿ ಅಣ್ಣಂದಿರು ಒಂದಿಬ್ಬರು ಅಕ್ಕಂದಿರು ಒಟ್ಟು ಅವನ್ನನ ಸೇರಿಸಿಕೊಂಡ್ರೆ ಹತ್ತು. ಪಾಪಿಮುಂಡೇವು ಹತ್ತರ ಹಣೆಬರಹಾನು ಇಷ್ಟೊಂದು ಗಟ್ಟಿ ಇತ್ತು ಅಂದ್ರೆ ದೊಡ್ಡರೋಗ, ಸಣ್ಣರೋಗ ಯಾವುದೋ ಬಂದ್ರೂನುವೆ ಜುಪ್ ಅನ್ನದಂಗೆ ಉಳ್ಕಂಡಿದ್ವು. ಜ್ವರಬಂದ್ರೆ ಅವನಪ್ಪ ಸಂತುನಾಯ್ಕ ಒಲಿಯಾನಬೂದಿ ತಗಂಡು ಗಾಳಿಬಡ್ಕಂಡ್ರೈತೆ ಅಂತಂದು, ಅದ್ಯಾವ ಸೀಮಿ ಮಂತ್ರ ಹೇಳ್ತಿದ್ನೊ ಕಡೀಗಮಾತ್ರ! ಛು!' ಅಂತ ಅವನ ಕಣ್ಣಾಗ ಬೂದಿ ಬೀಳೋ ಹಂಗೆ ಊದುತ್ತಿದ್ದ. ವಾಂತಿ ಬೇದಿ ಹತ್ಕೊಂಡ್ರಂತುವೆ, ಚರಗಿಯೊಳಗೆ ಬೆಂಕಿಕೆಂಡ ಹಾಕಿ ಏಳ ಸಲಾ ನಂಜರ್ ತಗದು, ರೊಟ್ಟಿ ತಟ್ಟೋ ಕಾಟೋಟಿಯೊಳಗೆ ಒಂಚೂರು ರೊಟ್ಟಿ

ತುಂಡುದುರಿಸಿ ನಿವಾಳಿಸಿ ದಬ ಹಾಕಿದ್ರೆ ಬೆಂಕಿ ಚೆಂಬೊಳಗಿಂದ ನೀರು ಗಡರ್, ಗಟರ್ ಸದ್ದು ಮಾಡ್ತಾ ಒಳಗೆ ಹೀರ್‍ಕೊಂಡ್ರೆ "ಅದ್ರೋಸ ಅಡಗ ಯಾರ ಕಣ್ಣೆಸರ ಆಗೈತೋ ಅವನ ಹೊಟ್ಟೆಕೆಟ್ಟಹೋಗ" ಅಂತೇಳಿ ಅವನವ್ವ ಗುಜರಿಬಾಯಿ ಹಿಡಿಶಾಪ ಹಾಕ್ತಿದ್ಲು. ಅದು ಕರೇನ ನಿಂತುಹೊಕ್ಕಿತ್ತು. ಅಂಥ ಎಲ್ಲಾ ಕಾಲಗಳನ್ನ ದಾಟ್ಕಂಡು ಸಂತುನಾಯ್ಕನ ಸಂಸಾರದ ವಿಷಬಳ್ಳಿ ಹಂಗೇನೆ ಹಬ್ಬಿತು. ಆದ್ರ ಅವನ ತಮ್ಮನ ಸಂಸಾರದೊಳಗೆ ಅನೇಕ ಸಾವುಗಳು ಬಂದ ಹ್ವಾದ್ವು.

ಮೂಡಲ ಸೀಮಿಯಿಂದ ಲದೇಣಿಯಾ ಮಾಡ್ಕಂಡ ಬಂದ ಸಾವಿರಾರು ಲಂಬಾಣಿಗಳು ದಿಕ್ಕುದಸೆಯಿಲ್ಲದೆ ಹ್ವಾದ್ರ. ಚಿನ್ನುನಾಯ್ಕನ ತಾತ ಥಾವ್ರ್ಯ ಮಾತ್ರ ಇರೋ ನಾಕ ಮಂದಿ ಕಟ್ಕಂಡ ಪನಾಡ ಪಕ್ಷಿಯಂಗೆ ಅಲ್ಲಿ ಇಲ್ಲಿ ಅಲಿಯೋದ್ಯಾಕಂತ. ಕಾಟೇಬಾರಿ ತಾಂಡದಾಗ ಉಳ್ಕೊಂಡ. ಥಾವುನಾಯ್ಕನ ನಾಕಮಕ್ಕಳಲ್ಲಿ ಎಲ್ಡು ಹೆಣ್ಣು, ಎಲ್ಡು ಗಂಡು. ಎರಡು ಹೆಣ್ಣುಗಳಲ್ಲಿ ಒಬ್ಬಾಕಿಕುಂಟಿ. ಅಕೀನ್ಯಾರು ಮದ್ವಿಯಾಗಕ ಬರದಕ್ಕೆ ಅವರ ಹತ್ರನೆ ಉಳ್ಕಂಡ್ಲು, ದೊಡ್ಡೋಳಿಗ ಮದ್ವಿಮಾಡಿ, ಇಬ್ಬರೂ ಗಂಡು ಹುಡುಗರಿಗೆ ಮದ್ವಿ ಮಾಡಿಂದೆ, ಅವರಿಬ್ಬರ ಹೆಂಡಂದಿರ ನಡುವೆ ವ್ಯತ್ಯಾಸ ಬಂದೊಡನೆ ಒಂದಿದ್ದ ಗುಡಿಸಲು ಎರಡಾದವು.

ಹಸುನಂಗಿರೊ ಮನುಷ್ಯ. ಅವನ ಹೇಣ್ತಿ ಗುಬ್ಬೀರಿ ಮಾತ್ರ ಭೋ ಘಾಟಿ ಹೆಂಗ್ಸು. ಥಾವು ಲದೇಣಿಯಾ ಹೇರಕಂಡ ಬರಾಕಮುದ್ಲು ಆಂಧ್ರಪ್ರದೇಶದ ಯಾವುದೋ ಮೂಲೆಯಿಂದ ಕರ್ನಾಟಕದ ಬಳ್ಳಾರಿ ಪ್ರವೇಶಿಸಿ ಅಲ್ಲೆಲ್ಲೊ ಗೂಡೂರೋ ಅಪ್ಪೆಬಳ್ಳತಾಂಡದ ಹತ್ರ ಅವನಪ್ಪನೂವೆ ಅಜ್ಜನೂ ಜಮೀನು ಮಾಡ್ಕಂಡಿದ್ದವರು. ಥಾವು ಅಜ್ಜ ಹನುಮನಾಯ್ಕನಿಗೆ ಒಬ್ಬನೆ ಮಗ. ಥಾವುನೂ ಕೂಡ ಒಬ್ಬನೆ. ಥಾವುನ ಅಜ್ಜ ಬ್ರಿಟಿಷರ ಹತ್ರ ಗುಲಾಮಗಿರಿ ಮಾಡ್ಕೊಂಡು ಒಳ್ಳೆ ಬಂಗಾರದ ನಾಣ್ಯಗಳನ್ನು ಗಿಟ್ಟಿಸಿಕೊಂಡು, ಒಂದ್ನೈವತೆಕ್ಕರೆ ಕಾಡನ್ನ ಬುಡಮೇಲ ಮಾಡಿ ಒಳ್ಳೆ ಜಮೀನ ಮಾಡ್ಕಂಡ. ಅಪ್ಪೆಬಳ್ಳತಾಂಡದಾಗೆ ಶ್ರೀಮಂತನಾದ. ಅದ್ಯಾವುದೋ ಹಳೇ ದ್ವೇಷ ಒಳಗೊಳಗೆ ಹೆಡೆಯಾಡ್ತಿತ್ತು. ಅದಕ್ಕ ಹನುಮನಾಯ್ಕ ಮಗನ್ನ ಎಲ್ಲೂ ಬಿಡದಂಗೆ ಕಾಯ್ಕಂಡಿದ್ದ. ಆದರ ನಡುವೆ ಮುದುಕನ ಪೈಕಿ ಯಾರೋ ಒಬ್ಬನ್ನ ಬೇಟೆಗಂತ ಕರ್‍ಕೊಂಡ ಹೋಗಿ ಪೊದೆಯೊಳಗೆ ಜಿಂಕೆ ತೋರ್‍ಸಿ ರುಂಡ ಮುಂಡು ಬೇರೆ ಮಾಡಿ ಕಾಡಪ್ರಾಣಿಗ ಆಹುತಿಕೊಟ್ಟು

ಬಂದಿದಕ್ಕೆ ಹೆದರಿ ಹನುಮನಾಯ್ಕ ತಾಂಡ ತೊರೆದು ಮೂಡಲಸೀಮೆ ಬಿಟ್ಟು ಪಡವಲಕ್ಕೆ ಗುಳೆಹೊರಟ. ತನ್ನ ಒಬ್ಬನೆ ಮಗ ಥಾವುನ ಮದುವೆ ಮಾಡಾಕ ಹೆಣ್ಣು ಹುಡುಕಿದ್ದಂಗೆ ಅವನ ಹಾಗೆ ಗುಳೆ ಹೊಂಟೋರಲ್ಲಿ ಜಾತೇರ ಹುಡುಗಿಯನ್ನು ಹುಡುಕತೊಡಗಿದ್ದು ಅವನು ರಾಠೋಡಕುಲಕ್ಕೆ ಸೇರಿದ್ರಿಂದ, ಚವ್ಹಾಣ ಹುಡುಗಿ ನೋಡಿ ಮದ್ವಿ ಮಾಡಿಯೇ ಬಿಟ್ಟ. ಕಾಟೇಬಾರಿತಾಂಡ ತಲುಪುವುದರೊಳಗೆ ಥಾವುಗೆ ನಾಲ್ಕು ಮಂದಿ ಮಕ್ಕಳು ಆಗಿದ್ರು. ದಾರಿನಡುವೆಯೇ ಅವನ ತಂದೆ ತಾಯಿ ತೀರಿಕೊಂಡರು. ಅನಿವಾರ್ಯವಾಗಿ ಅಲ್ಲೇ ಕಾಡಿನೊಳಗೆ ಸುಟ್ಟು ಮಣ್ಣು ಮುಚ್ಚಿ ಅಳೋ ಅಷ್ಟು ಅತ್ತು, ಮಂದಿ ಹಿಂದೆ ಹೊರಟೆ ಬಿಟ್ಟ. ಥಾವುನಾಯ್ಕ ಕಾಟೇಬಾರಿಗ ಬಂದು ಹರಸಾಹಸಮಾಡಿ ನಾಕಮಂದಿಗಾಗೋ ಆಟು ಜಮೀನಮಾಡಿದ, ಒಬ್ಬ ಮಗಳನ್ನ ಕೊಂಡೇನತಾಂಡಕ್ಕ ಕೊಟ್ಟು ಮದ್ವಿ ಮಾಡಿದ್ದ. ಕುಂಟಿಗೂ ಯಾರಾದರು ಕೇಳೋರ ಬಂದಾರ ಅನ್ನೋ ಪ್ರಯತ್ನದಲ್ಲಿದ್ದಾಗಲೇ ಸತ್ತಹ್ವಾದ. ಮುಂದ ಇಬ್ಬರು ಗಂಡಮಕ್ಕಳ್ಳು ಬ್ಯಾರೆ ಆದ್ರು ಚಿನ್ನುನಾಯ್ಕನ ಅಪ್ಪ ಸಂಪುನಾಯ್ಕನಿಗೆ ಎಂಟು ಗಂಡು, ಎರಡು ಹೆಣ್ಣು. ಅವನ ತಮ್ಮ ಮಂಗಲ್ಯಾನಾಯ್ಕನಿಗೆ ಮಾತ್ರ ಹನ್ನೆರಡು ಹೆಣ್ಣು ಹುಟ್ಟಿದವು. ಮುಪ್ಪಿನ ಕಾಲಕ್ಕೆ ಅಳಿಯನ ಹತ್ರ ಇದ್ದು ಬೋಯ್ಸಿಕೊಳ್ಳೋದಕ್ಕಿಂತ ಸ್ವಂತ ಮಗ ಹಂಗಿಸಿ ಕೊಳಹಾದಿಕ್ರುವೆ ಪಾಡಂತ ಗಂಡಿಗಾಗಿ ಪ್ರಯತ್ನ ನಡೆಸುತ್ತಲೇ ಇದ್ದ. ಆದ್ರ ಅವನ ಹಣೆಬರಕ್ಕೆ ಗಂಡಾಗೋ ಲಕ್ಷಣಗಳೇ ಕಾಣಲಿಲ್ಲ. ತಾಂಡದ ಹಿರಿಯ ಪಾಂಡ ನಾಯ್ಕ "ಲೇ ಮಂಗು, ಯಾಕಿಂಗೆ ಹಂದಿಹಂಗ ಬುಳು ಬುಳುಂತ ಹೆಣ್ಣು ಹುಡ್ರನ್ನ ಹಡಿಯಾಕ ಹತ್ತಿ, ನಿನ್ನವ್ವನ ಸೂಳಿಮಗ್ನ, ಬಂದಮಾಡು, ಅದೇನೋ ಸರ್ಕಾರದವ್ರು ನರಕೋಯ್ದು ಮಕ್ಕಳಾಗದಂಗ ಮಾಡ್ತಾರಂತಲ್ಲ ನೀನಾರ ಹೋಗು ಇಲ್ಲ ನಿನ್ನ ಹೇಣ್ತಿ ಚಿನ್ನಿನಾರು ಕಳ್ಸು" ಅಂತೇಳಿ ಮುಕ್ಕಾಲ ಗಂಟಿ ಉಪದೇಶ ಮಾಡ್ದ. "ಎಯ್, ಆಗ್ಲಿಬೀಡು ಕಾಕ, ದೇವರೇನು ಹುಲ್ಲು ಮೇಯಿಸಂಗಿಲ್ಲ, ಕೂಲಿನಾಲಿ ಮಾಡ್ಕಂಡ ಬದಕೋವ್ರು ಬದಕಲಿ, ಸಾಯೋವ್ರ ಸಾಯ್ಲಿ ನನ್ನ ಕೈಯೋಗೇನೈತೆ. ಎಲ್ಲಾ ಕುಂತಾನಲ್ಲ ಊರಮುಂದೆ ಅವನ ನೋಡ್ಕಂತನ. ನಮ್ದೇನೈತೆ ನರಮನುಷ್ಯರದು." ಅವನ ಬಾಯಿಬಂದಾಗೋ ಹಂಗ ಹೇಳಿದ್ದ ಮಂಗ್ಲ್ಯನಾಯ್ಕ. ಆದ್ರು ಮುದಕ ಪಾಂಡುಗ ಸಮಾಧಾನ ಆಗಲಿಲ್ಲಾ. "ಲ್ಹೋ, ನಿಂಗ ಗಂಡಮಕ್ಕಳೇ ಬೇಕು ಅನ್ನಂಗಿದ್ರ ನಿಮ್ಮಣ್ಣ ಸಂತುಗ ಅದಾವಲ ಹಿಂಡು ಅದ್ರಾಗ ಯಾವನ ಬೇಕಾರುವೇ ಖೋಳಹಾಕ್ಕ ಅರ್ಥ ಆತೇನು, ಒಬ್ಬನ್ನ ಪಸಂದಾಗಿ ಕೆಲ್ಸ ಮಾಡನ್ನ ನೋಡಿ ದತ್ತಕ ತಗುಂಡು ಇರೋ ಜಮೀನಿನೊಳಗ

ಗೇಯ್ದು ಬದಕೋದ ಕಲಿ" ತಿಳಿದಷ್ಟು ಹೇಳೋ ಪ್ರಯತ್ನ ಮಾಡ್ದ. ಮುದ್ಕನ ಮಾತು ಅವನ ಸುತ್ತ್ಲು ಗಿರ್ಕಿ ಹೊಡದವೇ ವಿನಃ ಮಂಗ್ಲ್ಯನಿಗೇನು ಪ್ರಯೋಜನವಾಗಲಿಲ್ಲ. ಹೂಂನು ಹೇಳಲಿಲ್ಲಾ ಊಹೂಂ ಅಂತೇಳು ಹೇಳದೆ ಹೊಂಟಬಿಟ್ಟ.

ಸುತ್ತಮುತ್ತ ಮಂದಿ ಏನು ಹೇಳಿದ್ರು ಕೇಳದೆ "ಇವ್ನವನ ಹಡಬಿ ಹೆಂಗ್ಸು ಚಿನ್ನಿ ಹೊಟ್ಟ್ಯಾನ ಚೀಲದಾಗ ಅದೆಷ್ಟು ಹೆಣ್ಣು ಬೊಳ್ಳಾರನ್ನ ತುಂಬ್ಕೊಂಡಾಳೋ ತಿಳಿವಲ್ದ. ಹಿಂಗೇ ಬಿಟ್ರೆ ಇನ್ನೆಷ್ಟು ಹೆಣ್ಣು ಹಡಿತಾಳೋ. ನಂಗಂತು ಮದ್ವಿ ಮಾಡ್ಸಿನೆ ಸಾಕೋಗೋ ಹೋತು. ಈಗ ಹದಿನೈದನೇಯದು, ಯಾಕೋ ಸರಿಕಾಣವಲ್ದು" ಅಂದವನೆ ಒಂದು ನಿರ್ಧಾರಕ ಬಂದ.

ಅವನು ಮುಂದೇನ ಮಾಡ್ದಂತ ನನಗಂತು ಗೊತ್ತಿಲ್ಲಾ, ಯಾಕಂದರ ನಾನು ಹುಟ್ಟಿ ಜಗತ್ತನ್ನು ನೋಡಿ ಆದ್ರ ರೀತಿ ರಿವಾಜನ್ನ ಅರ್ಥಮಾಡ್ಕೊಳ್ಳಾಕ ಸುರು ಮಾಡೋದ್ರಾಗ ನಮ್ಮ ಸಣ್ಣಪ್ಪನಿಗೆ ಎಲ್ಡನೇ ಮದ್ವಿಯಾಗಿತ್ತು. ಅವನ ಎರಡನೇ ಹೇಣ್ತಿ ಪೀಕಿಗೆ ನನ್ನ ಓರಿಗೆಯ ಮಗಳು ಇದ್ಲು. ಆದ್ರ ಅವನು ಹೆಂಗ ಮದ್ವಿಯಾದ ಅಂತ ಅವ್ವ ಹೇಳಿದ್ಲು.

ನಾವೇನು ಮ್ಯಾಲಬಿದ್ದು ಖೋಳಹಾಕ್ಕೊ ನಮ್ಮ ಗಂಡ ಮಗನ್ನಂತ ಹೇಳಲಿಲ್ಲಾ ಅವನು ಬರಲಿಲ್ಲಾ, ನಿಮ್ಮಪ್ಪಂಗೂ ಹೇಳದೇ ತಾಂಡದ ರಂಗೋಲಿ ಮಾರುತಿದ್ದ ರತ್ನಾನಾಯ್ಕನ ತಂಗಿ ಪೀಕಿ ಅನ್ನೋಳನ್ನ ಮದ್ವಿ ಮಾಡ್ಕೊಂಡೆ ಬಂದಿದ್ದ. ಮೊದಲನೇ ಚಿನ್ನಿ ಅದೆಂಗ ಆಗ್ತಿಯಾ ನಾನು ನೋಡ್ತೇನಿ ಅಂದಿದ್ಕ ಸೊಂಟ ಮುರಿದು ಮೂಲಿಯೊಳಗ ಮಲಗಿಸಿ ಎರಡನೇಯಕಿಯನ್ನ ಮನಿತುಂಬಿಕೊಂಡಿದ್ದ, ಆಗ ಅವನ ಒಂಬತ್ತನೇ ಹುಡುಗಿ ಮೇಣಿಗೆ ಅಮ್ಮ ಎದ್ದು ಮೈತುಂಬ ಗಾಯಗಳಾಗಿ ಜ್ವರ ಬಂದು ಈಗೋ ಆಗೋ ಆಗಿದ್ಲು. ತಾಂಗಡಿ ಮಂದಿ ಹೋಗೆ ಇಲ್ಲ ಮೇಣಿ ಸತ್ತಹೋದ್ಲು. ಹದಿನೈದು ಹೋಗಿ ಹದಿನಾಕು ಆಯ್ತು. ಒಂದೆರಡಾದ್ರ ಭಾರಾಡಿ ಅತ್ತಾರು. ಚಿನ್ನಿಮಾತ್ರ ವಾರೊಪ್ಪತ್ತು ಹಾಸಗಿ ಹಿಡಿದಿದ್ಲು.

ಇರೋ ಮಾರುದ್ದ ಗುಡಿಸಲೊಳಗೆ ಕೋಳಿಮರಿಹಂಗೆ ತುಂಬಿದ್ದ ಯಾರದೋ ಮೂಗು, ಇನ್ನ್ಯಾರದೋ ಕಿವಿ, ಯಾವುದರದೋ ಗಾಯ ಆಗಿ ಕೀವು, ಹೇನು, ಸೀರು ಬರಿಮೈ ಮೇಲೆ ಊರುತುಂಬ ಅಡ್ಡಾಡ್ತಿದ್ವು. ತಲಿಗ ಎಣ್ಣಿ ಇಲ್ಲದೆ ಮೈಗೆ ಸ್ನಾನವಿಲ್ಲದೆ

ಅಡ್ನಾಡಿ ದನದಂಗೆ ಅಡ್ನಾಡ್ತಿದ್ವು, ತಲಿಯೊಳಗೆ ಕೆರೆದು ಕೆರೆದು ಗಾಯ ಗಳಾಗದೇ ಇರಾಕ ಸಾಧ್ಯವ. ಕೆಲ ಹುಡುಗಿಯರಿಗಂತು ದಂಡ್ಯಪ್ಪಗ ಜಡಿ ಬೀಡೊಹಂಗೆ ಜಡಿಕಟ್ಕೊಂಡಿದ್ವು. ಊರಾಗಮಂದಿ "ಛೇ ಈ ವಯಸ್ಸಿಗಾಗ್ಲೆ ಯಲ್ಲಮ್ಮ ಬಂದಾಳ" ಮಾತಾಡ್ಕೊಂಡಿದ್ರು ಕಾಲನಿಲ್ಲದಂಗೆ ಮುಂದೆಹೋಯ್ತೊ ಸತ್ತವ್ರು ದೇವರಿಗೆ, ಉಳದೋವ್ರ ನಮಗೆ ಅಂತೇಳಿ ಅಂವ ನಿರ್ಧಾರ ಮಾಡಿದ್ದ.

ಮೆಚ್ಚಿತಂದ ಎಮ್ಮಿ ಮಣಕ ಹಾಕ್ತು ಅನ್ನೋಹಂಗೆ ಎರಡನೇ ಹೆಂಡತಿ ಪೀಕಿಗು ಆರಂಭಕ್ಕ ಆರು ಹೆಣ್ಣು ಕೂಸು ಹುಟ್ಟಿದವು. ಗುಡಿಸಲು ಸಾಕ ಆಗದಕ್ಕೆ ತಟ್ಟಿ ಸರಿಸಿದೊಡ್ಡದ ಮಾಡಿದ. ದುಡಿಯಾಕ ಆಗದೆ ಮಂಗ್ಲ್ಯ ಒದ್ದಾಡತೊಡಗಿದ. ಪಕ್ಕದಾಗ ಅವನಣ್ಣ ವರ್ಷಕ ಒಂದು ಹೊಲ ಖರೀದಿಸಿದರೆ ಇವನಿಗೆ ಶನಿಬಡದಂಗಿತ್ತು. ಅದಕ್ಕ, ತಾಂಡದ ಮಂದಿಮಾತ ಕೇಳ್ಕಂಡು ಹೆಂಡಕುಡದು ಅಣ್ಣನಿಗೆ ಹೆಣ್ತೆ, ಹೆಂಡ್ರು ಅಂತ ಬೋಯ್ಯಾಕ ಸುರುಮಾಡಿದ. ಅವರಾದ್ರು, ಎಷ್ಟು ದಿನಾಂತ ಸಹಿಸಿಕೊಂಡಾರು. ಹಿಡ್ಕಂಡು ಅಂಡು ಹರಿಯೋ ಮಟಹೊಡದ್ರು. ಅವರಿಬ್ಬರ ನಡಕ್ಕ ದೊಡ್ಡ ಬಿರಕು ಬಿಟ್ಟಿತು. ಸಂತುನಾಯ್ಕ, ಅವನ ಮುತ್ತಜ್ಜನ ಐವತ್ತು ಎಕ್ಕರೆ ಜಮೀನು ಮಾರಿ ಬಂದ ರೊಕ್ಕದಾಗ ತಾನೊಂದು ಮಾಳಗಿಮನಿ ಹಾಕ್ಕೊಳೋದಾಗಿ ಯೋಜನೆ ಮಾಡಿದ. ರೊಕ್ಕತಗಂಡ ನಾ ಏನಮಾಡಲಿ ಅಂತೇಳಿ ಮಂಗ್ಲ್ಯನೂ ಅವನ ಕೂಡ ಮನಿಹಾಕಿಸಿದ. ಒಂದ ಕೋಣಿ, ಅಡ್ಡ ಗ್ವಾಡಿ ಹಿಂದ ಒಲಿ, ಎಡಕ್ಕೆ ಕಿಟಕಿ ಮ್ಯಾಲೆರಡು ಬಾದಳ. ಆಯ್ತುಮನಿ.

ಮಳಿಗಾಲಕ್ಕ ಬಾದಳಮುಚ್ಚಿದ್ರಂತು ಇಡಿ ಮನಿ ಕತ್ಲಕ್ವಾಣಿ. ದೀಪಹಚ್ಚಂಡ ಅಡ್ಡಾಡಬೇಕ. ಮಾಳಿಗೆ ಮೇಲಿನ ಮಣ್ಣಿನ ಮುದ್ದಿ ಕರಗಿ ಹುಲ್ಲಿನ ಬುಡದಿಂದ ನೀರು ಮನಿತುಂಬ ಸೋರುತ್ತಿತ್ತು. ಚಿನ್ನಾನ ಅಪ್ಪ ಏಣಿ ಹಾಕ್ಕೊಂಡು ಮ್ಯಾಲಹತ್ತಿ ಹುಲ್ಲು ಕಿತ್ತು ಮಣ್ಣು ಹಾಕಿ ಬಿಗಿ ಮಾಡ್ತಿದ್ದ. ಹಂಗೇ ಮಂಗ್ಲ್ಯಾನೂವೆ. ಅವರಿಬ್ಬರ ಜಗಳ ತಾರಕಕ್ಕೇರಿದಾಗ ಸಂತುನಾಯ್ಕನಿಗೆ ಅನಿವಾರ್ಯವಾಗಿ ಮಾಳಗಿ ಮನಿಬಿಟ್ಟು ಸೇವಾಭಾಯನ ಮಟ್ಕೋವಮುಂದಿನ ಕಣದಾಗ ಗುಡಿಸಲು ಹಾಕಿಕೊಂಡ. ನಂತರ ಅವ ಚಿಕ್ಕಪ್ಪನ ಹೆಣ್ಣುಮಕ್ಕಳ ಜೊತೆಗಿನ ಚಿನ್ನಾನ ಒಡನಾಟ ಕಮ್ಮಿ ಆಯ್ತು. ಮುಂದೆ ಅಂವ, ಊರಬಿಟ್ಟು ಮತ್ತೊಂದುರಿಗೆ ಓದಾಕಂತೇಳಿ ಹಾಸ್ಟಲಿಗ ಹ್ವಾದ ಮೇಲಂತು ತಾಂಡದೊಡನೆ ಸಂಪರ್ಕ ಕಮ್ಮಿ ಆಗ್ತಾ ಹೋತು. ಆದ್ರ ರಜೆಗೆ ಬಂದಾಗ ಒಮ್ಮೆ ಎಲ್ಲರ ಬಗ್ಗೆನೂ ಕೇಳಿ ತಿಳ್ಕಂತಿದ್ದ.

ತಾಂಡದಮಂದಿ ಎಷ್ಟು ಕೂಲಿ ಮಾಡಿದ್ರು ಹೊಟ್ಟೆ ಬಟ್ಟೆಗ ಸಾಲ್ತಿರಲಿಲ್ಲಾ. ಸುತ್ತಲ ಊರುಗಳಿಗೆ ಮುಂಜಾನೆ ಬೆಳಕುಹರಿಯೋದ್ರಾಗ ಕೈಯಾಗ ಎಲ್ಡುರೊಟ್ಟಿ ಹಸಿ ಮೆಣಸಿನಕಾಯಿ ಕಿವುಚಿ ಆಟು ಉಪ್ಪಹಾಕ್ಕೊಂಡು ಹಿಂಡಿ ಮಾಡ್ಕಂಡು ಉಣ್ಕೊಂತ, ತಲಿಮ್ಯಾಲೆರಡು ಮಧ್ಯಾಹ್ನದ ರೊಟ್ಟಿಗಂಟು ಸಂಜಿಕೌಳಾದಿಂದ ಮನಿಗ ವಾಪಾಸ ಆಗ್ತಿದ್ರು. ಎಟ ದುಡದ್ರು ಸಾಲ್ದಕ್ಕೆ ಒಂದೂವರಿ ರೂಪಾಯಿ ಕೂಲಿ ಕೊಡ್ತೀನಿ, ವಾಸಕ್ಕೆ ಲೈನಗಳಾದವಂತ ರಾಮುಮೇಸ್ತ್ರಿ; ಖಂಡೇಖಾನ' ಕಾಫಿ ಎಸ್ಟೇಟಿಗ ಕರ್ಕಂಡ ಹೋದ. ಅದೇಮದ್ದು ತಾಂಡದಮಂದಿ ಬೀಜ ಹರಿಯಾಕ ಹೋಗಿದ್ದು. ಕೈ ಕಾಸು ಕೂಲಿ ಸೇರ್ಸಿ ಹೋಳಿ ಹುಣಿಮಿಗ ಬಂದಾಗ ಉಗಾದಿ ಹಬ್ಬಕಂತೇಳಿ ಏಳೆಂಟುರೂಪಾಯಿ ಕೈಯೊಳಗ ಇಟ್ಕಂಡೆ ಬಂದಿದ್ರು. ಆವಾಗ ರುಚಿಕಂಡ ಮಂದಿ ಮಳಿಗಾಲಕ್ಕೂ ಹೋಗಾಕ ಸುರು ಹಚ್ಕೊಂಡಿದ್ರು. ಅದ್ರಾಗ ನಮ್ಮ ಚಿಗಪ್ಪನ ಮಗಳು ಚಿಮ್ನಿ ಎತ್ತಿದ ಕೈ. ಸಣ್ಣೋವ್ರ ದೊಡ್ಡೋವನೆಲ್ಲಾ ಕಟ್ಕಂಡು ದೊಡ್ಡ ಪೆಟಾರಿಯೊಳಗ ತಾಟು -ಲೋಟ, ಪಾತ್ರೆ ಪಡಗ ಹಾಕ್ಕೊಂಡು ಜ್ವಾಳದ ಗಂಟು, ನುಚ್ಚಕಿ ಚೀಲ ಹೊತ್ಕಂಡು ಕಾಪಿಸೀಮಿಗ, ಹೊಂಟೆ ಬಿಟ್ಟಿದ್ಲು. ಅವ್ವ-ಅಪ್ಪಗ ಕಷ್ಟಕೊಡಬಾರದು ಅಂತೇಳಿ ಸೀಮಿನೆಲ್ಲಾ ಒಂದ ಮಾಡಿ ದುಡಿತಿದ್ಲು. ದೇವರು ಅದೇನ ಬುದ್ಧಿ ಕೊಟ್ಟಿದ್ನೊ ತಾಕತ್ತು ಕೊಟ್ಟಿದ್ನೊ. ಚಿಮ್ನಿ ಮಾತ್ರ ಊರಿಂದ ಹೊರಗೆ ಇರ್ತಿದ್ಲು. ಕಾಫಿ ಸೀಮೀಯೊಳಗೆ ಎರಡು ಹುಡುಗಿಯರು ಕಾಯಿಲೆ ಬಿದ್ದು ಸತ್ತಹ್ಯಾದ್ವು, ಊರಾಗ ನಾಕೈದು ಸತ್ತಹ್ವಾದ್ವು, ಎಲ್ಲಾನೂ ನೋಡಿ ಗಟ್ಟಿಯಾಗಿದ್ದ ಚಿಮ್ನಿಗ ಹುಟ್ಟೆ ಒಂದು ಸವಾಲಾಗಿತ್ತು. ಚಿಮ್ನಿಗಿಂತ ದೊಡ್ಡವಳಾದ ಪಾಪಿ ಋತುಮತಿಯಾಗ್ತಿದ್ದಂಗೆ ಹೀರೆಹೆಣ್ತಿ ಚಿನ್ನಿ ಸಂಬಂಧಿಕರಿಗೆ ಕೊಟ್ಟುಮದ್ವಿ ಮಾಡಿದ್ರು. ಅದುಬೇರೆ ಸಾಲ ಆಗಿತ್ತು. ಎರಡನೇಯವಳಾದ ಚಿಮ್ನಿ ಅವಳಿಗಿಂತ ಚಿಕ್ಕವಳು ಹದಿಮೂರು ತಂಗಿಯರು ಮತ್ತು ಅವಳ ಚಿಕ್ಕಮ್ಮನ ಏಳು ಹೆಣ್ಣು ಹುಡುಗಿಯರು ಒಟ್ಟು ಇಪ್ಪತ್ತು ಜನರು ಒಂದೇ ಕುಟುಂಬದಲ್ಲಿ ವಾಸವಾಗಿದ್ದರು. ಅವಳಪ್ಪ ಕುಡದು ದೊಡ್ಡಪ್ಪನ್ನ ಜೊತೆಗೆ ತೆಕ್ಕಮಾರಿ ಬೀಳ್ತಿದ್ದಾ ಅದನ್ನ ಬಿಡಸಾಕ ಅಕೀನ ಹೊಕ್ಕಿದ್ಲು. ಹೆಂಡದಂಗಡಿಯೊಳಗ ಒಮ್ಮೊಮ್ಮೆ ಜಗಳ ತಕ್ಕೊಂಡು ರಾಣರಂಪಮಾಡಿರ್ತಿದ್ದಾ ಅದನ್ನು ಅಕೀನ ಬಗೆ ಹರಿಸಬೇಕಿತ್ತು. ಹೊಲಮನಿ, ಕಣ, ಕೂಲಿ, ಸಂತಿ, ವ್ಯವಹಾರ ಎಲ್ಲಾನು ಅಕಿಮ್ಯಾಲ ಬಿದ್ದಿತ್ತು.

ನನ್ನ ಚಿಕ್ಕಪ್ಪ ಮಂಗ್ಲ್ಯಾನಾಯ್ಕನಿಗೆ ಅವಳೊಬ್ಬ ಗಂಡು ಮಗನಂತಿದ್ಲು. ಯಾವತ್ತಾದರು ಒಂದದಪ ಅವನು ಹೊಲಕ್ಕೆ ಗಳೆ ತಗೊಂಡು ಹೋದ್ನಂದ್ರ,

ಎತ್ತೆಗಳೆನಾದ್ರು ರಗಳಿತಗದ್ರ ಹೆಡಮುರಗಿ ಕಟ್ಟೊಹಂಗೆ ಹೊಡದು ಹಣ್ಣಗಾಯಿನಿರ್ಗಾಯಿ ಮಾಡಿ, ಅರ್ಧಕ್ಕೆ ಗಳೆ ಬಿಟ್ಟ ಮನಿಗ ಬಂದ ಬಿಡ್ತಿದ್ವ. ಐದಾರು ವರ್ಷದಾಗ ಎರಡು ಎತ್ತಗಳ ಜೀವ ಹೋಗೋವರಿಗ ಹೊಡದಿದ್ವ. ಸತ್ತಿಂದ ಎಳ್ಕಂಡ ಹೋಗಿ ಕೋಡಿಸರದಾಗ ಬಿಸಾಕಿ ಬಂದಿದ್ವ. ಮಂದಿಮಾತು ಕೇಳಿ ಕಾಲುತುಳಿದು ಜಗಳ ತಗದು ಅವನಣ್ಣ ಸಂತುನಾಯ್ಕನನ್ನ ಪೋಲಿ ಸ್ಟೇಷನ್ ಮೆಟ್ಟಿಲು ಹತ್ತಿಸಿದ್ವ. ಅವನ ಸ್ನೇಹಿತನಂತೆ ನಾಟಕ ಮಾಡಿ ಅವನ ಎರಡನೇ ಹೆಣ್ತಿದೂರದ ಸಂಬಂಧಿ ಪೂರ್‍ಯ, ಆಕಿಕೂಡ ಸಲಗಿ ಬೆಳಸೋದಲ್ದ, ಇಡೀ ಊರಮಂದಿಗ ತಲಿನೋವಾಗಿದ್ವ. ಅಂವ, ಮಂಗ್ಲ್ಯಾನ ಮಾರ್ಗದರ್ಶಕ, "ಬರಿ ಸ್ಟೇಷನಿಗ ಒಯ್ದ್ರ, ಏನ್ ಪ್ರಯೋಜನ ಮಂಗು, ಕೋರ್ಟ್ ಮೆಟ್ಟಿಲು ಹತ್ತಿಸಬೇಕು. ಆಗ್ಲೆ ಬುದ್ಧಿ ಬೆಟ್ಟಿಯಾಗೋದು. ಮತ್ತೊಂದಸರ್ತಿ ನಿನ್ನ ಸವಾಸಕ ಬಂದಿರಬಾರ್‍ದು"ಜಬರದಸ್ತ್ ಬುದ್ಧಿಹೇಳಿದ್ವ." ಹೌದ, ನನ್ನ ಏನ ಮಾಡಂತಿ." ಮಂಗ್ಲ್ಯಾ ಹಲ್ಲು ಕಿರಿದು ಕೇಳಿದ. "ಮತ್ತೇನು, ಕುರಿ, ಕೋಳಿ ಮ್ಯಾಲಿಂದ ಜಗಳ ತಗಿ, ಹೆಂಗೂ ನಿನ್ನ ಹೊಡಿತಾರ, ನೀನೆ ಕಲ್ಲುತಗಂಡ ತಲಿಹೊಡ್ಕ ಆಮೇಲಿಂದ ನಾ ನೋಡ್ಕಂತೀನಿ". ಪೂರ್‍ಯನ ತಲಿತುಂಬದ. ಅವತ್ತೆ ಸಂಜಿ ಮುಂದ ಅವನಣ್ಣನ ಕುರಿ ಮೇರಿ ಮೇಲೆ ಮೆಯ್ತಿದಿದ್ದು ಅವನ ಹೊಲದೊಳಗೆ ಪ್ರವೇಶಿಸುತ್ತಿದ್ವಂಗೆ ಬಾಯಿಗ ಬಂದಂಗೆ ಬೊಯ್ದು ಹಿಡಿಯೋಕ ಬಂದ ಹುಡಗನ್ನ ಹಿಡಿದು ಹೊಡದಿದ್ವ ಮಂಗ್ಲ್ಯ. "ಹಾಳಸೂಳಿಮಗ ಸತ್ತಹೋಗ್ಲಿ" ಬೋಯ್ಕಂಡು ಸುಮ್ಮನಿದ್ವ ಸಂತು. "ಸಂಜೀಗ ಏನಂದ್ರು ಯಾರು ಚಕಾರೆತ್ತ ಬ್ಯಾಡ್ರಿ" ಅಂತೇಳಿ ತಾಕೀಮಮಾಡ್ವ. ಆದ್ರ, ಹೆಂಡ ನೆತ್ತಿಗೇರಿದೊಡನೆ ಸಂಬಂಧವನ್ನೆ ಮರತ ಮಂಗ್ಲ್ಯ ರಾಗಿ ಜಿಡ್ಡಿನಂತೆ ಕೈ ತೊಳದ ಹಿಂದಬಿದ್ದಿದ್ವ. "ಏಯ್, ಏನನೋಡ್ತೀರ ಆಗೋದ ಆಗ್ಲಿ ಹೊಡಿರಲೇ" ತಾಳ್ಮೆ ಕಳ್ಕಂಡಿದ್ವ ಸಂತು ಮಕ್ಕಳಿಗೆ ಹೇಳಿದ್ದೆ ತಡ ಕೇಳಿ ಕೇಳಿ ರೋಷ ಹೋಗಿದ್ವ ಹುಡುಗರು ಕ್ಷಣದಾಗ ಹೊಡದು ನೆಲಕ್ಕುರುಳಿಸಿಬಿಟ್ರು. ಕಿಚೋ ಅಂತೇಳಿ ಇಪ್ಪತ್ತಕ್ಕು ಇಪ್ಪತ್ತು ಹುಡುಗಿಯರು ನುಗ್ಗಿದ್ದರು. ತಾಂಡಕ ತಾಂಡನೆ ಬಿಡಸೋ ಗೋಜಿಗೆ ಹೋಗದೆ ದೂರದಾಗ ನಿಂತ್ಕಂಡು. "ಎಯ್, ಆ ಸಂತುನ ಹುಡುಗರ ಉಪಟಳ ತಾಂಡದಾಗ ಭಾಳ ಆಗೈತಿ ಬಿಡು. ಮಂಗುನ ಹುಡುಗಿಯರೇ ಅವರನ್ನ ಹದ್ದುಬಸ್ತಿಗ ತರಬೇಕೆ ವಿನಃ ಯಾವನ ಕೈಯಿಂದ್ಲೂ ಆಗಲ್ಲ. ಆ ಮಗ ಮಂಗು ಗೊಟಕ್ ಅನಬೇಕು ಮಜ ಇರುತ್ತೆ. ಇಡಿ ಮನಿಮಂದಿನ ಒಳಗಹಾಕ್ತಾರ, ದೀಪ ಹಚ್ಚಕ ಯಾರು ಇಲ್ಲದಂಗಗಾಗುತ್ತೆ ನೋಡು" ಎಲ್ಲರ ಬಾಯಿಯೊಳಗು ಇವೇ ಮಾತುಗಳು. ಯಾಕಂದ್ರ ಸಂತುನ ಮಕ್ಕಳು ದುಡದು ಉಣ್ಣಕ ಹತ್ತಿದ್ರು. ವರ್ಷಕೊಂದ್ರಂಗ ಹೊಲ ಹಿಡಿತ್ತಿದ್ರು

ಇವೇ ತಾಂಡದ ಮಂದಿ ನಿದ್ದಿ ಕೆಡಿಸಿದ ವಿಚಾರಗಳು. ಒಂದೆರಡು ಮಂದಿ ಸಾಲಿಗೂ ಸೇರಿಕೊಂಡು ಮುಂದ ಮುಂದ ಹೊಕ್ಕಿದ್ರು ಹೆಂಗಾನ ಮಾಡಿ ಅವರವರಿಗೆ 'ಛೂ' ಬಿಟ್ಟು ಮಜ ನೋಡ್ತಿದ್ರು. ಲುಕ್ಷಣ ಯಾರದಾತು ಅಂತ ಇಬ್ಬರು ಅಣ್ಣ ತಮ್ಮ ಯೋಚನೆನೆ ಮಾಡ್ಲಿಲ್ಲ. ಹಂಗ ಮಾಡಾಕ ಮಂದಿನೂ ಬಿಡ್ಲಿಲ್ಲಾ. ಕಡೀಗ ಮಂಗ್ಲ್ಯಾನಾಯ್ಕ ಊರ ಮುಂದಿನ ಹತ್ತ ಎಕ್ಕರೆ ಜಮೀನಿನಲ್ಲಿ ನಾಕ ಎಕ್ಕರೆ ಮಾರಿ ಕೋರ್ಟಿನ ವ್ಯಾಜ್ಯ ಆಡಿದ. ಅಲ್ಲಿಗೂ ಪೂರ್‍ಯಗ ನೆಮ್ಮದಿ ಸಿಗಲಿಲ್ಲಾ. "ಇವನೇನೊ ಕಳ್ಕಂಡ ಆದ್ರ ಆ ಸೂಳಿಮಗಗ ಏನೂ ಆಗಲಿಲ್ಲಾ. ತಿಂಗಳ ಪೂರ್ತಿ ಕತ್ತಿ ದುಡದಂಗ ದುಡುದು ಕೊನಿಗ ಕೋರ್ಟಿಗೆ ಹಾಜರಾಗಿ, ಕೇಸು ಗೆದ್ದರು" ಗೊಣಗಿಕೊಂಡ. ಈ ಜಂಜಾಟದಲ್ಲಿಯೇ ಚಿಮ್ನಿ ರೋಪಿ ಹೋಗಿದ್ಲು. "ಸಂಬಂಧಕ್ಕ ಬೇಲಿನೆ ಇಲ್ವಾ, ಯಾಕಿಂಗ, ಅಪ್ಪ, ದೊಡ್ಡಪ್ಪ ಜಗಳ ಕಾಯಬೇಕು? ಹಗಲು ರಾತ್ರಿ ಒಂದ ಮಾಡಿ, ಹರದು ಮೈಕಾಣೋ ಅರವಿ ಹಾಕ್ಕಂಡು ಮಂದಿ ಮಾತಾಡೋದನ್ನ ಕೇಳ್ಕಂಡು, ಸಹಿಸಿಕೊಂಡು ಮರ್ಯಾದಿಯಿಂದ ಜೀವನ ಮಾಡಾಕಂದ್ರು...?" ಅವಳ ಎದಿಯೊಳಗಿನ ಅನುಮಾನಗಳಿಗೆ ಉತ್ತರಿಸೋಕೆ ಯಾರು ಇರ್ಲಿಲ್ಲಾ. ಅಕಿ, ಒಳಗೊಳಗೆ ನೊಂದು ಸುಡ್ತಾ ಹೊಕ್ಕಿದ್ಲು.ಒಂದು ಒಳ್ಳೆ ದಿನದ ಕನಸು ಕಾಣತೊಡಗಿದಳು:

ಅದೆಂಥ ಕನಸು, ಆಕಾಶಮಾರ್ಗದೊಳಗ ಕುದುರಿಸವಾರಿ ಮಾಡ್ಕೊಂಡು ಮನ್ಮಥನಂತ ರಾಜಕುಮಾರನೊಬ್ಬ ಭೂಮಿಗ ಬಂದ. ಅಜಾನುಬಾಹು, ಭೂಮಿ ಅಗಲದ ಎದಿಮ್ಯಾಲ ಗರಕಿ ಹೊಲ್ಲಿನ ಪೊದಿಯಂತ ಕೂದ್ಲು, ಚಿಗರ ಮೀಸಿ, ತೊಲಿಕಂಬಂದ ರಟ್ಟಿಗಳು. ಯಾವ ಸೀಮೆಯವನೋ ಯಾವನಾಡಿನವನೋ ಏನೋ ಆ ಸುರಸುಂದರಾಂಗ. ಹತ್ರ ಬರ್ತವ್ನೆ, ಇನ್ನೂ ಹತ್ರ ಬಂದೆ ಬಿಟ್ಟ. ನಾಚಿಕೆಯಿಂದ ಮುಖಮುಚ್ಕೊಂಡೆ, ಅಂವ, ಬಿಡವಲ್ಲ. ಎರಡೂಕೈಗಳಿಂದ ಮುಚ್ಚಿದ ಕೈಗಳನ್ನು ಮುಟ್ಟಿದ. ಮೈಯೆಲ್ಲಾ ವಿದ್ಯುತ್ ಸಂಚಾರಗೊಂಡಂತಾಗಿ ದಿಕ್ಕೆ ತಿಳಿದಂಗಾತು. ತುಟಿಗಳು ಕಂಪಿಸತೊಡಗಿದವು. ಮೈನಡಗುತಿತ್ತು, ಕಣ್ಣುಗಳು, ಮತ್ತೆ ಮತ್ತೆ ಅವನ ಯೌವ್ವನದ ಹಂಗಾಮನ್ನ ಹೀರುತ್ತಿದ್ದವು. ಒಂದಕಡೆ ನಾಚಿಕೆ, ಮತ್ತೊಂದ ಕಡೆ ತೀರಲಾರದ ಬಯಕೆ, ನೋಡಿದಷ್ಟು ದಾಹ ಹೆಚ್ಚಾಗ್ತಲೆ ಇತ್ತು. ಅಲ್ಲಿ ನಾವಿಬ್ಬರೆ, ನಾನು ರಾಜಕುಮಾರಿಯಾಗಿದ್ದೆ ಅವನು ರಾಜಕುಮಾರ. ಅವನು ಗಂಡು ಹಂಸದಂತೆ ನನ್ನ ಸೌಂದರ್ಯವನ್ನು ಹೀರಲು ಬಂದೊಡನೆ ಕೊಸರಿಕೊಂಡು ಓಡಿದೆ. ಅಬ್ಬಾ, ಈ ಗಂಡಸರು, ಎಷ್ಟೊಂದು ನಿರ್ಲಜ್ಜಿತರು. ಅದೇನ

ಅವಸರ, ಅದೇನ ಕಾತರ. ಒಂಟಿ ಹೆಣ್ಣು ಸಿಕ್ಕರೆ ಕಚ್ಚಿ ತಿಂದು ರುಚಿನೋಡೆ ಬಿಡೋನ ಎಂಬ ಹಪಹಪಿ. ನಾನು ಎಷ್ಟೇ ಆದರೂ ಬೀಜವನ್ನೂ ಹೊರುವ ಭೂಮಿತಾನೆ? ಒಮ್ಮೆ ಬಿತ್ತಿದ ಬೀಜ ಮೊಳಕೆಯಾಗಿ, ಟಿಸಲು ಹೊಡೆದು, ಚಿಗುರಿ ಹೆಮ್ಮರವಾಗುವುದರೊಳಗೆ, ನಾನೆ ಗಂಭೀರವಾಗಿರಬೇಕು. ಕ್ಷಣಕಾಲ ಮೈಮರೆತರೆ ಆಗಬಾರದ್ದೆ ಆಗಿ ಅನಾಹುತವಾಗಿ ಬಿಡುತ್ತದೆ ಆಗ? ಹೊಣೆ ಹೊರಲು ನಾನೆ ಸಿದ್ದಳಿರಬೇಕು. ಅವನ ಕಡೆ ಸಮಾಜ ಬೆರಳು ಮಾಡಿ ತೋರಿಸುವುದಿಲ್ಲ, ನೀನು ಹೆಣ್ಣು, ಗಂಭೀರತೆ ನಿನ್ನೊಳಗಿರಬೇಕು. ಸಾವಿರಾರು ಸವಾಲುಗಳು, ಅವನ ಸಲುವಾಗಿ ಅವೆಲ್ಲವನ್ನು ಎದುರಿಸಲು ಸಿದ್ಧ, ಅವನ ಸ್ಪರ್ಶದಲ್ಲಿ ಅದೆಂಥ ಮೋಡಿ ಇದೆ, ನನ್ನ ಅಂಗಾಂಗಳೆಲ್ಲವೂ ಕಾವೇರಿದ್ದವು, ನಾನು ನಾನಾಗಿರಲಿಲ್ಲಾ. ನಾನು ಸೋತಿದ್ದೆ ಅವನು ನನ್ನಾಳಕ್ಕೆ ಆವರಿಸಿದ್ದು, ನನ್ನೊಳಗೆ ಬೇರು ಬಿಟ್ಟಿದ್ದ. ಇದು ನನ್ನ ದೌರ್ಬಲ್ಯವೋ, ದುರ್ಭಾಗ್ಯವೋ ಅವನನ್ನ ಕಳ್ಕೊಳೋದಕ್ಕೆ ಮನಸ್ಸು ಒಪ್ಪಲಿಲ್ಲ ಬದಲಾಗಿ ಪೂರ್ತಿಯಾಗಿ ಅವನೊಳಗೆ ಲೀನವಾಗಿತ್ತು. ಅದೇನು ವಶೀಕರಣ ಕಲ್ತವರೋ ಈ ಗಂಡಸರು ಏಕಾಂತದೊಳಗೆ ಬೆನ್ನು ಬಿಡದೆ ಕಾಡ್ತಾರೆ.

ಚಿಮ್ನಿ ಕಣ್ಣು ಬಿಟ್ಟಾಗ ಎದಿನೋವು ಹೆಚ್ಚಾಗಿತ್ತು. ಉಸಿರಾಟ ಜಾಸ್ತಿಯಾಗಿತ್ತು, ಕೂಗೋದಕ್ಕೆ ಉಸಿರಿಲ್ಲದೆ, ಸಾಯೋದಕೂ ಆಗದೆ ಕೈಕಾಲು ಬಡಿತಾ ಇದ್ಲು. ಪಕ್ಕದಲ್ಲಿ ಮಲಗಿದ್ದ ಅವಳವ್ವ, ಯಾಕವ್ವ ಏನಾತು? ಅಲುಗಾಡಿಸಿ ಎಚ್ಚರಿಸಿದ ಮೇಲೆ ವಾಸ್ತವಕ್ಕೆ ಬಂದಳು. ನೋವಿನೊಳಗೂ ಒಮ್ಮೆ ಮುಗುಳ್ನಕ್ಕು ನನಸಾಗದ ಕನಸನ್ನು ಮತ್ತೆ ಅನುಭವಿಸಲು ನಿದ್ದೆಗೆ ಜಾರಬೇಕೆಂದರೆ ಪಕ್ಕದ ಅವಳ ದೊಡ್ಡಪ್ಪನ ಮನೆ ಹ್ಯಾಟಿ, ಕೋ ಕೋ ಕೋ..... ಎಂದು ಐದು ಗಂಟೆಯಾದದ್ದನ್ನು ಸಾರಿ ಹೇಳಿತ್ತು. ನಸುಕಿನಲ್ಲೇ ರಾಗಿ ಕೊಯ್ಯದಕ್ಕೆ, ಸಿವುಡುಕಟ್ಟೋದಕ್ಕೆ ಹೋಗಬೇಕಿದ್ದ ಮನಿಮಂದಿ ತಮ್ಮ ಪಾಡಿಗೆ ತಾವು ರೊಟ್ಟಿಸುಡಾಕ, ಚಹ ಕಾಸಕ, ಜೋಳದ ನುಚ್ಚು ಒಲಿಮ್ಯಾಲ ಬೇಯಿಸಾಕ ಸುರುಮಾಡ್ಕಂಡಿದ್ರು. ಮನಿತುಂಬ ಹೆಣ್ಣಬೋಳಿಗಳೆ ಇದ್ದಿದ್ಕ ಯಾರು ಯಾರ ಮೇಲೆ ಹೇಳದೆ ಅವರವರ ಪಾಡಿಗ ಅವರವರ ಕೆಲ್ಸ ಮಾಡ್ಕೊಳ್ತಿದ್ರು. ಉಳಿದ ಚಿಕ್ಕೊವು ಎಮ್ಮಿ ಹೊಡ್ಕಂಡು ಕೆರಿದಂಡಿಗ ಹೊಂಟ್ರು ಒಬ್ರೋ, ಇಬ್ರು, ತೊಗರಿ ಪುಳ್ಳಿಯಿಂದ ಕಟ್ಟಿದ ಬರ್ಲಿಂದ ನೆಲಾನ ಪರಪರಾಂತ ಗುಡಿಸಿ, ಎಮ್ಮಿಕಾಲಿಂದು, ಎತ್ತುಗಳ ಕಾಲಿಂದ ಸಗಣಿನೆಲ್ಲಾ ಗುಡಿಸಿ ದೊಡ್ಡಪುಟ್ಟಿಗ ತುಂಬಿಸ್ಸಿ ಮತ್ತೊಬ್ಬಳ ತಲಿಮ್ಯಾಲ ಹೊರಸ್ತಿದ್ಲು.

ಮಂಗ್ಲ್ಯಾ ಮಾತ್ರ ಹಾಸಗಿ ಮ್ಯಾಲಿಂದ್ಲೆ, ಅಜುಬಾಜಿನ ಅವನ ಒರಿಗೆಯ ಗಂಡಸರೆಲ್ಲಾ ತಾವತಾವೆ ಎದ್ದು ಕಸ ಮುಸರಿ ಮಾಡ್ತಿರೋದ ನೋಡಿ ಖುಷಿಯಿಂದ,

ತನಗ ಆ ಪಾಡಿಪಾಟ್ಲೆ ಇಲ್ಲ. ಹೆಣ್ಣಾದರೇನಂತೆ, ಗಂಡಮಕ್ಕಳಂಗೆ ಕೆಲ್ಸ ಬಗ್ಸಿ ಮಾಡ್ತಿದಾವಲ್ಲ ಇನ್ನೇನು, ಗಂಡಸಾದ್ರೆ, ಮದ್ವಿಮಾಡಿಸಿ, ಅವನಿಗೆ ಆಸ್ತಿಯೊಳಗಿಂದ ಪಾಲಕೊಟ್ಟು, ನಾಳೆ ಅವನ ಹೆಂಡತಿ ಅದೆಂಥೊಳಬರ್ತಳೋ ಏನೋ? ಅವಳ ಕೈಯಾಗ ಥು...ಛಿ.." ಅನ್ನಿಸಿಕೊಳೋದಕ್ಕಿಂತ, ಈ ಹೆಣ್ಣು ಬೋಳಿಗಳನ್ನೆ ಮದ್ವಿ ಮಾಡಿ ಆಚೆದಬ್ಬಿದರೆ ಈ ಮನಿಆಸ್ತಿ ಎಲ್ಲಾ ನಮಗೆ ಉಳಿಯುತ್ತೆ, ನಾಕದಿನ ತಿಂದುಂಡು ಮೆರದಾಡಿದ ಮೇಲೆ ಅದ್ಯಾವನಾರೂ ಅನುಭವಿಸಲಿ, ' ಸತ್ತಮುಕಳಿ ಎತ್ತ ಬಿದ್ರೇನು?' ನೋಡೋರು ಯಾರು ಅಂಥೇಳಿ ಆಲೋಚನೆ ಮಾಡ್ತಲೇ ಕಿಸೆಯೊಳಗಿಂದ ಫೈಜಬೀಡಿ ತಗೊಂಡ ಬೆಂಕಿ ಗೀರಿ ಹಲ್ಲಿಗೆ ಕಚ್ಕೊಂಡು ಹೊಗೆ ಉಗಳ ತೊಡಗಿದ. ಗದ್ಲ ಇಲ್ಲದೆ ಕೆಲಸ ಮಾಡ್ತಿರೋದನ್ನ ನೋಡಿ ಮನದೊಳಗೆ ನಕ್ಕ. "ಬೇವರ್ಸಿಗಳು, ಪಕ್ಕದ ಮನಿಯೊಳಗೆ ಮೂರ ಅದಾವ ಮೂವತ್ತು ಆಡ್ದಂಗ ಆಡ್ತವೆ, ಇನ್ನೂ ಆ ಹಿಂದಲ ಓಣಿಯೊಳಗಿನ ಹಟ್ಟನಾಯ್ಕನಿಗೆ ಆರೇಳು ಗಂಡು ಸೀಮ್ಯಾಗಿಲ್ದಂಗೆ ಆಡ್ತವೆ. ಮುಂಜಾನೆ ಎದ್ದೊಡನೆ ನೆಮ್ಮದಿ ಜೀವನ ಹಾಳಮಾಡ್ತವೆ, ಸಂಜಿಯಾದಿಂದ ಹೊಟ್ಟಿಗ ಹೆಂಡ ಬಿಳ್ತಿದಂಗೆ, ಕೈಯಾಗ ಬಡಗಿ ಬರ್ತವೆ. ಯಾರಪಾಡಿಗ ಹೋಗಲ್ಲ, ಅವರಾಗಿ ಬಂದ್ರಂತು ಬಿಡಂಗಿಲ್ಲ. ಬೇ ಚೈನಿ, ಬಾ ಇಲ್ಲಿ" ಕೂಗಿದ. ಏನೋ ಕೆಲ್ಸ ಮಾಡ್ತಿದ್ದೋಳು ಬಿಟ್ಯಾಕಿನ ಓಡಿ ಬಂದಿದ್ಲು. "ಏನಪ್ಪ, ಯಾಕ ಕರದಿ" ಅಂದ್ಲು, "ಏನಾತು, ಇಲ್ಲ ಅದಿರಲ್ಲ, ಹೊತ್ತಾರೆ, ರಾಗಿ ಸಿವುಡ ತಿರವಬೇಕು, ಇಲ್ಲಿಕ್ರ ಗಣಕಿ ಮುರದು ತೆನಿ ನೆಲದ ಪಾಲ ಆಕ್ಕಾವ್ರವ್ವ, ನೋಡುಹೋಗು, ಎಲ್ಲರನ್ನು ಹೊಂಡ್ಸು" ಅಂತೇಳಿ ತಾಕೀತು ಮಾಡಿದ. "ಅಯ್ಯ, ನಾನ ಅಂದ್ರೆಲ್ಲಿ ಹೊಕ್ಕಾರವರು, ನಿನ್ನ ಮಗಳು ಚಿಮ್ನಿ ಮಾತು ಕೇಳೋರು ಅಕಿ ಅದೇನು ಮಾಡ್ಯಾಳೋ ಮನಿಮಂದಿಗೆಲ್ಲಾ, ಅಕಿಮಾತಂದ್ರ ವೇದವಾಕ್ಯ ಎಲ್ಲರಿಗೂ, ಯಾರೊಬ್ಬರು, ವಿರೋಧ ಮಾಡಂಗಿಲ್ಲ, ಆಗಲ್ಲ ಅನ್ನೋದೇ ಇಲ್ಲ ಅಂತೀನಿ" ತಮಾಷೆಯಿಂದಲೆ ಹೇಳಿ ಅಲ್ಲಿಂದ ಓಡಿದ್ಲು. "ಏಯ್, ಆಕಿ ಮಗಳಲ್ಲ ನಂಗ, ಮಗ, ಆಕಿ ಮಾತು, ಕತೆ, ನಡೆನುಡಿ, ರೀತಿ ರಿವಾಜು ಎಲ್ಲಾ ಶುದ್ಧ ಅಂದಂತೆ ಮಾಡ್ತಳಾ, ಯಾರ ಮನಸ್ಸು ನೋಯಿಸೋದಿಲ್ಲ ಅಕ್ಕಂದಿರನ್ನು, ತಂಗಿಯರನ್ನ ಪಸಂದಾಗೆ ನೋಡ್ಕಂತಾಳ, ತಾಂಡದ ಮಂದಿ ಯಾರರು ಬೆಟ್ಟ ಮಾಡಿ ಹೇಳ್ಲಿ ಚಿಮ್ನಿ ಹಿಂಗಂತ ಅವತ್ತೆ ನಾನು ಮೀಸೆ ಬೋಳಸ್ಕಂತೀನಿ. ಅದ್ಯಾವ ಜನ್ಮದ ರಿಣಾನೋ ಏನೋ ನನ್ನವ್ವ ನಂತಾಯಿ ನನ್ನ ಹೊಟ್ಟೆಯೊಳಗೆ ಹುಟ್ಯಾಳ. ಮಲತಾಯಿ ಅನ್ನೋ ಭಾವನೆನೆ ಇಲ್ಲ. ಅವರವ್ವಗಾರು ಆಟುಸಿಟ್ಟು ಮಾಡ್ಕಂಡು ಮಾತಾಡ್ಯಾಳು ಚಿಗವ್ವಗಂತು ಏನೇನು ಹೇಳಲ್ಲ.

ಲಮಾಣಿ ಚಿಮ್ನಿ
ಆತ್ಮಚರಿತೆ

ಲೇಖಕರು

ಡಾ. ಶಿರಗಾನಹಳ್ಳಿ ಶಾಂತನಾಯ್ಕ

ಪ್ರಕಾಶಕರು

ಶ್ರೀ ಚೂಡಾ ಪ್ರಕಾಶನ

419/1, F131, ಮೊದಲನೇ ಮಹಡಿ, ವೀಣೆಶಾಮಣ್ಣ ರಸ್ತೆ,

ಮೈಸೂರು - 570 004

LAMANI CHIMNI AATHMA CHARITHE : written by Dr. SHIRAGANAHALLI SHANTHANAIK

Published by : **Shree Chooda Prakashana,** # 419/1, F131, First floor, Veeneshamanna Road, Mysore - 570 004

ಪ್ರಥಮ ಮುದ್ರಣ : 2012

ಪುಟಗಳು : 78

ಬೆಲೆ : 50/-

ಮುದ್ರಕರು : ತಾರಾ ಪ್ರಿಂಟರ್ಸ್, ಮೈಸೂರು

ಅರ್ಪಣೆ

ಪುರುಷನ ದೌರ್ಜನ್ಯದಿಂದ
ನಿರಂತರ ನಲುಗಿ
ದಮನಗೊಳ್ಳುತ್ತಿರುವ
ದನಿಗಳಿಗೆ.

ಪುಟ ತೆರೆಯುವ ಮುನ್ನ...

ಲಮಾಣಿ ಚಿಮ್ನಿ ಆತ್ಮಚರಿತೆ... ಬಹಳ ದಿನಗಳಿಂದ ನನ್ನ ಕಾಡುತ್ತಿತ್ತು. ಅನೇಕ ಸಲ ಒತ್ತಡದ ಬದುಕಿನಲ್ಲಿ ಏನನ್ನು ಬರೆಯಲು ಆಗುವುದಿಲ್ಲ. ದೆಹಲಿಯ ಗೆಸ್ಟ್‌ಹೌಸ್ ಒಂದರಲ್ಲಿ ಕುಳಿತು ಹಳೆಯ ಗೋಡೌನ್‌ನಲ್ಲಿದ್ದ ಸಾಮಾನುಗಳನ್ನು ಹೊರಹಾಕುವಂತೆ ಬರೆಯುವ ಪ್ರಯತ್ನ ಮಾಡಿದೆ. ಈ ಆತ್ಮಚರಿತೆ ಯಾರಿಗೂ ಸಂಬಂಧಪಟ್ಟದಲ್ಲ ಇದೊಂದು ಕತೆ, ಯಾರಿಗಾದರು ಅನ್ವಯಿಸದ್ದೆ ಆದರೆ ಇದೊಂದು ಕಾಕತಾಳೀಯ. ಈ ದೇಶದ ಕೋಟ್ಯಾಂತರ ಜನರಿಗೆ ತಿನ್ನಲು ಕೂಳಿಲ್ಲ, ವಾಸಿಸಲು ಮನೆಗಳೆ ಇಲ್ಲ. ದೆಹಲಿಯ ಫುಟ್‌ಪಾತ್‌ಗಳಲ್ಲಿ ಆಶ್ರಯವೇ ಇಲ್ಲದೆ ಪೋಲಿಸರ ಬೂಟಿನೇಟಿಗೆ ಬಲಿಯಾಗುತ್ತಿರುವವರು ಅನೇಕರು ಬದುಕಿನ ಬಗ್ಗೆ ಯೋಚನೆನೆ ಮಾಡುವುದಿಲ್ಲ. ಹಾಳು ಬದುಕೆ ಹೀಗೆ. ಕೆಲವರ ಕೈಗಷ್ಟೆ ಸಿಕ್ಕಿರುತ್ತದೆ. ಇನ್ನು ಕೆಲವರಿಗೆ ದಕ್ಕುವುದೇ ಇಲ್ಲ. ಇಂತಹದ್ದೆ ಕತೆ ಚಿಮ್ನಿದೂ ಕೂಡ. ಬದುಕಿನ ಬಗ್ಗೆ ಕನಸು ಕಾಣದವರಿದ್ದಾರೆ, ಆದರೆ ಕನಸು ಕಂಡವರ ಕನಸುಗಳು ಯಾವತ್ತು ಈಡೇರುವುದೇ ಇಲ್ಲಾ, ನುಚ್ಚು ನೂರಾಗಿ ಬಿಡುತ್ತವೆ. ಇಂತಹ ಕರಾಳ ಕನಸು ಕಂಡು ಬದುಕಬೇಕೆಂದು ಹಂಬಲಪಟ್ಟಿದ್ದ ಚಿಮ್ನಿಗೆ ಅವಳ ಎದೆಯೊಳಗೆ ತೂತಾಗಿದೆ ಎಂದು ಕೇಳಿದಾಗ ನಿಂತ ನೆಲ ಕಾಲಡಿ ಕುಸಿದಿತ್ತು. ಸಾವನ್ನ ಹೊತ್ತು ಬದುಕುವುದು ಬಹಳ ಕಷ್ಟ. ಒಂದು ನಿರ್ದಿಷ್ಟ ಗೆರೆಯನ್ನು ಎಳೆದು ಇಲ್ಲಿಂದ ಇಲ್ಲಿಯವರೆಗೆ ಮುಂದೆ ದಾಟುವುದಿಲ್ಲವೆಂದಾಗ ಖಂಡಿತ ಅದು ಪ್ರಯಾಸವಾಗುತ್ತದೆ, ಶೋಚನೀಯವಾಗಿ ಬಿಡುತ್ತದೆ. ಹೀಗೆ ಅವಳಿಗೂ ಆಗಿದ್ದು. ಬಡತನ, ದಾರಿದ್ರ್ಯ, ಮನೆ ತುಂಬ ಮಕ್ಕಳು ಕೇಳುವವರ್‍ಯಾರು ಹುಟ್ಟಿದ್ದು ತಮಗೆ, ಉಳದ್ರೆ ನಸೀಬಗಟ್ಟಿ ಐತೆ ಅಂದ್ಕೊಳ್ಳೊದು, ಸತ್ರೆ ಶಿವನವು ಅಂದ್ಕೊಂಡು ಹೊಟ್ಟೆ ತುಂಬ ಹೆಂಡಸರಾಯಿ ಕುಡಿದು ಅಮಲಿನಲ್ಲಿ ವಾರ ಹದಿನೈದು ದಿನಗಳ ಕಾಲ ನೆನಪು ಮಾಡಿಕೊಂಡು ಬೇಸರಪಟ್ಟು, ಮತ್ತೆ ಯತಾಸ್ಥಿತಿಗೆ ಮರಳುವ ಬದುಕಿಗೆ ಹೊಣೆ ಯಾರು? ನನ್ನ ಮೂರನೇ ಕಾದಂಬರಿ ಲಮಾಣಿ ಚಿಮ್ನಿಯ ಆತ್ಮಚರಿತೆ-ಲಂಬಾಣಿ ಸಮುದಾಯದ

ಹುಡುಗಿಯೊಬ್ಬಳ ಕತೆ, ಅನಕ್ಷರಸ್ಥ ಬಡ ಕುಟುಂಬದ ಅನೇಕ ಮಕ್ಕಳು ಹೀಗೆ ಹಾದಿ ಹೆಣವಾಗುತ್ತಾರೆ. ಅಂತಹವರ ಸಾವು ದಾಖಲಾಗುವುದೇ ಇಲ್ಲ. ಅಂತಹದೊಂದು ಸಾವು ನನ್ನನ್ನ ಬಹಳ ವರ್ಷಗಳಿಂದ ತೀವ್ರವಾಗಿ ಕಾಡಿತ್ತು. ಅದು ಈಗ ಕೃತಿ ರೂಪದಲ್ಲಿ ಬಂದಿದೆ. ಇದನ್ನು ಕನ್ನಡ ಸಾರಸ್ವತ ಲೋಕ ಸ್ವೀಕರಿಸುತ್ತೆ ಅಂದುಕೊಂಡಿದ್ದೇನೆ.

ಶಿರಗಾನಹಳ್ಳಿ ಶಾಂತನಾಯ್ಕ
ಬಳ್ಳಾರಿ

ಈಗ್ಗೆ ಸುಮಾರು ಇಪ್ಪತ್ತು ವರ್ಷಗಳಾಗಿರಬಹುದು. ನನ್ನಕ್ಕ ಸತ್ತು. ನನ್ನಕ್ಕ ಅಂದರೆ ನನ್ನ ಸ್ವಂತ ಅಕ್ಕ ಅಲ್ಲ, ಚಿಕ್ಕಪ್ಪನ ಮಗಳು. ಈ ನೆನಪಿನಾಳದ ಕತೆಯನ್ನು ಚಿನ್ನಾನಾಯ್ಕ ಹೇಳ್ತಾ‌ಇದ್ದ. ಅವನೀಗ ಯಾವುದೋ ಸರ್ಕಾರಿ ಕೆಲಸದಲ್ಲಿ ಸೇರ್‍ಕೊಂಡು ಸುಖವಾಗಿದ್ದಾನೆ ಅನ್ನೋದಕ್ಕಿಂತ, ಸುಮಾರು 30 ವರ್ಷಗಳ ಹಿಂದೆ ಪಟ್ಟ ಪಡಿಪಾಟ್ಲು ಈಗಿಲ್ಲ. ಹತ್ತ ಮೈಲಿದೂರದವರಿಗೆ ದೊಡ್ಡರ ಹಿಂದೆ ಹೋಗಿ ಶೇಂಗಾ ಆರ್‍ಸಿ, ಹೊಲದ ಮಾಲೀಕನಿಂದ ಛೀ! ಥು ಅನ್ನೊಸ್ಕೊಂಡು ಬದುಕಿನ ಬಂಡಿಸಾಗೋದಕ್ಕೆ ತಾನು ಸಾಕಾರಿಯಾಗಿದ್ದನ್ನ ಮರಿಯಾಕ ಆಗದೆ ಒಳಗೊಳಗೆ ತಮ್ಮಂಥವರ ಬದುಕೇಕೆ ಹೀಗೆಂದು ತಡಬಡಿಸುತ್ತಾನೆ. ರಾಗಿಗಂಜಿ, ಉಪ್ಪಿಲದಹುರಳಿ, ಕೊಲಾಣಿಸೊಪ್ಪು ತಿಂದು ಬದುಕಿದ ದಿನಗಳನ್ನ ಮರೆಯಲು ಬಲು ಪ್ರಯತ್ನ ಪಟ್ಟರು ಅವನಿಂದಾಗ್ತಾನೆ ಇಲ್ಲ. "ಛೇ, ಹಾಳಾದ ದಿನಗಳು" ಚಿನ್ನಾನಾಯ್ಕ ಇವತ್ತಿಗೂ ಬೆಚ್ಚುಬಿಳ್ತಾನೆ. ಧೋ ಅಂಥ ಸುರಿಯೋ ಮುಂಗಾರು ಗಟ್ಟಿ ಸೂರಿಲ್ಲದ ಗುಡಿಸಲೊಳಗೆ ಮಳೆಯದ್ದೆ ಕಾರುಬಾರು. ಅವನಪ್ಪ ಮದ್ವಿಯಾದಾಗ ಹನ್ನೊಂದೋ ಹನ್ನೆರಡ ವರ್ಷಗಳಂತೆ, ಅವ್ವನಿಗಿರಬೇಕು ಏಳೋ ಎಂಟು ವರ್ಷ. ಅವಕ್ಕೆ ಮದ್ವೆ ಅಂದ್ರೇನಂತ ತಿಳಿಯದಕಾಲ. ಚಿನ್ನನಿಗೆ ಏಳುಮಂದಿ ಅಣ್ಣಂದಿರು ಒಂದಿಬ್ಬರು ಅಕ್ಕಂದಿರು ಒಟ್ಟು ಅವನ್ನನ ಸೇರಿಸಿಕೊಂಡ್ರೆ ಹತ್ತು. ಪಾಪಿಮುಂಡೇವು ಹತ್ತರ ಹಣೆಬರಹಾನು ಇಷ್ಟೊಂದು ಗಟ್ಟಿ ಇತ್ತು ಅಂದ್ರೆ ದೊಡ್ಡರೋಗ, ಸಣ್ಣರೋಗ ಯಾವುದೋ ಬಂದ್ರೂನುವೆ ಜುಪ್ ಅನ್ನದಂಗೆ ಉಳ್ಕಂಡಿದ್ದು. ಜ್ವರಬಂದ್ರೆ ಅವನಪ್ಪ ಸಂತುನಾಯ್ಕ ಒಲಿಯಾನಬೂದಿ ತಗಂಡು ಗಾಳಿಬಡ್ಕಂಡೈತೆ ಅಂತಂದು, ಅದ್ಯಾವ ಸೀಮಿ ಮಂತ್ರ ಹೇಳ್ತಿದ್ನೊ ಕಡೀಗಮಾತ್ರ! ಛು!' ಅಂತ ಅವನ ಕಣ್ಣಾಗ ಬೂದಿ ಬೀಳೋ ಹಂಗೆ ಊದುತ್ತಿದ್ದ. ವಾಂತಿ ಬೇದಿ ಹತ್ಕೊಂಡ್ರಂತುವೆ, ಚರಗಿಯೊಳಗೆ ಬೆಂಕಿಕೆಂಡ ಹಾಕಿ ಏಳ ಸಲಾ ನಂಜರ್ ತಗದು, ರೊಟ್ಟಿ ತಟ್ಕೋ ಕಾಟೋಟಿಯೊಳಗೆ ಒಂಚೂರು ರೊಟ್ಟಿ

ತುಂಡುದುರಿಸಿ ನಿವಾಳಿಸಿ ದಬ ಹಾಕಿದ್ರೆ ಬೆಂಕಿ ಚೆಂಬೊಳಗಿಂದ ನೀರು ಗಡರ್, ಗಟರ್ ಸದ್ದು ಮಾಡ್ತಾ ಒಳಗೆ ಹೀರ್‍ಕೊಂಡ್ರೆ "ಅದ್ರೊಳ್ಗ ಅಡಗ ಯಾರ ಕಣ್ಣೆಸರ ಆಗೈತೋ ಅವನ ಹೊಟ್ಟೆಕೆಟ್ಟಹೋಗ" ಅಂತೇಳಿ ಅವನವ್ವ ಗುಜರಿಬಾಯಿ ಹಿಡಿಶಾಪ ಹಾಕ್ತಿದ್ಲು. ಅದು ಕರೇನ ನಿಂತುಹೊಕ್ಕಿತ್ತು. ಅಂಥ ಎಲ್ಲಾ ಕಾಲಗಳನ್ನ ದಾಟ್ಕಂಡು ಸಂತುನಾಯ್ಕನ ಸಂಸಾರದ ವಿಷಬಳ್ಳಿ ಹಂಗೇನೆ ಹಬ್ಬಿತು. ಆದ್ರ ಅವನ ತಮ್ಮನ ಸಂಸಾರದೊಳಗೆ ಅನೇಕ ಸಾವುಗಳು ಬಂದ ಹ್ವಾದ್ವು.

ಮೂಡಲ ಸೀಮಿಯಿಂದ ಲದೇಣಿಯಾ ಮಾಡ್ಕಂಡ ಬಂದ ಸಾವಿರಾರು ಲಂಬಾಣಿಗಳು ದಿಕ್ಕುದಸೆಯಿಲ್ಲದೆ ಹ್ವಾದ್ರು. ಚಿನ್ನುನಾಯ್ಕನ ತಾತ ಥಾವ್ರ್ಯ ಮಾತ್ರ ಇರೋ ನಾಕ ಮಂದಿ ಕಟ್ಕಂಡ ಪನಾಡ ಪಕ್ಷಿಯಂಗೆ ಅಲ್ಲಿ ಇಲ್ಲಿ ಅಲಿಯೋದ್ಯಾಕಂತ. ಕಾಟೇಬಾರಿ ತಾಂಡದಾಗ ಉಳ್ಕೊಂಡ. ಥಾವುನಾಯ್ಕನ ನಾಕಮಕ್ಕಳಲ್ಲಿ ಎಲ್ಡು ಹೆಣ್ಣು, ಎಲ್ಡು ಗಂಡು. ಎರಡು ಹೆಣ್ಣುಗಳಲ್ಲಿ ಒಬ್ಬಾಕಿಕುಂಟಿ. ಅಕೀನ್ಯಾರು ಮದ್ವಿಯಾಗಕ ಬರದಕ್ಕೆ ಅವರ ಹತ್ರನೆ ಉಳ್ಕಂಡ್ಲು, ದೊಡ್ಡೋಳಿಗ ಮದ್ವಿಮಾಡಿ, ಇಬ್ಬರೂ ಗಂಡು ಹುಡುಗರಿಗೆ ಮದ್ವಿ ಮಾಡಿಂದೆ, ಅವರಿಬ್ಬರ ಹೆಂಡಂದಿರ ನಡುವೆ ವ್ಯತ್ಯಾಸ ಬಂದೊಡನೆ ಒಂದಿದ್ದ ಗುಡಿಸಲು ಎರಡಾದವು.

ಹಸುನಂಗಿರೊ ಮನುಷ್ಯ. ಅವನ ಹೇಣ್ತಿ ಗುಬ್ಬೀರಿ ಮಾತ್ರ ಭೋ ಘಾಟಿ ಹೆಂಗ್ಸು. ಥಾವು ಲದೇಣಿಯಾ ಹೇರಕಂಡ ಬರಾಕಮದ್ಲು ಆಂಧ್ರಪ್ರದೇಶದ ಯಾವುದೋ ಮೂಲೆಯಿಂದ ಕರ್ನಾಟಕದ ಬಳ್ಳಾರಿ ಪ್ರವೇಶಿಸಿ ಅಲ್ಲೆಲ್ಲೋ ಗೂಡೂರೋ ಅಪ್ಪೆಬಳ್ಳತಾಂಡದ ಹತ್ರ ಅವನಪ್ಪನೂವೆ ಅಜ್ಜನೂ ಜಮೀನು ಮಾಡ್ಕಂಡಿದ್ದವರು. ಥಾವು ಅಜ್ಜ ಹನುಮನಾಯ್ಕನಿಗೆ ಒಬ್ಬನೆ ಮಗ. ಥಾವುನೂ ಕೂಡ ಒಬ್ಬನೆ. ಥಾವುನ ಅಜ್ಜ ಬ್ರಿಟಿಷರ ಹತ್ರ ಗುಲಾಮಗಿರಿ ಮಾಡ್ಕೊಂಡು ಒಳ್ಳೆ ಬಂಗಾರದ ನಾಣ್ಯಗಳನ್ನು ಗಿಟ್ಟಿಸಿಕೊಂಡು, ಒಂದೈವತೆಕ್ಕರೆ ಕಾಡನ್ನ ಬುಡಮೇಲ ಮಾಡಿ ಒಳ್ಳೆ ಜಮೀನ ಮಾಡ್ಕಂಡ. ಅಪ್ಪೆಬಳ್ಳತಾಂಡದಾಗೆ ಶ್ರೀಮಂತನಾದ. ಅದ್ಯಾವುದೋ ಹಳೇ ದ್ವೇಷ ಒಳಗೊಳಗೆ ಹೆಡೆಯಾಡ್ತಿತ್ತು. ಅದಕ್ಕ ಹನುಮನಾಯ್ಕ ಮಗನ್ನ ಎಲ್ಲೂ ಬಿಡದಂಗೆ ಕಾಯ್ಕಂಡಿದ್ದ. ಆದರ ನಡುವೆ ಮುದುಕನ ಪೈಕಿ ಯಾರೋ ಒಬ್ಬನ್ನ ಬೇಟೆಗಂತ ಕರ್‍ಕೊಂಡ ಹೋಗಿ ಪೊದೆಯೊಳಗೆ ಜಿಂಕೆ ತೋರ್‍ಸಿ ರುಂಡ ಮುಂಡು ಬೇರೆ ಮಾಡಿ ಕಾಡಪ್ರಾಣಿಗ ಆಹುತಿಕೊಟ್ಟು

ಬಂದಿದಕ್ಕೆ ಹೆದರಿ ಹನುಮನಾಯ್ಕ ತಾಂಡ ತೊರೆದು ಮೂಡಲಸೀಮೆ ಬಿಟ್ಟು ಪಡವಲಕ್ಕೆ ಗುಳೆಹೊರಟ. ತನ್ನ ಒಬ್ಬನೆ ಮಗ ಥಾವುನ ಮದುವೆ ಮಾಡಾಕ ಹೆಣ್ಣು ಹುಡುಕಿದ್ದಂಗೆ ಅವನ ಹಾಗೆ ಗುಳೆ ಹೊಂಟೋರಲ್ಲಿ ಜಾತೇರ ಹುಡುಗಿಯನ್ನು ಹುಡುಕತೊಡಗಿದ್ದು ಅವನು ರಾಠೋಡಕುಲಕ್ಕೆ ಸೇರಿದ್ರಿಂದ, ಚವ್ಹಾಣ ಹುಡುಗಿ ನೋಡಿ ಮದ್ವಿ ಮಾಡಿಯೇ ಬಿಟ್ಟ. ಕಾಟೇಬಾರಿತಾಂಡ ತಲುಪುವುದರೊಳಗೆ ಥಾವುಗೆ ನಾಲ್ಕು ಮಂದಿ ಮಕ್ಕಳು ಆಗಿದ್ರು. ದಾರಿನಡುವೆಯೇ ಅವನ ತಂದೆ ತಾಯಿ ತೀರಿಕೊಂಡರು. ಅನಿವಾರ್ಯವಾಗಿ ಅಲ್ಲೇ ಕಾಡಿನೊಳಗೆ ಸುಟ್ಟು ಮಣ್ಣು ಮುಚ್ಚಿ ಅಳೋ ಅಷ್ಟು ಅತ್ತು, ಮಂದಿ ಹಿಂದೆ ಹೊರಟೆ ಬಿಟ್ಟ. ಥಾವುನಾಯ್ಕ ಕಾಟೇಬಾರಿಗ ಬಂದು ಹರಸಾಹಸಮಾಡಿ ನಾಕಮಂದಿಗಾಗೋ ಆಟು ಜಮೀನಮಾಡಿದ, ಒಬ್ಬ ಮಗಳನ್ನ ಕೊಂಡೇನತಾಂಡಕ್ಕ ಕೊಟ್ಟು ಮದ್ವಿ ಮಾಡಿದ್ದ. ಕುಂಟಿಗೂ ಯಾರಾದರು ಕೇಳೋರ ಬಂದಾರ ಅನ್ನೋ ಪ್ರಯತ್ನದಲ್ಲಿದ್ದಾಗಲೇ ಸತ್ತಹ್ವಾದ. ಮುಂದ ಇಬ್ಬರು ಗಂಡಮಕ್ಕಳ್ಳು ಬ್ಯಾರೆ ಆದ್ರು ಚಿನ್ನುನಾಯ್ಕನ ಅಪ್ಪ ಸಂಪುನಾಯ್ಕನಿಗೆ ಎಂಟು ಗಂಡು, ಎರಡು ಹೆಣ್ಣು. ಅವನ ತಮ್ಮ ಮಂಗಲ್ಯಾನಾಯ್ಕನಿಗೆ ಮಾತ್ರ ಹನ್ನೆರಡು ಹೆಣ್ಣು ಹುಟ್ಟಿದವು. ಮುಪ್ಪಿನ ಕಾಲಕ್ಕೆ ಅಳಿಯನ ಹತ್ರ ಇದ್ದು ಬೋಯ್ಸಿಕೊಳ್ಳೋದಕ್ಕಿಂತ ಸ್ವಂತ ಮಗ ಹಂಗಿಸಿ ಕೊಳಹಾದಿಕ್ರುವೆ ಪಾಡಂತ ಗಂಡಿಗಾಗಿ ಪ್ರಯತ್ನ ನಡೆಸುತ್ತಲೇ ಇದ್ದ. ಆದ್ರ ಅವನ ಹಣೆಬರಕ್ಕೆ ಗಂಡಾಗೋ ಲಕ್ಷಣಗಳೇ ಕಾಣಲಿಲ್ಲ. ತಾಂಡದ ಹಿರಿಯ ಪಾಂಡ ನಾಯ್ಕ "ಲೇ ಮಂಗು, ಯಾಕಿಂಗೆ ಹಂದಿಹಂಗ ಬುಳು ಬುಳುಂತ ಹೆಣ್ಣು ಹುಡ್ರನ್ನ ಹಡಿಯಾಕ ಹತ್ತಿ, ನಿನ್ನವ್ವನ ಸೂಳಿಮಗ್ನ, ಬಂದಮಾಡು, ಅದೇನೋ ಸರ್ಕಾರದವ್ರು ನರಕೋಯ್ದು ಮಕ್ಕಳಾಗದಂಗ ಮಾಡ್ತಾರಂತಲ್ಲ ನೀನಾರ ಹೋಗು ಇಲ್ಲ ನಿನ್ನ ಹೇಣ್ತಿ ಚಿನ್ನಿನಾರು ಕಳ್ಸು" ಅಂತೇಳಿ ಮುಕ್ಕಾಲ ಗಂಟಿ ಉಪದೇಶ ಮಾಡ್ದ. "ಎಯ್, ಆಗ್ಲಿಬೀಡು ಕಾಕ, ದೇವರೇನು ಹುಲ್ಲು ಮೇಯಿಸಂಗಿಲ್ಲ, ಕೂಲಿನಾಲಿ ಮಾಡ್ಕಂಡ ಬದಕೋವ್ರು ಬದಕಲಿ, ಸಾಯೋವ್ರ ಸಾಯ್ಲಿ ನನ್ನ ಕೈಯೋಗೇನೈತೆ. ಎಲ್ಲಾ ಕುಂತಾನಲ್ಲ ಊರಮುಂದೆ ಅವನ ನೋಡ್ಕಂತನ. ನಮ್ದೇನೈತೆ ನರಮನುಷ್ಯರದು." ಅವನ ಬಾಯಿಬಂದಾಗೋ ಹಂಗ ಹೇಳಿದ್ದ ಮಂಗ್ಲ್ಯನಾಯ್ಕ. ಆದ್ರು ಮುದಕ ಪಾಂಡುಗ ಸಮಾಧಾನ ಆಗಲಿಲ್ಲಾ. "ಲ್ಲೋ, ನಿಂಗ ಗಂಡಮಕ್ಕಳೇ ಬೇಕು ಅನ್ನಂಗಿದ್ರ ನಿಮ್ಮಣ್ಣ ಸಂತುಗ ಅದಾವಲ ಹಿಂಡು ಅದ್ರಾಗ ಯಾವನ ಬೇಕಾರುವೇ ಖೋಳಹಾಕ್ಕ ಅರ್ಥ ಆತೇನು, ಒಬ್ಬನ್ನ ಪಸಂದಾಗಿ ಕೆಲ್ಸ ಮಾಡನ್ನ ನೋಡಿ ದತ್ತಕ ತಗುಂಡು ಇರೋ ಜಮೀನಿನೊಳಗ

ಗೇಯ್ದು ಬದಕೋದ ಕಲಿ" ತಿಳಿದಷ್ಟು ಹೇಳೋ ಪ್ರಯತ್ನ ಮಾಡ್ದ. ಮುದ್ಕನ ಮಾತು ಅವನ ಸುತ್ಲು ಗಿರ್ಕಿ ಹೊಡದವೇ ವಿನಃ ಮಂಗ್ಲ್ಯನಿಗೇನು ಪ್ರಯೋಜನವಾಗಲಿಲ್ಲ. ಹೂಂನು ಹೇಳಲಿಲ್ಲಾ ಊಹೂಂ ಅಂತೇಳು ಹೇಳದೆ ಹೊಂಟಬಿಟ್ಟ.

ಸುತ್ತಮುತ್ತ ಮಂದಿ ಏನು ಹೇಳಿದ್ರು ಕೇಳದೆ "ಇವ್ನವನ ಹಡಬಿ ಹೆಂಗ್ಸು ಚಿನ್ನಿ ಹೊಟ್ಟ್ಯಾನ ಚೀಲದಾಗ ಅದೆಷ್ಟು ಹೆಣ್ಣು ಬೊಳ್ಬಾರನ್ನ ತುಂಬ್ಕೊಂಡಾಳೋ ತಿಳಿವಲ್ದು. ಹಿಂಗೇ ಬಿಟ್ರೆ ಇನ್ನೆಷ್ಟು ಹೆಣ್ಣು ಹಡಿತಾಳೋ. ನಂಗಂತು ಮದ್ವಿ ಮಾಡ್ಸಿನೆ ಸಾಕೋಗೋ ಹೋತು. ಈಗ ಹದಿನೈದನೇಯದು, ಯಾಕೋ ಸರಿಕಾಣವಲ್ದು" ಅಂದವನೆ ಒಂದು ನಿರ್ಧಾರಕ ಬಂದ.

ಅವನು ಮುಂದೇನ ಮಾಡ್ದಂತ ನನಗಂತು ಗೊತ್ತಿಲ್ಲಾ, ಯಾಕಂದರ ನಾನು ಹುಟ್ಟಿ ಜಗತ್ತನ್ನು ನೋಡಿ ಆದ್ರ ರೀತಿ ರಿವಾಜನ್ನ ಅರ್ಥಮಾಡ್ಕೊಳ್ಳಾಕ ಸುರು ಮಾಡೋದ್ರಾಗ ನಮ್ಮ ಸಣ್ಣಪ್ಪನಿಗೆ ಎಲ್ಡನೇ ಮದ್ವಿಯಾಗಿತ್ತು. ಅವನ ಎರಡನೇ ಹೇಣ್ತಿ ಪೀಕಿಗೆ ನನ್ನ ಓರಿಗೆಯ ಮಗಳು ಇದ್ಲು. ಆದ್ರ ಅವನು ಹೆಂಗ ಮದ್ವಿಯಾದ ಅಂತ ಅವ್ವ ಹೇಳಿದ್ಲು.

ನಾವೇನು ಮ್ಯಾಲಬಿದ್ದು ಖೋಳಹಾಕ್ಕೊ ನಮ್ಮ ಗಂಡ ಮಗನ್ನಂತ ಹೇಳಲಿಲ್ಲಾ ಅವನು ಬರಲಿಲ್ಲಾ, ನಿಮ್ಮಪ್ಪಂಗೂ ಹೇಳದೇ ತಾಂಡದ ರಂಗೋಲಿ ಮಾರುತಿದ್ದ ರತ್ನಾನಾಯ್ಕನ ತಂಗಿ ಪೀಕಿ ಅನ್ನೋಳನ್ನ ಮದ್ವಿ ಮಾಡ್ಕೊಂಡೆ ಬಂದಿದ್ದ. ಮೊದಲನೇ ಚಿನ್ನಿ ಅದೆಂಗ ಆಗ್ತಿಯಾ ನಾನು ನೋಡ್ತೇನಿ ಅಂದಿದ್ಕ ಸೊಂಟ ಮುರಿದು ಮೂಲಿಯೊಳಗ ಮಲಗಿಸಿ ಎರಡನೇಯಕಿಯನ್ನ ಮನಿತುಂಬಿಕೊಂಡಿದ್ದ, ಆಗ ಅವನ ಒಂಬತ್ತನೇ ಹುಡುಗಿ ಮೇಣಿಗೆ ಅಮ್ಮ ಎದ್ದು ಮೈತುಂಬ ಗಾಯಗಳಾಗಿ ಜ್ವರ ಬಂದು ಈಗೋ ಆಗೋ ಆಗಿದ್ಲು. ತಾಂಗಡಿ ಮಂದಿ ಹೋಗೆ ಇಲ್ಲ ಮೇಣಿ ಸತ್ತಹೋದ್ಲು. ಹದಿನೈದು ಹೋಗಿ ಹದಿನಾಕು ಆಯ್ತು. ಒಂದೆರಡಾದ್ರ ಭಾರಾಡಿ ಅತ್ತಾರು. ಚಿನ್ನಿಮಾತ್ರ ವಾರೊಪ್ಪತ್ತು ಹಾಸಗಿ ಹಿಡಿದಿದ್ಲು.

ಇರೋ ಮಾರುದ್ದ ಗುಡಿಸಲೊಳಗೆ ಕೋಳಿಮರಿಹಂಗೆ ತುಂಬಿದ್ದ ಯಾರದೋ ಮೂಗು, ಇನ್ಯಾರದೋ ಕಿವಿ, ಯಾವುದರದೋ ಗಾಯ ಆಗಿ ಕೀವು, ಹೇನು, ಸೀರು ಬರಿಮೈ ಮೇಲೆ ಊರುತುಂಬ ಅಡ್ಡಾಡ್ತಿದ್ವು. ತಲಿಗ ಎಣ್ಣಿ ಇಲ್ಲದೆ ಮೈಗೆ ಸ್ನಾನವಿಲ್ಲದೆ

ಅಡ್ನಾಡಿ ದನದಂಗೆ ಅಡ್ಡಾಡ್ತಿದ್ವು, ತಲಿಯೊಳಗೆ ಕೆರೆದು ಕೆರೆದು ಗಾಯ ಗಳಾಗದೇ ಇರಾಕ ಸಾಧ್ಯವ. ಕೆಲ ಹುಡುಗಿಯರಿಗಂತು ದಂಡ್ಯಪ್ಪಗ ಜಡಿ ಬೀಡೊಹಂಗೆ ಜಡಿಕಟ್ಕೊಂಡಿದ್ವು. ಊರಾಗಮಂದಿ "ಛೇ ಈ ವಯಸ್ಸಿಗಾಗ್ಲೆ ಯಲ್ಲಮ್ಮ ಬಂದಾಳ" ಮಾತಾಡ್ಕೊಂಡಿದ್ರು ಕಾಲನಿಲ್ಲದಂಗೆ ಮುಂದೆಹೋಯ್ತೊ ಸತ್ತವ್ರು ದೇವರಿಗೆ, ಉಳದೋವ್ರ ನಮಗೆ ಅಂತೇಳಿ ಅಂವ ನಿರ್ಧಾರ ಮಾಡಿದ್ದ.

ಮೆಚ್ಚಿತಂದ ಎಮ್ಮಿ ಮಣಕ ಹಾಕ್ತು ಅನ್ನೋಹಂಗೆ ಎರಡನೇ ಹೆಂಡತಿ ಪೀಕಿಗು ಆರಂಭಕ್ಕ ಆರು ಹೆಣ್ಣು ಕೂಸು ಹುಟ್ಟಿದವು. ಗುಡಿಸಲು ಸಾಕ ಆಗದಕ್ಕೆ ತಟ್ಟಿ ಸರಿಸಿದೊಡ್ಡದ ಮಾಡಿದ. ದುಡಿಯಾಕ ಆಗದೆ ಮಂಗ್ಲ್ಯ ಒದ್ದಾಡತೊಡಗಿದ. ಪಕ್ಕದಾಗ ಅವನಣ್ಣ ವರ್ಷಕ ಒಂದು ಹೊಲ ಖರೀದಿಸಿದರೆ ಇವನಿಗೆ ಶನಿಬಡದಂಗಿತ್ತು. ಅದಕ್ಕ, ತಾಂಡದ ಮಂದಿಮಾತ ಕೇಳ್ಕಂಡು ಹೆಂಡಕುಡದು ಅಣ್ಣನಿಗೆ ಹೆಣ್ತೆ, ಹೆಂಡ್ರು ಅಂತ ಬೋಯ್ಯಾಕ ಸುರುಮಾಡಿದ. ಅವರಾದ್ರು, ಎಷ್ಟು ದಿನಾಂತ ಸಹಿಸಿಕೊಂಡಾರು. ಹಿಡ್ಕಂಡು ಅಂಡು ಹರಿಯೋ ಮಟಹೊಡದ್ರು. ಅವರಿಬ್ಬರ ನಡಕ್ಕ ದೊಡ್ಡ ಬಿರಕು ಬಿಟ್ಟಿತು. ಸಂತುನಾಯ್ಕ, ಅವನ ಮುತ್ತಜ್ಜನ ಐವತ್ತು ಎಕ್ಕರೆ ಜಮೀನು ಮಾರಿ ಬಂದ ರೊಕ್ಕದಾಗ ತಾನೊಂದು ಮಾಳಗಿಮನಿ ಹಾಕ್ಕೊಳೋದಾಗಿ ಯೋಜನೆ ಮಾಡಿದ. ರೊಕ್ಕತಗಂಡ ನಾ ಏನಮಾಡಲಿ ಅಂತೇಳಿ ಮಂಗ್ಲ್ಯನೂ ಅವನ ಕೂಡ ಮನಿಹಾಕಿಸಿದ. ಒಂದ ಕೋಣಿ, ಅಡ್ಡ ಗ್ವಾಡಿ ಹಿಂದ ಒಲಿ, ಎಡಕ್ಕೆ ಕಿಟಕಿ ಮ್ಯಾಲೆರಡು ಬಾದಳ. ಆಯ್ತುಮನಿ.

ಮಳಿಗಾಲಕ್ಕ ಬಾದಳಮುಚ್ಚಿದ್ರಂತು ಇಡಿ ಮನಿ ಕತ್ಲಕ್ವಾಣಿ. ದೀಪಹಚ್ಚಂಡ ಅಡ್ಡಾಡಬೇಕ. ಮಾಳಿಗೆ ಮೇಲಿನ ಮಣ್ಣಿನ ಮುದ್ದಿ ಕರಗಿ ಹುಲ್ಲಿನ ಬುಡದಿಂದ ನೀರು ಮನಿತುಂಬ ಸೋರುತ್ತಿತ್ತು. ಚಿನ್ನಾನ ಅಪ್ಪ ಏಣಿ ಹಾಕ್ಕೊಂಡು ಮ್ಯಾಲಹತ್ತಿ ಹುಲ್ಲು ಕಿತ್ತು ಮಣ್ಣು ಹಾಕಿ ಬಿಗಿ ಮಾಡ್ತಿದ್ದ. ಹಂಗೇ ಮಂಗ್ಲ್ಯಾನೂವೆ. ಅವರಿಬ್ಬರ ಜಗಳ ತಾರಕಕ್ಕೇರಿದಾಗ ಸಂತುನಾಯ್ಕನಿಗೆ ಅನಿವಾರ್ಯವಾಗಿ ಮಾಳಗಿ ಮನಿಬಿಟ್ಟ ಸೇವಾಭಾಯನ ಮಟ್ಟೋಮುಂದಿನ ಕಣದಾಗ ಗುಡಿಸಲು ಹಾಕಿಕೊಂಡ. ನಂತರ ಅವ ಚಿಕ್ಕಪ್ಪನ ಹೆಣ್ಣುಮಕ್ಕಳ ಜೊತೆಗಿನ ಚಿನ್ನಾನ ಒಡನಾಟ ಕಮ್ಮಿ ಆಯ್ತು. ಮುಂದೆ ಅಂವ, ಊರಬಿಟ್ಟ ಮತ್ತೊಂದುರಿಗೆ ಓದಾಕಂತೇಳಿ ಹಾಸ್ಟಲಿಗ ಹ್ವಾದ ಮೇಲಂತು ತಾಂಡದೊಡನೆ ಸಂಪರ್ಕ ಕಮ್ಮಿ ಆಗ್ತಾ ಹೋತು. ಆದ್ರ ರಜೆಗೆ ಬಂದಾಗ ಒಮ್ಮೆ ಎಲ್ಲರ ಬಗ್ಗೆನೂ ಕೇಳಿ ತಿಳ್ಕಂತಿದ್ದ.

ತಾಂಡದಮಂದಿ ಎಷ್ಟು ಕೂಲಿ ಮಾಡಿದ್ರು ಹೊಟ್ಟೆ ಬಟ್ಟೆಗ ಸಾಲ್ತಿರಲಿಲ್ಲಾ. ಸುತ್ತಲ ಊರುಗಳಿಗೆ ಮುಂಜಾನೆ ಬೆಳಕುಹರಿಯೋದ್ರಾಗ ಕೈಯಾಗ ಎಲ್ಡರೊಟ್ಟಿ ಹಸಿ ಮೆಣಸಿನಕಾಯಿ ಕಿವುಚಿ ಆಟು ಉಪ್ಪಹಾಕ್ಕೊಂಡು ಹಿಂಡಿ ಮಾಡ್ಕಂಡು ಉಣ್ಕೊಂತ, ತಲಿಮ್ಯಾಲೆರಡು ಮಧ್ಯಾಹ್ನದ ರೊಟ್ಟಿಗಂಟು ಸಂಜಿಕೌಳಾದಿಂದ ಮನಿಗ ವಾಪಾಸ ಆಗ್ತಿದ್ರು. ಎಟ ದುಡದ್ರು ಸಾಲ್ದಕ್ಕೆ ಒಂದೂವರಿ ರೂಪಾಯಿ ಕೂಲಿ ಕೊಡ್ತೀನಿ, ವಾಸಕ್ಕೆ ಲೈನಗಳಾದವಂತ ರಾಮುಮೇಸ್ತ್ರಿ; ಖಂಡೇಖಾನ' ಕಾಫಿ ಎಸ್ಟೈಟಿಗ ಕರ್ಕಂಡ ಹೋದ. ಅದೇಮದ್ದು ತಾಂಡದಮಂದಿ ಬೀಜ ಹರಿಯಾಕ ಹೋಗಿದ್ದು. ಕೈ ಕಾಸು ಕೂಲಿ ಸೇರ್ಸಿ ಹೋಳಿ ಹುಣಿಮಿಗ ಬಂದಾಗ ಉಗಾದಿ ಹಬ್ಬಕಂತೇಳಿ ಏಳೆಂಟುರೂಪಾಯಿ ಕೈಯೊಳಗ ಇಟ್ಕಂಡೆ ಬಂದಿದ್ರು. ಆವಾಗ ರುಚಿಕಂಡ ಮಂದಿ ಮಳಿಗಾಲಕ್ಕೂ ಹೋಗಾಕ ಸುರು ಹಚ್ಕೊಂಡಿದ್ರು. ಅದ್ರಾಗ ನಮ್ಮ ಚಿಗಪ್ಪನ ಮಗಳು ಚಿಮ್ನಿ ಎತ್ತಿದ ಕೈ. ಸಣ್ಣೋವ್ರ ದೊಡ್ಡೋವನೆಲ್ಲಾ ಕಟ್ಕಂಡು ದೊಡ್ಡ ಪೆಟಾರಿಯೊಳಗ ತಾಟು -ಲೋಟ, ಪಾತ್ರೆ ಪಡಗ ಹಾಕ್ಕೊಂಡು ಜ್ವಾಳದ ಗಂಟು, ನುಚ್ಚಕಿ ಚೀಲ ಹೊತ್ಕಂಡು ಕಾಪಿಸೀಮಿಗ, ಹೊಂಟೆ ಬಿಟ್ಟಿದ್ಲು. ಅವ್ವ-ಅಪ್ಪಗ ಕಷ್ಟಕೊಡಬಾರದು ಅಂತೇಳಿ ಸೀಮಿನೆಲ್ಲಾ ಒಂದ ಮಾಡಿ ದುಡಿತಿದ್ಲು. ದೇವರು ಅದೇನ ಬುದ್ಧಿ ಕೊಟ್ಟಿದ್ನೊ ತಾಕತ್ತು ಕೊಟ್ಟಿದ್ನೊ. ಚಿಮ್ನಿ ಮಾತ್ರ ಊರಿಂದ ಹೊರಗೆ ಇರ್ತಿದ್ಲು. ಕಾಫಿ ಸೀಮೀಯೊಳಗೆ ಎರಡು ಹುಡುಗಿಯರು ಕಾಯಿಲೆ ಬಿದ್ದು ಸತ್ತಹ್ಯಾದ್ವು, ಊರಾಗ ನಾಕೈದು ಸತ್ತಹ್ವಾದ್ವು, ಎಲ್ಲಾನೂ ನೋಡಿ ಗಟ್ಟಿಯಾಗಿದ್ದ ಚಿಮ್ನಿಗ ಹುಟ್ಟೆ ಒಂದು ಸವಾಲಾಗಿತ್ತು. ಚಿಮ್ನಿಗಿಂತ ದೊಡ್ಡವಳಾದ ಪಾಪಿ ಋತುಮತಿಯಾಗ್ತಿದ್ದಂಗೆ ಹೀರೆಹೆಣ್ತಿ ಚಿನ್ನಿ ಸಂಬಂಧಿಕರಿಗೆ ಕೊಟ್ಟಮದ್ವಿ ಮಾಡಿದ್ರು. ಅದುಬೇರೆ ಸಾಲ ಆಗಿತ್ತು. ಎರಡನೇಯವಳಾದ ಚಿಮ್ನಿ ಅವಳಿಗಿಂತ ಚಿಕ್ಕವಳು ಹದಿಮೂರು ತಂಗಿಯರು ಮತ್ತು ಅವಳ ಚಿಕ್ಕಮ್ಮನ ಏಳು ಹೆಣ್ಣು ಹುಡುಗಿಯರು ಒಟ್ಟು ಇಪ್ಪತ್ತು ಜನರು ಒಂದೇ ಕುಟುಂಬದಲ್ಲಿ ವಾಸವಾಗಿದ್ದರು. ಅವಳಪ್ಪ ಕುಡದು ದೊಡ್ಡಪ್ಪನ್ನ ಜೊತೆಗೆ ತೆಕ್ಕಮಾರಿ ಬೀಳ್ತಿದ್ದಾ ಅದನ್ನ ಬಿಡಸಾಕ ಅಕೀನ ಹೊಕ್ಕಿದ್ಲು. ಹೆಂಡದಂಗಡಿಯೊಳಗ ಒಮ್ಮೊಮ್ಮೆ ಜಗಳ ತಕ್ಕೊಂಡು ರಾಣರಂಪಮಾಡಿರ್ತಿದ್ದಾ ಅದನ್ನು ಅಕೀನ ಬಗೆ ಹರಿಸಬೇಕಿತ್ತು. ಹೊಲಮನಿ, ಕಣ, ಕೂಲಿ, ಸಂತಿ, ವ್ಯವಹಾರ ಎಲ್ಲಾನು ಅಕಿಮ್ಯಾಲ ಬಿದ್ದಿತ್ತು.

ನನ್ನ ಚಿಕ್ಕಪ್ಪ ಮಂಗ್ಲ್ಯಾನಾಯ್ಕನಿಗೆ ಅವಳೊಬ್ಬ ಗಂಡು ಮಗನಂತಿದ್ಲು. ಯಾವತ್ತಾದರು ಒಂದದಪ ಅವನು ಹೊಲಕ್ಕೆ ಗಳೆ ತಗೊಂಡು ಹೋದ್ನಂದ್ರ,

ಎತ್ತೆಗಳೆನಾದ್ರು ರಗಳಿತಗದ್ರ ಹೆಡಮುರಗಿ ಕಟ್ಟೊಹಂಗೆ ಹೊಡದು ಹಣ್ಣಗಾಯಿನಿರ್ಗಾಯಿ ಮಾಡಿ, ಅರ್ಧಕ್ಕೆ ಗಳೆ ಬಿಟ್ಟ ಮನಿಗ ಬಂದ ಬಿಡ್ತಿದ್ವ. ಐದಾರು ವರ್ಷದಾಗ ಎರಡು ಎತ್ತಗಳ ಜೀವ ಹೋಗೋವರಿಗ ಹೊಡದಿದ್ವ. ಸತ್ತಿಂದ ಎಳ್ಕಂಡ ಹೋಗಿ ಕೋಡಿಸರದಾಗ ಬಿಸಾಕಿ ಬಂದಿದ್ವ. ಮಂದಿಮಾತು ಕೇಳಿ ಕಾಲುತುಳಿದು ಜಗಳ ತಗದು ಅವನಣ್ಣ ಸಂತುನಾಯ್ಕನನ್ನ ಪೋಲಿ ಸ್ಟೇಷನ್ ಮೆಟ್ಟಿಲು ಹತ್ತಿಸಿದ್ವ. ಅವನ ಸ್ನೇಹಿತನಂತೆ ನಾಟಕ ಮಾಡಿ ಅವನ ಎರಡನೇ ಹೆಣ್ತಿದೂರದ ಸಂಬಂಧಿ ಪೂರ್‍ಯ, ಆಕಿಕೂಡ ಸಲಗಿ ಬೆಳಸೋದಲ್ದ, ಇಡೀ ಊರಮಂದಿಗ ತಲಿನೋವಾಗಿದ್ವ. ಅಂವ, ಮಂಗ್ಲ್ಯಾನ ಮಾರ್ಗದರ್ಶಕ, "ಬರಿ ಸ್ಟೇಷನಿಗ ಒಯ್ದ್ರ, ಏನ್ ಪ್ರಯೋಜನ ಮಂಗು, ಕೋರ್ಟ್ ಮೆಟ್ಟಿಲು ಹತ್ತಿಸಬೇಕು. ಆಗ್ಲೆ ಬುದ್ಧಿ ಬೆಟ್ಟಿಯಾಗೋದು. ಮತ್ತೊಂದಸರ್ತಿ ನಿನ್ನ ಸವಾಸಕ ಬಂದಿರಬಾರ್‍ದು"ಜಬರದಸ್ತ್ ಬುದ್ಧಿಹೇಳಿದ್ವ." ಹೌದ, ನನ್ನ ಏನ ಮಾಡಂತಿ." ಮಂಗ್ಲ್ಯಾ ಹಲ್ಲು ಕಿರಿದು ಕೇಳಿದ. "ಮತ್ತೇನು, ಕುರಿ, ಕೋಳಿ ಮ್ಯಾಲಿಂದ ಜಗಳ ತಗಿ, ಹೆಂಗೂ ನಿನ್ನ ಹೊಡಿತಾರ, ನೀನೆ ಕಲ್ಲತಗಂಡ ತಲಿಹೊಡ್ಕ ಆಮೇಲಿಂದ ನಾ ನೋಡ್ಕಂತೀನಿ". ಪೂರ್‍ಯನ ತಲಿತುಂಬದ. ಅವತ್ತೆ ಸಂಜಿ ಮುಂದ ಅವನಣ್ಣನ ಕುರಿ ಮೇರಿ ಮೇಲೆ ಮೆಯ್ತಿದಿದ್ದು ಅವನ ಹೊಲದೊಳಗೆ ಪ್ರವೇಶಿಸುತ್ತಿದ್ವಂಗೆ ಬಾಯಿಗ ಬಂದಂಗೆ ಬೊಯ್ದು ಹಿಡಿಯೋಕ ಬಂದ ಹುಡಗನ್ನ ಹಿಡಿದು ಹೊಡದಿದ್ವ ಮಂಗ್ಲ್ಯ. "ಹಾಳಸೂಳಿಮಗ ಸತ್ತಹೋಗ್ಲಿ" ಬೋಯ್ಕಂಡು ಸುಮ್ಮನಿದ್ವ ಸಂತು. "ಸಂಜೀಗ ಏನಂದ್ರು ಯಾರು ಚಕಾರೆತ್ತ ಬ್ಯಾಡ್ರಿ" ಅಂತೇಳಿ ತಾಕೀಮಮಾಡ್ವ. ಆದ್ರ, ಹೆಂಡ ನೆತ್ತಿಗೇರಿದೊಡನೆ ಸಂಬಂಧವನ್ನೆ ಮರತ ಮಂಗ್ಲ್ಯ ರಾಗಿ ಜಿಡ್ಡಿನಂತೆ ಕೈ ತೊಳದ ಹಿಂದಬಿದ್ದಿದ್ವ. "ಏಯ್, ಏನನೋಡ್ತೀರ ಆಗೋದ ಆಗ್ಲಿ ಹೊಡಿರಲೇ" ತಾಳ್ಮೆ ಕಳ್ಕಂಡಿದ್ವ ಸಂತು ಮಕ್ಕಳಿಗೆ ಹೇಳಿದ್ದೆ ತಡ ಕೇಳಿ ಕೇಳಿ ರೋಷ ಹೋಗಿದ್ವ ಹುಡುಗರು ಕ್ಷಣದಾಗ ಹೊಡದು ನೆಲಕ್ಕುರುಳಿಸಿಬಿಟ್ರು. ಕಿಚೋ ಅಂತೇಳಿ ಇಪ್ಪತ್ತಕ್ಕು ಇಪ್ಪತ್ತು ಹುಡುಗಿಯರು ನುಗ್ಗಿದ್ವರು. ತಾಂಡಕ ತಾಂಡನೆ ಬಿಡಸೋ ಗೋಜಿಗೆ ಹೋಗದೆ ದೂರದಾಗ ನಿಂತ್ಕಂಡು. "ಎಯ್, ಆ ಸಂತುನ ಹುಡುಗರ ಉಪಟಳ ತಾಂಡದಾಗ ಭಾಳ ಆಗ್ಯೆತಿ ಬಿಡು. ಮಂಗುನ ಹುಡುಗಿಯರೇ ಅವರನ್ನ ಹದ್ದುಬಸ್ತಿಗ ತರಬೇಕೆ ವಿನಃ ಯಾವನ ಕೈಯಿಂದ್ಲೂ ಆಗಲ್ಲ. ಆ ಮಗ ಮಂಗು ಗೊಟಕ್ ಅನಬೇಕು ಮಜ ಇರುತ್ತೆ. ಇಡಿ ಮನಿಮಂದಿನ ಒಳಗಹಾಕ್ತಾರ, ದೀಪ ಹಚ್ಚಕ ಯಾರು ಇಲ್ಲದಂಗಗಾಗುತ್ತೆ ನೋಡು" ಎಲ್ಲರ ಬಾಯಿಯೊಳಗು ಇವೇ ಮಾತುಗಳು. ಯಾಕಂದ್ರ ಸಂತುನ ಮಕ್ಕಳು ದುಡದು ಉಣ್ಣಾಕ ಹತ್ತಿದ್ರು. ವರ್ಷಕೊಂದ್ರಂಗ ಹೊಲ ಹಿಡಿತ್ತಿದ್ರು

ಇವೇ ತಾಂಡದ ಮಂದಿ ನಿದ್ದಿ ಕೆಡಿಸಿದ ವಿಚಾರಗಳು. ಒಂದೆರಡು ಮಂದಿ ಸಾಲಿಗೂ ಸೇರಿಕೊಂಡು ಮುಂದ ಮುಂದ ಹೊಕ್ಕಿದ್ರು ಹೆಂಗಾನ ಮಾಡಿ ಅವರವರಿಗೆ 'ಭೂ' ಬಿಟ್ಟು ಮಜ ನೋಡ್ತಿದ್ರು. ಲುಕ್ಷಣ ಯಾರದಾತು ಅಂತ ಇಬ್ಬರು ಅಣ್ಣ ತಮ್ಮ ಯೋಚನೆನೆ ಮಾಡ್ಲಿಲ್ಲ. ಹಂಗ ಮಾಡಾಕ ಮಂದಿನೂ ಬಿಡ್ಲಿಲ್ಲಾ. ಕಡೀಗ ಮಂಗ್ಯಾನಾಯ್ಕ ಊರ ಮುಂದಿನ ಹತ್ತ ಎಕ್ಕರೆ ಜಮೀನಿನಲ್ಲಿ ನಾಕ ಎಕ್ಕರೆ ಮಾರಿ ಕೋರ್ಟಿನ ವ್ಯಾಜ್ಯ ಆಡಿದ. ಅಲ್ಲಿಗೂ ಪೂರ್‍ಯಗ ನೆಮ್ಮದಿ ಸಿಗಲಿಲ್ಲಾ. "ಇವನೇನೊ ಕಳ್ಕಂಡ ಆದ್ರ ಆ ಸೂಳಿಮಗಗ ಏನೂ ಆಗಲಿಲ್ಲಾ. ತಿಂಗಳ ಪೂರ್ತಿ ಕತ್ತಿ ದುಡದಂಗ ದುಡುದು ಕೊನಿಗ ಕೋರ್ಟಿಗೆ ಹಾಜರಾಗಿ, ಕೇಸು ಗೆದ್ದರು" ಗೊಣಗಿಕೊಂಡ. ಈ ಜಂಜಾಟದಲ್ಲಿಯೇ ಚಿಮ್ನಿ ರೋಷಿ ಹೋಗಿದ್ಲು. "ಸಂಬಂಧಕ್ಕ ಬೇಲಿನೆ ಇಲ್ವಾ, ಯಾಕಿಂಗ, ಅಪ್ಪ, ದೊಡ್ಡಪ್ಪ ಜಗಳ ಕಾಯಬೇಕು? ಹಗಲು ರಾತ್ರಿ ಒಂದ ಮಾಡಿ, ಹರದು ಮೈಕಾಣೋ ಅರವಿ ಹಾಕ್ಕಂಡು ಮಂದಿ ಮಾತಾಡೋದನ್ನ ಕೇಳ್ಕಂಡು, ಸಹಿಸಿಕೊಂಡು ಮರ್ಯಾದಿಯಿಂದ ಜೀವನ ಮಾಡಾಕಂದ್ರ...?" ಅವಳ ಎದಿಯೊಳಗಿನ ಅನುಮಾನಗಳಿಗೆ ಉತ್ತರಿಸೋಕೆ ಯಾರು ಇರ್ಲಿಲ್ಲಾ. ಅಕಿ, ಒಳಗೊಳಗೆ ನೊಂದು ಸುಡ್ತಾ ಹೊಕ್ಕಿದ್ಲು.ಒಂದು ಒಳ್ಳೆ ದಿನದ ಕನಸು ಕಾಣತೊಡಗಿದಳು:

ಅದೆಂಥ ಕನಸು, ಆಕಾಶಮಾರ್ಗದೊಳಗ ಕುದುರಿಸವಾರಿ ಮಾಡ್ಕೊಂಡು ಮನ್ಮಥನಂತ ರಾಜಕುಮಾರನೊಬ್ಬ ಭೂಮಿಗ ಬಂದ. ಅಜಾನುಬಾಹು, ಭೂಮಿ ಅಗಲದ ಎದಿಮ್ಯಾಲ ಗರಕಿ ಹೊಲ್ಲಿನ ಪೊದಿಯಂತ ಕೂದ್ಲು, ಚಿಗರ ಮೀಸಿ, ತೊಲಿಕಂಬಂದ ರಟ್ಟಿಗಳು. ಯಾವ ಸೀಮೆಯವನೋ ಯಾವನಾಡಿನವನೋ ಏನೋ ಆ ಸುರಸುಂದರಾಂಗ. ಹತ್ರ ಬರ್ತವ್ನೆ, ಇನ್ನೂ ಹತ್ರ ಬಂದೆ ಬಿಟ್ಟ. ನಾಚಿಕೆಯಿಂದ ಮುಖಮುಚ್ಕೊಂಡೆ, ಅಂವ, ಬಿಡವಲ್ಲ. ಎರಡೂಕೈಗಳಿಂದ ಮುಚ್ಚಿದ ಕೈಗಳನ್ನು ಮುಟ್ಟಿದ. ಮೈಯೆಲ್ಲಾ ವಿದ್ಯುತ್ ಸಂಚಾರಗೊಂಡಂತಾಗಿ ದಿಕ್ಕೆ ತಿಳಿದಂಗಾತು. ತುಟಿಗಳು ಕಂಪಿಸತೊಡಗಿದವು. ಮೈನಡಗುತಿತ್ತು, ಕಣ್ಣುಗಳು, ಮತ್ತೆ ಮತ್ತೆ ಅವನ ಯೌವ್ವನದ ಹಂಗಾಮನ್ನ ಹೀರುತ್ತಿದ್ದವು. ಒಂದಕಡೆ ನಾಚಿಕೆ, ಮತ್ತೊಂದ ಕಡೆ ತೀರೆಲಾರದ ಬಯಕೆ, ನೋಡಿದಷ್ಟು ದಾಹ ಹೆಚ್ಚಾಗ್ತಲೆ ಇತ್ತು. ಅಲ್ಲಿ ನಾವಿಬ್ಬರೆ, ನಾನು ರಾಜಕುಮಾರಿಯಾಗಿದ್ದೆ ಅವನು ರಾಜಕುಮಾರ. ಅವನು ಗಂಡು ಹಂಸದಂತೆ ನನ್ನ ಸೌಂದರ್ಯವನ್ನು ಹೀರಲು ಬಂದೊಡನೆ ಕೊಸರಿಕೊಂಡು ಓಡಿದೆ. ಅಬ್ಬಾ ಈ ಗಂಡಸರು, ಎಷ್ಟೊಂದು ನಿರ್ಲಜ್ಜಿತರು. ಅದೇನ

ಅವಸರ, ಅದೇನ ಕಾತರ. ಒಂಟಿ ಹೆಣ್ಣು ಸಿಕ್ಕರೆ ಕಚ್ಚಿ ತಿಂದು ರುಚಿನೋಡದೆ ಬಿಡೋನ ಎಂಬ ಹಪಹಪಿ. ನಾನು ಎಷ್ಟೇ ಆದರೂ ಬೀಜವನ್ನೂ ಹೊರುವ ಭೂಮಿತಾನೆ? ಒಮ್ಮೆ ಬಿತ್ತಿದ ಬೀಜ ಮೊಳಕೆಯಾಗಿ, ಟಿಸಲು ಹೊಡೆದು, ಚಿಗುರಿ ಹೆಮ್ಮರವಾಗುವುದರೊಳಗೆ, ನಾನೆ ಗಂಭೀರವಾಗಿರಬೇಕು. ಕ್ಷಣಕಾಲ ಮೈಮರೆತರೆ ಆಗಬಾರದ್ದೆ ಆಗಿ ಅನಾಹುತವಾಗಿ ಬಿಡುತ್ತದೆ ಆಗ? ಹೊಣೆ ಹೊರಲು ನಾನೆ ಸಿದ್ಧಳಿರಬೇಕು. ಅವನ ಕಡೆ ಸಮಾಜ ಬೆರಳು ಮಾಡಿ ತೋರಿಸುವುದಿಲ್ಲ, ನೀನು ಹೆಣ್ಣು, ಗಂಭೀರತೆ ನಿನ್ನೊಳಗಿರಬೇಕು. ಸಾವಿರಾರು ಸವಾಲುಗಳು, ಅವನ ಸಲುವಾಗಿ ಅವೆಲ್ಲವನ್ನು ಎದುರಿಸಲು ಸಿದ್ಧ, ಅವನ ಸ್ಪರ್ಶದಲ್ಲಿ ಅದೆಂಥ ಮೋಡಿ ಇದೆ, ನನ್ನ ಅಂಗಾಂಗಳೆಲ್ಲವೂ ಕಾವೇರಿದ್ದವು, ನಾನು ನಾನಾಗಿರಲಿಲ್ಲಾ. ನಾನು ಸೋತಿದ್ದೆ ಅವನು ನನ್ನಾಳಕ್ಕೆ ಆವರಿಸಿದ್ದು, ನನ್ನೊಳಗೆ ಬೇರು ಬಿಟ್ಟಿದ್ದ. ಇದು ನನ್ನ ದೌರ್ಬಲ್ಯವೋ, ದುರ್ಭಾಗ್ಯವೋ ಅವನನ್ನ ಕಳ್ಕೊಳೋದಕ್ಕೆ ಮನಸ್ಸು ಒಪ್ಪಲಿಲ್ಲ ಬದಲಾಗಿ ಪೂರ್ತಿಯಾಗಿ ಅವನೊಳಗೆ ಲೀನವಾಗಿತ್ತು. ಅದೇನು ವಶೀಕರಣ ಕಲ್ತವರೋ ಈ ಗಂಡಸರು ಏಕಾಂತದೊಳಗೆ ಬೆನ್ನು ಬಿಡದೆ ಕಾಡ್ತಾರೆ.

ಚಿಮ್ಮಿ ಕಣ್ಣು ಬಿಟ್ಟಾಗ ಎದಿನೋವು ಹೆಚ್ಚಾಗಿತ್ತು. ಉಸಿರಾಟ ಜಾಸ್ತಿಯಾಗಿತ್ತು, ಕೂಗೋದಕ್ಕೆ ಉಸಿರಿಲ್ಲದೆ, ಸಾಯೋದಕೂ ಆಗದೆ ಕೈಕಾಲು ಬಡಿತಾ ಇದ್ಲು. ಪಕ್ಕದಲ್ಲಿ ಮಲಗಿದ್ದ ಅವಳವ್ವ, ಯಾಕವ್ವ ಏನಾತು? ಅಲುಗಾಡಿಸಿ ಎಚ್ಚರಿಸಿದ ಮೇಲೆ ವಾಸ್ತವಕ್ಕೆ ಬಂದಳು. ನೋವಿನೊಳಗೂ ಒಮ್ಮೆ ಮುಗುಳ್ನಕ್ಕು ನನಸಾಗದ ಕನಸನ್ನು ಮತ್ತೆ ಅನುಭವಿಸಲು ನಿದ್ದೆಗೆ ಜಾರಬೇಕೆಂದರೆ ಪಕ್ಕದ ಅವಳ ದೊಡ್ಡಪ್ಪನ ಮನೆ ಹ್ಯಾಟಿ, ಕೋ ಕೋ ಕೋ..... ಎಂದು ಐದು ಗಂಟೆಯಾದದ್ದನ್ನು ಸಾರಿ ಹೇಳಿತ್ತು. ನಸುಕಿನಲ್ಲೇ ರಾಗಿ ಕೊಯ್ಯದಕ್ಕೆ, ಸಿವುಡುಕಟ್ಟೋದಕ್ಕೆ ಹೋಗಬೇಕಿದ್ದ ಮನಿಮಂದಿ ತಮ್ಮ ಪಾಡಿಗೆ ತಾವು ರೊಟ್ಟಿಸುಡಾಕ, ಚಹ ಕಾಸಕ, ಜೋಳದ ನುಚ್ಚು ಒಲಿಮ್ಯಾಲ ಬೇಯಿಸಾಕ ಸುರುಮಾಡ್ಕಂಡಿದ್ರು. ಮನಿತುಂಬ ಹೆಣ್ಣಬೋಳಿಗಳೆ ಇದ್ದಿದ್ಕ ಯಾರು ಯಾರ ಮೇಲೆ ಹೇಳದೆ ಅವರವರ ಪಾಡಿಗ ಅವರವರ ಕೆಲ್ಸ ಮಾಡ್ಕೊಳ್ತಿದ್ರು. ಉಳಿದ ಚಿಕ್ಕೊವು ಎಮ್ಮಿ ಹೊಡ್ಕಂಡು ಕೆರಿದಂಡಿಗ ಹೊಂಟ್ರ ಒಬ್ರೋ, ಇಬ್ರು, ತೊಗರಿ ಪುಳ್ಳಿಯಿಂದ ಕಟ್ಟಿದ ಬರ್ಲಿಂದ ನೆಲಾನ ಪರಪರಾಂತ ಗುಡಿಸಿ, ಎಮ್ಮಿಕಾಲಿಂದು, ಎತ್ತುಗಳ ಕಾಲಿಂದ ಸಗಣೆನೆಲ್ಲಾ ಗುಡಿಸಿ ದೊಡ್ಡಪುಟ್ಟಿಗ ತುಂಬಿಸ್ಸಿ ಮತ್ತೊಬ್ಬಳ ತಲಿಮ್ಯಾಲ ಹೊರಸ್ತಿದ್ಲು.

ಮಂಗ್ಲ್ಯಾ ಮಾತ್ರ ಹಾಸಗಿ ಮ್ಯಾಲಿಂದ್ಲೆ, ಅಜುಬಾಜಿನ ಅವನ ಒರಿಗೆಯ ಗಂಡಸರೆಲ್ಲಾ ತಾವತಾವೆ ಎದ್ದು ಕಸ ಮುಸರಿ ಮಾಡ್ತಿರೋದ ನೋಡಿ ಖುಷಿಯಿಂದ,

ತನಗ ಆ ಪಾಡಿಪಾಟ್ಲೆ ಇಲ್ಲ. ಹೆಣ್ಣಾದರೇನಂತೆ, ಗಂಡಮಕ್ಕಳಂಗೆ ಕೆಲ್ಸ ಬಗ್ಸಿ ಮಾಡ್ತಿದಾವಲ್ಲ ಇನ್ನೇನು, ಗಂಡಸಾದ್ರೆ, ಮದ್ವಿಮಾಡಿಸಿ, ಅವನಿಗೆ ಆಸ್ತಿಯೊಳಗಿಂದ ಪಾಲಕೊಟ್ಟು ನಾಳೆ ಅವನ ಹೆಂಡತಿ ಅದೆಂಥೊಳಬರ್ತಳೋ ಏನೋ? ಅವಳ ಕೈಯಾಗ ಥು...ಛಿ.." ಅನ್ನಿಸಿಕೊಳೋದಕ್ಕಿಂತ, ಈ ಹೆಣ್ಣು ಬೋಳಿಗಳನ್ನೆ ಮದ್ವಿ ಮಾಡಿ ಆಚೆದಬ್ಬಿದರೆ ಈ ಮನಿಆಸ್ತಿ ಎಲ್ಲಾ ನಮಗೆ ಉಳಿಯುತ್ತೆ, ನಾಕದಿನ ತಿಂದುಂಡು ಮೆರದಾಡಿದ ಮೇಲೆ ಅದ್ಯಾವನಾರೂ ಅನುಭವಿಸಲಿ, ' ಸತ್ತಮುಕಳಿ ಎತ್ತ ಬಿದ್ರೇನು?' ನೋಡೋರು ಯಾರು ಅಂಥೇಳಿ ಆಲೋಚನೆ ಮಾಡ್ತಲೇ ಕಿಸೆಯೊಳಗಿಂದ ಫೈಜಬೀಡಿ ತಗೊಂಡ ಬೆಂಕಿ ಗೀರಿ ಹಲ್ಲಿಗೆ ಕಚ್ಕೊಂಡು ಹೊಗೆ ಉಗಳ ತೊಡಗಿದ. ಗದ್ಲ ಇಲ್ಲದೆ ಕೆಲಸ ಮಾಡ್ತಿರೋದನ್ನ ನೋಡಿ ಮನದೊಳಗೆ ನಕ್ಕ. "ಬೇವರ್ಸಿಗಳು, ಪಕ್ಕದ ಮನಿಯೊಳಗೆ ಮೂರ ಅದಾವ ಮೂವತ್ತು ಆಡ್ವಂಗ ಆಡ್ತವೆ, ಇನ್ನೂ ಆ ಹಿಂದಲ ಓಣಿಯೊಳಗಿನ ಹಟ್ಟನಾಯ್ಕನಿಗೆ ಆರೇಳು ಗಂಡು ಸೀಮ್ಯಾಗಿಲ್ದಂಗೆ ಆಡ್ತವೆ. ಮುಂಜಾನೆ ಎದ್ದೊಡನೆ ನೆಮ್ಮದಿ ಜೀವನ ಹಾಳಮಾಡ್ತವೆ, ಸಂಜಿಯಾದಿಂದ ಹೊಟ್ಟಿಗ ಹೆಂಡ ಬಿಳ್ತಿದಂಗೆ, ಕೈಯಾಗ ಬಡಗಿ ಬರ್ತವೆ. ಯಾರಪಾಡಿಗ ಹೋಗಲ್ಲ, ಅವರಾಗಿ ಬಂದ್ರಂತು ಬಿಡಂಗಿಲ್ಲ. ಬೇ ಚೈನಿ, ಬಾ ಇಲ್ಲಿ" ಕೂಗಿದ. ಏನೋ ಕೆಲ್ಸ ಮಾಡ್ತಿದ್ದೋಳು ಬಿಟ್ಟ್ಯಾಕಿನ ಓಡಿ ಬಂದಿದ್ಲು. "ಏನಪ್ಪ, ಯಾಕ ಕರದಿ" ಅಂದ್ಲು, "ಏನಾತು, ಇಲ್ಲ ಅದಿರಲ್ಲ, ಹೊತ್ತಾರೆ, ರಾಗಿ ಸಿವುಡ ತಿರವಬೇಕು, ಇಲ್ಲಿಕ್ರ ಗಣಕಿ ಮುರದು ತೆನಿ ನೆಲದ ಪಾಲ ಆಕ್ಕಾವ್ರವ್ವ, ನೋಡುಹೋಗು, ಎಲ್ಲರನ್ನು ಹೊಂಡ್ಸು" ಅಂತೇಳಿ ತಾಕೀತು ಮಾಡಿದ. "ಅಯ್ಯ, ನಾನ ಅಂದ್ರೆಲ್ಲಿ ಹೊಕ್ಕಾರವರು, ನಿನ್ನ ಮಗಳು ಚಿಮ್ನಿ ಮಾತು ಕೇಳೋರು ಅಕಿ ಅದೇನು ಮಾಡ್ಯಾಳೋ ಮನಿಮಂದಿಗೆಲ್ಲಾ, ಅಕಿಮಾತಂದ್ರ ವೇದವಾಕ್ಯ ಎಲ್ಲರಿಗೂ, ಯಾರೊಬ್ಬರು, ವಿರೋಧ ಮಾಡಂಗಿಲ್ಲ, ಆಗಲ್ಲ ಅನ್ನೋದೇ ಇಲ್ಲ ಅಂತೀನಿ" ತಮಾಷೆಯಿಂದಲೆ ಹೇಳಿ ಅಲ್ಲಿಂದ ಓಡಿದ್ಲು. "ಏಯ್, ಆಕಿ ಮಗಳಲ್ಲ ನಂಗ, ಮಗ, ಆಕಿ ಮಾತು, ಕತೆ, ನಡೆನುಡಿ, ರೀತಿ ರಿವಾಜು ಎಲ್ಲಾ ಶುದ್ಧ ಅಂದಂತೆ ಮಾಡ್ತಳಾ, ಯಾರ ಮನಸ್ಸು ನೋಯಿಸೋದಿಲ್ಲ ಅಕ್ಕಂದಿರನ್ನು, ತಂಗಿಯರನ್ನ ಪಸಂದಾಗೆ ನೋಡ್ಕಂತಾಳ, ತಾಂಡದ ಮಂದಿ ಯಾರರು ಬೆಟ್ಟ ಮಾಡಿ ಹೇಳ್ಲಿ ಚಿಮ್ನಿ ಹಿಂಗಂತ ಅವತ್ತೆ ನಾನು ಮೀಸೆ ಬೋಳಸ್ಕಂತೀನಿ. ಅದ್ಯಾವ ಜನ್ಮದ ರಿಣಾನೋ ಏನೋ ನನ್ನವ್ವ ನಂತಾಯಿ ನನ್ನ ಹೊಟ್ಟೆಯೊಳಗೆ ಹುಟ್ಯಾಳ. ಮಲತಾಯಿ ಅನ್ನೋ ಭಾವನೆನೆ ಇಲ್ಲ. ಅವರವ್ವಗಾರು ಆಟುಸಿಟ್ಟು ಮಾಡ್ಕಂಡು ಮಾತಾಡ್ಯಾಳು ಚಿಗವ್ವಗಂತು ಏನೇನು ಹೇಳಲ್ಲ.

ಆಕಿ ಮಾತಂದ್ರೆ ಮುಗಿತು ಶಿರ್ಸಾವಯಿಸಿ ಮಾಡ್ತಾಳೆ. ಇಂಥೋಳ ಬಗ್ಗೆ ಮಾತಾಡೋದಕ್ಕೆ ಯಾರಿಗೂ ಹಕ್ಕಿಲ್ಲ." ಅವನು ಮಾತಾಡ್ತಲೇ ಇದ್ದ. ಹುಡುಗಿಯರೆಲ್ಲಾ ತಮ್ಮ ಪಾಡಿಗೆ ತಾವು ಅಂಬಲಿ ಉಂಡು ಕೈಯೊಳಗೊಂದೊಂದು ರೊಟ್ಟಿ ಚಟ್ನಿ ಹಿಡ್ಕಂಡ ಕೆಲ್ಸಕ್ಕೆ ಹೊಂಟೆ ಬಿಟ್ರು. ಕೆಲವರು ಕೂಲಿ ಕೆಲಸಕೆ ಹೋಗುವವರು ಅವರೊಂದಿಗೆ ಹೊರಟರು. ತಾಂಡದಮಂದಿ ಮಾತ್ರ ಮಂಗ್ಲ್ಯಾ ನಾಯ್ಕನ ಮನಿ ಏಳಿಗೆ ಆಗ್ತಿರೋದನ್ನ ಸಹಿಸಿಕೊಂಡರೆ ಮತ್ತೆ ಕೆಲವರು, ಸಹಿಸಿಕೊಳ್ಳದಾದರು. ಮಂದಿಮನಿಗ ಹೋಗೊ ಹೆಣ್ಣು ಈ ಪಾಟಿ ತಂದಿಮನಿಯೊಳಗೆ ದುಡಿತಾರ ಅಂದ್ರೆ, ಕೆಲವರಂತು ಹುಬ್ಬೇರಿಸಿದ್ರು, ತಡಕೊಳ್ಳಕ ಆಗದೆ " ಏಯ್, ನಿಮ್ಮವ್ವನ ಹಡಬಿಗುಟ್ಟಿದೋವ, ನೋಡ್ರಬೇ, ಆ ಮಂಗ್ಲ್ಯಾನ ಹುಡುಗಿಯರನ್ನ ಮನಿ ಒಳಗೂ, ಹೊರಗೂ, ಇರವೆಗಳಂಗೆ ಹಗಲು ರಾತ್ರಿ ಹೆಂಗ ದುಡದು, ಮನಿತನ ಮುಂದಕ ತರ್ತವೆ, ರಾತ್ರಿ ಚಂದ್ರನ ಬೆಳಕಿನೊಳಗೆ ಹುಡುಗರ ಸರಿಸಮ ರಾಗಿ ಕೊಯ್ಲಿಗ ಹೊಕ್ಕವೆ ಮುಂಜಾನಿ ಹೊತ್ತಾರೆ ನಿಮ್ಮ ಕೂಡ ಕೆಲ್ಸಕ್ಕೆ ಬರ್ತಾವೆ. ನೀವು ಅದೀರ ಅಪ್ಪನ ಗಂಟಿಗೆ ನೀರಬಿಡೋದಕ್ಕೆ ಹುಟ್ಟಿರೋ ಹಂಗೆ, ಇದ್ದಾಗಲೂ ಅಳೋದೆ, ಸತ್ತಾಗಲೂ ಅಳೋದೆ, ಹೋಗ್ರಿ, ಹ್ವಾರೆ ನೋಡ್ರಿ" ಅಂತೇಳಿ ದನಕ್ಕೆ ಗದರಿದಂಗೆ ಗದರಿಸಿ ಕಳುಹಿಸುತ್ತಿದ್ದರು.

ತಾಂಡದ ಹುಡುಗಿಯರಂತು ಚಿಮ್ನಿ, ಅವಳ ಅಕ್ಕಂದಿರು, ತಂಗಿಯರನ್ನ ಕಂಡೊಡನೆ ಮೂತಿ ಮುರದು, "ನೀವೇನ್ರೇ, ಅಪ್ಪನ ಮನಿ ಉದ್ಧಾರ ಮಾಡೋಕೋ ಹುಟ್ಟಿದೋರು ಹಗಲು ರಾತ್ರಿ ಒಂದ ಮಾಡಿ ದುಡದು ದುಗ್ಗಾಣಿ ಬಡಿತಿರಿ, ನಾವು ದಂಡಪಿಂಡಗಳು ನಮ್ಮಪ್ಪಂದಿರ ಸಂಪತ್ತನ್ನು ಕರಗಿಸೋದಕ್ಕೆ ಹುಟ್ಟಿದವರು. ನಿಮ್ಮಗಳಿಂದ ನಮ್ಮ ನೆಮ್ಮದಿ ಹಾಳ ಆಗಿದೇ. ಯಾಕ್ರೇ ಹಿಂಗ ನಾಡೆಲ್ಲ ಒಂದ ಮಾಡಿ ದುಡಿತೀರಾ, ಎಷ್ಟು ಒಂದ ಎರಡ ಲಕ್ಷರೂಪಾಯಿ ಇಡಿಗಂಟನ್ನ ಇಟ್ಟಿರೇನು ಮನಿಯೊಳಗೆ" ಹಿಯಾಳಿಸುವಂತೆ ಮಾತಾಡಿದ್ರೆ. ಕೆಲವೊಮ್ಮೆ ಮೌನವೇ ಮದ್ದು ಅಂತ ಸುಮ್ಮನಾದರೆ, ಕಾಲುಕೆರದು ಜಗಳಕಂತೇಳಿ ಆಡಿದ ಮಾತುಗಳಿಗೆ ಜವಾಬು ನೀಡುವುದು ಅನಿವಾರ್ಯವಾದಾಗ. "ನೋಡ್ರೆ, ಇದು ನಮ್ಮ ಜೀವನ, ನಮಗ ಬೇಕಾದಂಗ ಬದಕ್ತಿವಿ, ನಮಗೆ ದೇವ್ರ ರಟ್ಟೆಯೊಳಗೆ ಕಸುಕೊಟ್ಟಿರೋದೆ ದುಡಿಯೋದಕ್ಕೆ, ಸುಮ್ಮನೆ ಕುತ್ಕಂಡು ಕೂಳ ಕತ್ತರಿಸೋದಕ್ಕೆ ಹುಟ್ಟಿದೋರಲ್ಲ ನಾವು, ಹುಟ್ಟಿರೋದೆ ಮತ್ತೊಬ್ಬರ ಆಳಾಗಿ ಕೆಲ್ಸ ಮಾಡೋಕೆ, ಇರೋ ಗಂಟ ನಾಕದಿನ ನಮ್ಮಪ್ಪನಿಗೆ ಹೊರೆಯಾಗೋದಕ್ಕೆ ತಯಾರಿಲ್ಲ,

ನೀವು ಶ್ರೀಮಂತರ ಮನಿಯೊಳಗೆ ಹುಟ್ಟಿದಿರ ನಿಮಗೆ ಯಾವ ಅವಶ್ಯಕತೆನೂ ಇಲ್ಲ ನೀವು ಪಾಡಾಗೆ ಇರ್‍ರಿ" ಅಂತೇಳಿ ಶಾಂತಿಯಿಂದಲೇ ಉತ್ತರಿಸಿ ಜಾರಿಕೊಳ್ಳುತಿದ್ದರು. ಯಾರ ಜೊತೆಗೂ ಮುಖ ಕೆಡಿಸಿಕೊಳ್ತಾನೆ ಇರ್ಲಿಲ್ಲಾ. ಸಾವರಮಂದಿ ಸಾವರ ಮಾತು ಎಲ್ಲರ ಎದಿರು ಖುಷಿ ಖುಷಿಯಾಗೆ ಇರೋರು. ಅಕ್ಕತಂಗಿಯರು ಯಾವತ್ತು ಕಚ್ಚಾಡಿದ್ದೇ ಇಲ್ಲ. ಒಂದೊಂದ ಸಲ ಕೂಲಿಗ ಹೋದ್ರೆ ಹಿಂಡಿಂಡಾಗೆ ಹೋಗ್ತಿದ್ರು. ಅಡ್ವಾನ್ಸ್ ಇಸ್ಕೊಂಡ್ರೆ ತೀರೊವರಿಗೂ ಬಿಡ್ತಿರಲಿಲ್ಲಾ. ತಾಂಡದ ಸುತ್ಲ ಲಿಂಗಾಯ್ತ್ರು, ಜಮೀನ್ದಾರ್ರು ಚಿಮ್ಮಿನ ತುಂಬಾನೆ ನಂಬಿದ್ರು. ಸಾಲಕಂತ ಹೊದೋರಿಗೆ, "ನೋಡ್ರಲೇ ನಿಮ್ಮೊರಳಗೆ ನಿಯತ್ತಿನ ಮನಷ್ಯಳು ಅಂತಂದ್ರ ಆ ಮಂಗ್ಲ್ಯನ ಮಗಳು ಚಿಮ್ಮಿ ಒಬ್ಬ." ರಾಘವ ಹೇಳಿದ ಅದಕ್ಕೆ ರಂಗೋಲಿ ಸಿದ್ದ. ಮುಕಳಾಗ ಉರಿಬಂದ್ರು ಆಗೋ ಕೆಲ್ಸ ಆಗಾಕಿಲ್ಲ ಅಂತಂದು, ಲಿಂಗಾಯ್ತರ ರಾಘುವ ಸಾವುಕಾರ, ಕಾಗಿ ಕರ್‍ರಗೈತೆ ಅಂದ್ರ ಹೂಂ ಅಂತಿದ್ದ ಬೆಳ್ಳಗೈತೆ ಅಂದ್ರೂನುವೆ ಹೂಂ ಅಂತಿದ್ದ. "ಹೌದಬುದ್ಧಿ ಭೋ ನಿಯತ್ತಿನವಳು" ಅಂದ.

"ಅಪ್ಪಿತೆಪ್ಪಿ ಲಮಾಣಿ ಮಂದ್ಯಾಗ ಹುಟ್ಟಾಳ ನೋಡು." ಅವನ ಮಾರಿ ನೋಡಿದ. "ಅಕಿ, ನಮ್ಮಮಂದಿಯೊಳಗ ಹುಟ್ಟಬೇಕಿತ್ತು, ಅದೇನು ಸಂಸ್ಕಾರ, ಅದೇನ ಲೆಕ್ಕಾಚಾರ, ಛೇ ಛೇ" ಲೊಚಗುಟ್ಟಿದ ರಾಘುವ. ರಂಗೋಲಿಗ ಯಾಕೋ ಹೆಚ್ಚಾತು ಅನ್ಸಾಕತ್ತು. ಆದ್ರೂ ಕಾಸುಕಿಳೋಗಂಟ ಎದ್ರು ಮಾತಾಡಂಗಿಲ್ಲಾ ಅಂದವ್ನೆ. "ಹೌದಬಿಡ್ರಿ ಖರೇನ ಐತಿ" ಅವನ ಮಾರಿನೋಡಿದ. "ಕಲಿರಲೆ, ಆ ಹುಡುಗಿನ ನೋಡಿ ಸೂಳಿಮಕ್ಕಳ್ರ, ಕತ್ತಿ ದುಡದಂಗ ದುಡಿತೀರ ಸಂಜಿಗ ಹೋಗಿ ಹೆಂಡ, ಸರಾಯಿಗ ಸುರಿತಿರ" ರಂಗೋಲಿಮಕಕ್ಕ ಎಲೆ ಅಡಕಿ ತಿಂದ ಉಗದಂಗ ಹೇಳಿದ. "ಎಯ್, ನಾನು ಆ ಪಾಠಿ ಕುಡಿಯಂಗಿಲ್ಲಾ ಬಿಡಿ" ಅವನ ಮೇಲಿನ ಅಪವಾದ ಜಾಡಿಸಿ ಬೇರೆಯವರ ಮೇಲೆ ಹಾಕಕ ನೋಡದದ ರಂಗೋಲಿ. "ಅಲ್ಲಲೇ ರಂಗೋಲಿ, ಆಟು ದುಡಿತಿರಲ್ಲಾ, ಎಲ್ಲಿಟ್ಟಿರಿ ದುಡ್ನ ಅಲ್ಲಾ ಏನಾರು ಹಗೇವ ತೋಡಿರೇನು ಮನಿಯೊಳಗ? ಅಂಡ ಹರಿಯೋ ಮಟ ದುಡಿತಿರಲ್ಲ, ಆ ದುಡ್ಡೆಲ್ಲಾ ಎಲ್ಲಿ, ಮತ್ತ ಉಣ್ಣಾಕ ಏನಂತ ಕೂಳ ಉಣ್ಣಂಗಿಲ್ಲ ನೀವು, ಅದೇ ಒಣರೊಟ್ಟಿ ಹಸಿಕಾರದ ಚಟ್ನಿ ಇನೇನು ನಮ್ಮಂಗೇನು, ಹಾಲು, ಮೊಸರು, ತುಪ್ಪ ತಿಂದಿರಾ" ಅಳಲು ತೋಡಿಕೊಂಡ. ಖುದ್ದು ಅವನ ಮನಿಯೊಳಗೆ ಎರಡ ದನಗಳು ಹಾಲು ಕರಿತಾ ಇದ್ರು ಯಾವತ್ತು ಹಾಲ ಕುಡದವನೇ ಅಲ್ಲ. ನೀರ ಮಜ್ಜಿಗೆ ಬಿಟ್ರೆ ಬೆಣ್ಣೆ ಮೊಸರು ತಿಂದವನಲ್ಲ, ಬೆಣ್ಣೆ ತೆಗೆದು ಮಾರಿನೆ ಸಂತಿ, ಹಬ್ಬದ ಖರ್ಚು. ಇಲ್ಲಕ್ರ ಇಲ್ಲ

"ಹೌದು, ನನ್ನ ಹಿಂದ ಮುಂದ ಸುತ್ತಾಡಕ ಹತ್ತಿಯಲ್ಲ ಏನ್ಸಮಾಚಾರ?" ರಾಘುವ ನೇರವಾಗಿ ಮಾತಿಗ ಬಂದ. "ಅದೇ ಬುದ್ಧಿ ಮೂರಾಳ ಕಳೇಕ ಬರ್ತವೇ ಒಂದ ಮುನ್ನೂರು ಅಡ್ವಾನ್ಸಿ ಬೇಕಿತ್ತು" ಅಂದ. "ಮುನ್ನೂರ?" ರಾಗ ಎಳೆದ. "ನಿಮ್ಮ ಕಳೆ ಮುಗಿಯೋ ಮಟ ಯಾರದು ಹೋಗಂಗಿಲ್ಲ ಬಿಡಿ, ಅರ್ಜೆಂಟ್ ಹಬ್ಬ" ರಾಗ ಎಳದ. "ನಿನ್ನ ನಂಬಾಕ ಆದಿತೇನ್ಲೆ ರಂಗೋಲಿ, ಮುನ್ನೂರ ರೂಪಾಯಿ ಅಂದ್ರ ವಸಿ ಆತೇನು, ಹ್ವಾದಸಲ ತಗೊಂಡ ಹೋಗಿ, ಕಡದು ಕಿಸದದ್ದು ಆಟೆ ಐತೆ. ನೀನು ಮದ್ಲೆ ತಂಜಾವರಿ ಮನಷ್ಯ" ಮಕಕ ಮಚ್ಚಿ ತಗೊಂಡ ಹೊಡದಂಗ ಹೇಳಿದ ರಾಘುವ. "ಎನ್, ಬುದ್ಧಿ ಹಿಂಗಂದ ಬುಟ್ರಿ, ಯಾ ಪಾಟಿ ದಗದ ಮಾಡೀವಿ ನಿಮ್ಮದು, ನಿಮ್ಮ ತಂದಿಯೋರ ಕಾಲದಿಂದ್ಲೂವೆ ನಾವೇ ದುಡದೋರು, ನಮ್ಮಪ್ಪ ನಾವೆಲ್ಲ ಹ್ವಾರೆ ಮಾಡೀವಿ, ನೀವು ನೋಡಿದ್ರ, ನಿನ್ನೆ ಮನ್ನೆ ಕಣ್ಣಬಿಟ್ಟ ಆ ಚಿಮ್ನಿ ಅನ್ನೋ ಮುರಕಾಸಿನ ಹುಡುಗಿ ಸಂಬಂಧ ನಮ್ನೆ ಹಿಂಗ ಕೆಟ್ಟ ಅಂತಿರಿ. ನಿಮ್ಮ ದುಡ್ಡನ್ನ ಯಾವಾಗ ತಿಂದಿವಿ ಹೇಳಿ" ಛಲದಂಕ ಮಲ್ಲನಂಗ ಸಾಲ ಕೀಳಲೇ ಬೇಕಂತ ಹಠ ತೊಟ್ಟೋನಂಗೆ ಹೇಳಿದ ರಂಗೋಲಿ.

" ಅಲ್ಲ ದುಡ್ಡ ತಿಂದಿ ಅಂತ ಹೇಳಲಿಲ್ಲಾ ಬರ್ತ ಬರ್ತ ಲಮಾಣ್ಯರ ತಾವ ನೀಯತ್ತ ಕಮ್ಮಿ ಆಗಾಕ ಹತ್ಯತಿ ಅಂದೆ ಆಟೇಯ". ಸುಮ್ಮನಾದ. "ಏನೋ ಬಿಡ್ರಪ್ಪ, ಎಷ್ಟೋ ವರ್ಷಗಳಿಂದ ನಿಮ್ಮ ಮನಿ ನಾಯಿ ಹಂಗ ದುಡಿತಿರೊ ನಮಗೆ ಹಿಂಗಂತಿರ, ಆಯ್ತು ಬೇಡ ಬಿಡಿ ಬ್ಯಾರೆ ಕಡಿಗ ಕೇಳ್ತೀನಿ." ಕೊಡವಿಕೊಂಡ ಎದ್ದ "ಲೇ ರಂಗೋಲಿ, ಬಾರಲೇ, ಅದ್ಯಾಕ ಹಿಂಗಾಡಿಯ, ನೋಡು ನಿನಗ ಕಾಸ ಕೊಡಬೇಕಾದ್ರ ಚಿಮ್ನಿ ಒಂದ ಮಾತು ಹೇಳಬೇಕು. ಕಣದಾಗ ಬತ್ತದರಾಸಿ ಮಾಡಾಕ ಹತ್ಯಾರು, ಹೋಗಿ ಕರ್ಕಂಡ ಬಂದ ಬಿಡುಹೋಗು. ಅವಳು ಹೂಂ ಅಂದ್ರ ಈಗಿಂದಿಗಲೇ ರೊಕ್ಕ ಕೊಡ್ತಿನಿ" ಅವನನ್ನ ಸಾಗ ಹಾಕಿದ. "ಯಾಕ ಆಗವಲ್ದಬಿಡಿ, ನನ್ನ ಮ್ಯಾಲ ನಿಮಗ ಯಾಕೋ ಅಷ್ಟೊಂದು ಅನುಮಾನ ಇದ್ದಂಗೆ ಕಾಣತೈತೆ." ಗೊಣಗುತ್ತಲೇ ಅನುಮಾನದಿಂದ ಹೊರಟ. ತಲಿಯೊಳಗೆ, ಚಿಮಣಿ ಅನ್ನೋ ಹುಡುಗಿ ಹತ್ರ ಹೋಗಿ ರೊಕ್ಕಕ ಶಿಫಾರಸು ಮಾಡಿಸೋ ಹಂಗ ಆಯ್ತಲ್ಲಾ ಎನ್ನುವ ಅಳಕು ಕಾಡತೊಡಗಿತು.

ಆ ಚೊಟುದ್ದು ಹುಡುಗಿತಾವ ನಾ ಹೋಗಿ ಕೇಳೋದಾರು ಹ್ಯಾಂಗಂತ ಪಿಕಲಾಟಕ್ಕ ಇಟ್ಕೊಂಡಿತ್ತು ರಂಗೋಲಿಗ. ದುಡ್ಡಬೇಕಾದ್ರ ಅಕಿತಾವ ಹೋಗಬೇಕು, ಪುಸಲಾಯಿಸ

ಬೇಕು. ಊರಿಗಹ್ವಾದ್ರ ಹೆಂಡ ಕುಡಿಯಾಕ ಕಾಸೇ ಇಲ್ಲ. ಮುಂದ ಬಂದಿದ್ದನ್ನ ಆ ಮ್ಯಾಲ ನೋಡ್ಕೊಂಡ್ರ ಆಯ್ತು ಅಂತೇಳಿ ತೀರ್ಮಾನಿಸಿದವನೆ, ಸರಸರ ರಾಘುವನ ಬತ್ತದ ಒಕ್ಕಲಿಗ ನಡದ. ಚಿಮ್ನಿ ಎಲ್ಲರಿಗಿಂತಲು ಮುಂದೆ ಮುಂದೆ ಕೆಲ್ಸ ಮಾಡ್ತ, ನಿಂತೋರಿಗೆ, ಕುಂತೋರಿಗೆ, "ಎಯ್, ಸಾವ್ರಕಾರ್ರು ಇಲ್ಲದಾಗ ಹಿಂಗ ಕುಂಡ್ರಬಾರ್ದು ಎಳ್ರಿ" ಅಂತೇಳಿ ಎಬ್ಬಿಸುತ್ತ, ಹೆಡ್ಡ್ ಆಳನಂಗೆ ಕೆಲ್ಸ ಮಾಡಿಸುತ್ತಿದ್ಲು. ಇವಳೇನು ಸಾಮಾನ್ಯದೊಳಲ್ಲಪ್ಪೋ ಅನಿಸಿತು ರಂಗೋಲಿಗೆ, ಸಾವ್ರಕಾರ ಬ್ಯಾರೆ, ಇಕೀನ ನಡಕ್ಕ ಸಿಗಸೋ ಪ್ರಯತ್ನ ಮಾಡ್ತವ್ನೆ, ನಾನೇನಾದರು ಯಾಮಾರಿಸೋದಕ್ಕೆ ಪ್ರಯತ್ನಪಟ್ರೇ ನನ್ನ ಜೀವಾನೇ ಜಾಲಾಡಿಸಿ ಬಿಡ್ತಾಳೆ ಈ ಹುಡುಗಿ ಅಂದವನೆ, ಕ್ಷಣಕಾಲ ಆಲೋಚನೆಯಲ್ಲಿ ತೊಡಗಿದ. ಇಂಥ ಎಷ್ಟೋ ಮಂದಿಗ ರಂಗೋಲಿಹಿಟ್ಟು ತಿನ್ನಿಸಿದೋನು ನಾನು ಇವಳಿಗ ಪಂಗನಾಮ ಹಾಕೋದು ನನ್ನ ಎಡಗೈ ಕೆಲಸ. ಕಾಲಿಗ ಬಿದ್ದು ಕಾಲುಂಗುರ ಬಿಚ್ಚೋ ನನಂತಾವ ಆಟ ಆಡಿದ್ನಲ್ಲಾ ರಾಘುವ ಅವನಿಗೆ ಸರಿಯಾಗಿ ಪಾಠಕಲಿಸಬೇಕು. ಅಂಥೇಳಿ, ಆಲೋಚನೆ ಮಾಡಿದವನೆ "ಚಿಮ್ನಿ, ನಾ ಹೇಗಂತ ನಿನಗೆ ಚೆನ್ನಾಗಿ ಗೊತ್ತು, ಆಟುಬಂದು ರಾಘುವಪ್ಪನಿಗೆ ಹೇಳು ಅಡ್ವಾನ್ಸ್ ಕೊಡೊದಕ್ಕೆ, ಅದೇನ ಕಂಡವನೋ, ನಿಂಥವ" ಗೊಣಗಿಕೊಂಡ. ಚಿಮ್ನಿಗ ಏನ ಹೇಳ ಬೇಕಂತ ತಿಳಿಯಲಿಲ್ಲಾ. "ಅಲ್ಲ ರಂಗೋಲಿ ಅಣ್ಣ, ನಿಮ್ಮ ವ್ಯವಹಾರ ಸರಿಗಿಲ್ಲ ಕಣಪ್ಪ, ನಾ ಹೇಳಲ್ಲ, ಇಲ್ಲಿ ದುಡ್ಡು ಇಸ್ಕೊಂಡು ಬ್ಯಾರೇರ ಕೂಲಿಗ ಹೋಗೋ ಪೈಕಿ ನೀವು. ನಾನೆಲ್ಲಿ ನಿಮ್ಮ ಮನಿಗ ಅಲಿಲಿ" ನಿರಾಕರಿಸಿದ್ಲು. "ಅಯ್ಯ, ತಂಗಿ, ಆ ದಿನಗಳು ಹ್ವಾದ್ವು, ಈಗ ಎಲ್ಲಿಗ ಹೋಗೋಣ ಏನೆ ಆದರೂ ರಾಘುವಣ್ಣನೇ ಗತಿ ಕಣವ್ವ ಹಿಂದೇನೊ ಮಾಡ್ತಿದ್ವಿ ಬುದ್ಧಿಬಂದ್ಯೆತೆ ಈಗ, ಯಾಕವ್ವ ಹಂಗ ಮಾಡಾನೂ" ಪುರಾಣ ಬಿಟ್ಟ. "ಏನೋ, ನಿನ್ನ ಮಾತಕೇಳಿ ಸಹಾಯ ಮಾಡ್ತಿನಿ ನೀ ಏನಾರು ಹೆಚ್ಚು ಕಡಿಮೆ ಮಾಡಿದರೆ ನಾನೇನು ಸುಮ್ಮನೆ ಇರೊಳಲ್ಲ ನೋಡು" ಅವನು ಕರೆಯೋದಕ್ಕಿಂತ ಮುಂಚೆ ಅವಳೆ ರಾಘುವನ ಮನೆಗೆ ಹೋದಳು.

ಮೂರು ನೋಟುಗಳು ಕೈಗೆ ಸಿಕ್ಕಿದ್ದೆ ಶಿವ, ರಂಗೋಲಿ ಬಾಯಿ ಒಳಗೀರೋದನ್ನ ಗಮನಿಸಿ ತಾಂಡದ ಕಡೆಗೆ ಹೆಜ್ಜೆ ಹಾಕಿದ. ತಾಂಡದೊಳಗೆ ಬಂದಿರಬಹುದಾದ ಹೆಂಡವನ್ನು ನೆನಪು ಮಾಡಿಕೊಂಡಾಗ ಬಾಯಿ ನೀರೂರಿತು. ಚಿಮ್ನಿ ಹಿಂದಿಂದೆ ನಾಯಿಹಂಗೆ ಜೊಲ್ಲು ಸುರಿಸುತ್ತ ಓಡಿದ ರಂಗೋಲಿ. "ಏನಣ್ಣ, ನನ್ನ ಕರದೆಯಂತೆ, ಈ ರಂಗೋಲಿ ಹೇಳಿದ" ನೆಲ ನೋಡ್ತಿದ್ಲು. "ಅದೇ ಅವನಿಗೆ ಅಡ್ವಾನ್ಸ್ ಬೇಕಂತವ್ವ. ನಾಳೆ ಗಿರಾಕಿ ಉಲ್ಟಾ

ಹೊಡದಾನು ಅಂತೇಳಿ, ನೀ ಹೇಳಿದ್ರ ಕೊಡ್ತಿನಿ ಹಂಗೆನಿಲ್ಲ". ಅವಳ ನಂಬಿಕೆಯನ್ನ ಹೆಚ್ಚಾಸಿದ. ರಂಗೋಲಿಗೆ ಗಾಬರಿಯಾಯ್ತು, ಎಲ್ಲಾರ ಎಡವಟ್ಟ ಮಾಡ್ಯಾಳ ಈ ಹುಡುಗಿ, ಇಲ್ದದ್ದೆಲ್ಲಾ ಹೇಳಿ ಅಂತ. ಆದ್ರ ಚಿಮ್ಮಿ ನಿಯತ್ತಿನ ಎರಡ ಮಾತ ಆಡಿದಳು. "ಇವ ಏನೊ ದಗಲಬಾಜಿರಿ, ಆತನ ಹೆಂಗಸ ಮಾತ್ರ ದೇವರಂತೋರು, ಮುಂದಕ ಕೂಲಿಗ ಮಂದಿ ಬೇಕಲ್ಲ ಕೊಡ್ರಿ" ಶಿಫಾರಸು ಮಾಡಿದ್ಲು. "ಏನೋ ಚಿಮ್ಮಿ ಅಂದ್ಲು ಅಂತೇಳಿ ದೊಡ್ಡ ಕೊಡ್ತಿನಿ, ನೀನ ಬಂದಿದ್ರ ದೇವರಾಣೆಗೂ ಬುಜಮುಟ್ಟಿಸಿಕೊಳ್ತಿರಲಿಲ್ಲಾ ಹ್ವಾದ ಸುಗ್ಗಿಗ ಒಳ್ಳೆ ಟೈಂಗೆ ಕೈ ಕೊಟ್ಟಿಯ." ಕಿಸೆಯೊಳಗಿಂದ ಮೂರು ನೋಟು ತೆಗೆದುಕೊಟ್ಟ. "ನೀನ ಗ್ಯಾರಂಟಿ ನೋಡು ಚಿಮ್ಮಿ, ನಾ ಏನು ಕೇಳಾಕ ಹೋಗಂಗಿಲ್ಲ" ಅನ್ನೋದನ ಮರಿಲಿಲ್ಲಾ. "ನಾ, ಆತನ ಹೆಂಡ್ರಿಗ ಹೇಳ್ತಿನಿ ಬಿಡಣ್ಣಾ, ಇವತ್ತೆ ಹೋಗಿ ಹೇಳ್ತಿನಿ, ದುಡ್ಡಿಂದೇನು ಕಾಳಜಿ ಮಾಡಬ್ಯಾಡ್ರಿ." ಭರವಸೆ ಕೊಟ್ಟು ಕಣದ ಕಡಿಗ ಹೊಂಟ್ಲು.

"ಅಲ್ಲ ನಾ ಏನೋ ತಿಳಿದಿದ್ನವ್ವ, ನಿನ ಬಗ್ಗೆ, ಏಯ್, ಈ ವಯಸ್ಸಿನ್ಯಾಗ ಬಾರಿ ಮರ್ಯಾದಿ ಇಟ್ಕೊಂಡಿ ಬಿಡು, ನೀನು ನಿನ್ನೆ ಮನ್ನೆ ಬಂದೋಳು, ನಾವು ಹುಟ್ಟಿದ ದಿನದಿಂದಲೂ ಇವರ ಕೆಲ್ಸಮಾಡ್ತಿದ್ರು ರಾಘಣ್ಣಾ ನಿನ್ನ ನಂಬಿದಾನಂದ್ರ ನಿಂದ ವ್ಯವಾರ ಪಾಡೈತಿ, ದೇವ್ರ ಚೆನ್ನಾಗಿಟ್ಟಿರಲಿ, ನಾ ಊರಿಗ ಹೊಕ್ಕಿನಿ" ಮೇಲಮಾತಿಗ ಹೇಳಿದವನ ಹೆಂಡದ ರುಚಿ ನೋಡಾಕ ಹೊಂಟೆಬಿಟ್ಟ. "ಅಣ್ಣಾ, ಆಟುನಿಲ್ಲು ನೋಡು ಮನಿಯಾಗ ಹಿಂಡಿ ಕಿವುಚಾಕ ಮೆಣಸಿನಕಾಯಿ ಇರಂಗಿಲ್ಲ. ಯಾರದೋ ಮನಿಯೊಳಗ ಒಂದ ಒಡ್ಡಿ ಮೆಣಸಿನಕಾಯಿ ಇಸ್ಕೊಂಡು, ಇನ್ಯಾರದೋ ಹತ್ರ ಒಂದ ಸೇರು ಹಿಟ್ಟ ಇಸ್ಕೊಂಡು ಜೀವನ ಮಾಡ್ತಾಳ ನಿನ್ನ ಹೆಂಡ್ರು. ರೊಕ್ಕ ಏನೋ ಇಸ್ಕೊಂಡಿಯಾ ಕುಡದು ಹಾಳ ಮಾಡಿ, ಅವರನ್ನ ಬಲಿಪಶುಗಳನ್ನಾಗಿ ಮಾಡಬ್ಯಾಡ ಹೋಗಿ ಅವರ ಕೈಯಿಗ ಕೊಟ್ಟು, ಬೇಕಾದಷ್ಟನ ಹೆಂಡ ಕುಡಿಯಾಕ ತಕ್ಕೋ, ಹಬ್ಬ ಬರಾಕ ಹತ್ಯತಿ ಮನಿ ಖರ್ಚಿಗೆ ಕಾಸಬೇಕು, ಇನ್ಯಾರು ಕಿವಿ ಮಟ ಹಲ್ಲು ಗಿಂಜಿದ್ರು ಎಂಟಣೆ ಬಿಚ್ಚಾಂಗಿಲ್ಲ ಹುಷಾರು, ಸಂಜಿಗ ನಿಮ್ಮ ಹೆಂಡ್ರಿಗ ನಾ ಹೇಳ್ತೀನಿ ನೀ ದುಡ್ಡು ಇಸ್ಕೊಂಡಿರೋದು". ದೊಡ್ಡ ಮಾತು ಹೇಳಿದ್ಲು. ರಂಗೋಲಿ ಕಕ್ಕಾಬಿಕ್ಕಿಯಾದ. ನಾನೆ ಚಾಲುಮಗ ಅಂದ್ರ ಈಕೀ ನನಗಿಂತ ಚಾಲೂ, "ಹೇ.... ಹಂಗೇನಿಲ್ಲ ತಂಗಿ, ಯಾವಾಗೋ ಕುಡಿದು ದಿಮಾಕು ಮಾಡಿದ್ದ ಆಯ್ತು, ಈಗ ಜವಾಬ್ದಾರಿ ಅನ್ನೋದು ಐತಲ್ಲವ್ವ ಅದನ್ನ ನಿಭಾಯಿಸಬೇಕು. ಮನಿಯೊಳಗ ನಿನ್ನ ವಯಸ್ಸಿನ ಎರಡ ಹೆಣ್ಣುಡ್ರ ಅದಾವ ಹಬ್ಬದಾಗ ಅವರ ಮರ್ಯಾದಿಗ

ತಕ್ಕಂಗ ಬಟ್ಟೆಬರಿ, ಸಂತಿ, ಭೇ, ನಾಯಾಕ ಕುಡಿಲವ್ವ..... ಹೂಂ.... ಆ ದೇವರು ಈ ಬಡವರಿಗ ಬಡತನ ಕೊಟ್ಟ ಆದ್ರ ಅವರ ಪಡಿಪಾಟಲನ್ನ ನೀಗಸಲಿಲ್ಲಾ ಎಲ್ಲಿಗಂಟ ಹಿಂಗ ಅಂಡ ಹರ್‍ಕೊಂಡ ಕೆಲಸ ಮಾಡೋದೋ. ಆ ದೇವರಿಗೆ ಗೊತ್ತು" ಸುಧಾರಿಸಿದೋನ ಹಾಗೆ ಮಾತಾಡಿದ. "ಹ್ಯಾಂಗಾಕಂತಿಯ ಬಿಡಣ್ಣಾ, ದೇವರು ಮೈಯಾಗ ಕಸುಯಾಕ ಕೊಟ್ಟಾನ ಹೇಳು ದುಡಿಯಾಕ. ದುಡಿಬೇಕು ಕಷ್ಟನ ನೀಗಬೇಕು. ಕೆಲ ಗಂಡಸ್ರು ಗಾರಿಕಟ್ಟಿ ಮ್ಯಾಲ ಕುತ್ಕೊಂಡೋರು ಮ್ಯಾಲ ಎಳಂಗಿಲ್ಲ ಅವರ ಹೆಂಡಂದ್ರ ಸೀಮೆನೆಲ್ಲಾ ಒಂದ ಮಾಡಿ ದುಡಿತವೆ. ಅವಕ್ಕೇನ ಸುಖ ಸಿಕ್ಕಿತು ಸಂಜೀಗ ಹೋದ ತಕ್ಷಣ, ಅವನ ಕುಡಿತಕ್ಕ ರೊಕ್ಕ ಇವರೆ ಕೊಡಬೇಕು, ಚುಟ್ಟಕ್ಕು ಕಾಸನ್ನ ಕೊಡಬೇಕು ಮುಂಜಾನಿಂದ ಸಂಜಿಮಟ ಸೊಂಟ ಬಗ್ಗಿಸಿ ದುಡದ ಬಂದಿರ್‍ತವ ಕೊಡಲಿಲ್ಲಾಂತ ಒಳ್ಳೆ ದನಕ್ಕ ಹೊಡದಂಗ ಹೊಡಿತಾರ ಗಂಡಸರ ಅಂದ್ರೆ ಅದೇನ? ಮದ್ವಿ ಆದಿಂದ ಹೆಣ್ತಿ ಮಕ್ಕಳನ್ನ ಸಾಕಬೇಕು. ಇಲ್ಲಿಕ್ಕಕ್ರ ಯಾಕ ಮದ್ವಿಯಾಗಬೇಕು ನಾರ್ಮದರು ಅನಿಸಿಕೊಳ್ಳಾಕ" ಸಣ್ಣದೊಂದು ಭಾಷಣ ಬಿಗಿದಳು. ಅಲ್ಲ ಈ ಹುಡುಗಿಗೆ ಈ ವಯಸ್ಸಿನೊಳಗೆ ಇಟೊಂದು ಜ್ಞಾನ ಹೆಂಗ ಬಂತು ಅಂತ ರಂಗೋಲಿ ತಲಿ ಕೆಡಿಸಿಕೊಂಡ. ನಾನು ಇಲ್ಲೆ ಇದ್ರೆ ನನ್ನ ಮೆದುಳ್ನೆ ಬದಲು ಮಾಡಿಬಿಟ್ಟಾಳು, ಹೆಂಡ ಕುಡಿಬೇಕು ಅನ್ನೋ ಮಹದಾಸೆಗೆ ಕಲ್ಲು ಹಾಕ್ಯಾಳು ಅನಿಸಿತು." ಎಂಥ ಮಾತು ಹೇಳಿದೆ, ಸತ್ಯ ಕಣವ್ವ, ಸತ್ಯ ನಮ್ಮ ತಾಂಡದಾಗ ಅದಾರ ಬಿಡು ಅಂತೋರು, ಆದ್ರ ಏನ ಮಾಡೋದು ದರಿದ್ರ ಸೂಳಿಮಕ್ಕಳು, ಸುಮ್ನೆ ಕುಂತಿರ್‍ತವ ಅದೇನೊ ಹುಲಿಮನಿ ಆಟಅಂತ, ಚಾವಿ ಅಂತ, ಇನ್ನೂ ಕೆಲವರು ಇಸ್ಪೀಟ್, ಹಾಳಾಗಹೋತು ತಾಂಡ." ಮೊಸಳೆ ಕಣೀರು ಹಾಕುವ ನೆಪ ಮಾಡಿದ, ಅಷ್ಟಕ್ಕೆ ಬಿಟ್ಟಾಳ ಚಿಮ್ಮಿ. " ಅಂತ ಬೇವರ್ಸಿಗಳನ್ನ, ತಾಂಡದಿಂದ ಹೊರಗ ಹಾಕಬೇಕು ಹೆಂಡತಿರ ದುಡಿಮೆ ತಿನ್ನೋ ಬೇಜವಾಬ್ದಾರಿ ಗಂಡಸರನ್ನ ಗಡಿಪಾರ ಮಾಡಬೇಕು" ಅವನ ಮೂತಿಮ್ಯಾಲ ತುಪಕಂತ ಉಗಳಿದಂಗೆ ಹೇಳಿದ್ಲು.

"ಮಾಡ್ತಿ ಬಿಡು ನೀನು, ನಿನ್ನ ಕೈಗೇನಾರು ಅಧಿಕಾರ ಸಿಕ್ಕರೆ" ಮನಸ್ಸಿನೊಳಗೆ ಅಂದಕೊಂಡ ರಂಗೋಲಿ. ಅವಳಕೈಯಿಂದ ಬಿಡಿಸಿಕೊಂಡು ಹೋದರೆ ಸಾಕು ಅನ್ನೋ ಹಂಗಾಗಿತ್ತು. ತಾಂಡದಲ್ಲಿನ ಹೆಂಡ ಕೈಬೀಸಿ ಕರಿತಾ ಇತ್ತು. ಉದ್ರಿ ಕೊಡೊದಿಲ್ಲಾ ಅಂತೇಳ ಹೆಂಡದಂಗಡಿ ಕರೀಮ ಹೇಳಿದಕ್ಕೆ ತಾನೆ, ಎಲ್ಲಾದರೂ ಹೋಗಿ ಕಾಸ ಹುಟ್ಟಿಸಿಕೊಂಡೆ ಕರೀಮನಿಗೆ ಎರಡ ರೂಪಾಯಿ ಸಾಲ ಬಿಸಾಕಿ ನಗದು ಒಂದೆರಡ ಬಾಟಲು ಕುಡಿಬೇಕು

ಅಂತ ಹೊರಟಿದ್ದು ಈಗ ಕೀಸೆದಾಗ ಕಾಸೈತೆ ಆದ್ರ ಈ ಹುಡುಗಿ ವೇದಾಂತ ಓದ್ತವ್ಳೆ. "ಆಯ್ತು ತಂಗಿ ಹೊತ್ತು ಸಾರತಿ ಗುಡ್ಡದ ಕಡಿಗ ವಾಲ್ತು ನಂದಾಟು ಹ್ವಾರೆಐತಿ ಹೊಕ್ಕಿನಿ" ಮುಂದಕ ನಡದ. " ಒಬ್ಬನೆ ಏನ ಹೊಕ್ಕಿಯಪ್ಪ, ಗುಡ್ಡದ ಮೂಲಿಯೊಳಗೆ ಕಳ್ಳರು - ಕಾಕರು ಇರ್ತಾರ ಸುಕಾಸುಮ್ನೆ ಅಪಾಯಾನ ಯಾಕ ತಂದೊಡ್ಡಕೊಂತೀಯಾ ಕಿಸೇದಾಗ ಬೇರೆ ಕಾಸೈತೆ ಆಳು ಬಂದೆ ಬಿಡ್ತವ, ಹೋದ್ರಾತ ಬಿಡು" ಅಂಜಿಸಿದ್ಲು. ಗುಡ್ಡದ ಮೂಲಿ ಅಸ್ನಾನ, ಹೆಂಡದ ಕನಸು ನುಚ್ಚುನೂರಾತು. ಅಲ್ಲೇನು ಅಂತ ಆಗಬಾರದ ಆಗಿಲ್ಲಿ ಆದ್ರ ತಾಂಡದಿಂದ ಬರುವಾಗ ಎಡಕ್ಕ ಹೋಗೋಮುಂದ ಬಲಕ್ಕ ಬರೋ ಗುಡ್ಡದ ನಳಕಿಗೆ ದೊಡ್ಡದೊಂದು ಕೊರಕಲೈತೆ. ಎಂಥ ಧೈರ್ಯವಂತ ಆ ಜಾಗಕ ಹ್ವಾದ್ರೂ ಒಂದ ಕ್ಷಣ ಎದಿ ನಡಕ ತಪ್ಪಿದ್ದಲ್ಲಾ. ರಾತ್ರಿ ಅಡ್ಡಾಡೋರಿಗ ತೊಂದರೆ ಆಗೈತಿ, ಹಗಲಲ್ಲೆ ಹೋದ್ರೆ ಬಕ್ಕಣದಾನ ಕಾಸಕಿತ್ಕೊಂಡು, ಹಿಗ್ಗಾಮುಗ್ಗ ಹೊಡೆದು ಅಟ್ಟಿದ ಅನೇಕ ಕತಿಗಳು ಮಂದಿ ಬಾಯಾಗ ಆಡ್ತಾವ ಆದ್ರ.... ಇರೋ ಮುನ್ನೂರನ್ನು ಕಸ್ಕೊಂಡು ನಾದಿಕಳುಹಿಸಿದ್ರೆ? ಕೈಕಾಲು ಚಲಿಸದಾದವು. "ಹೆಂಗೋ ಭಜಿನಿ ಪದಾನೋ, ಹೇಮರೆಡ್ಡಿ ಮಲ್ಲಮ್ಮನ ನಾಟಕದ ಹಾಡನ್ನ ಗೊಣಗ್ತಾ ಹೊಂಟ ಬಿಡ್ತಿದ್ದೆ ಈ ಹುಡುಗಿ ಮತ್ತ ಆಟು ಹೆದರಿಸಿಬಿಟ್ಲು" ಅಂತೇಳಿ ಹೆಂಡಕ್ಕಾಗಿ ಹಳಹಳಿಸಿದ. "ಕಾಲ ಪಾಡಿಲ್ಲ, ಅದೇನೊ ಅಂತಾರಲ್ಲ, ಕೆಮ್ಮೋದ ಕೊಟ್ಟ ಗುಮ್ಮೋದ ತಗಂಡಂಗ ಆದೀತು. ಮಂದಿ ಕೂಡ ಹ್ವಾದ್ರ ಒಳ್ಳೆದು" ಅಂತೇಳಿ ಕಣಕ ಹೊಂಟ.

ಬತ್ತದ ಚೀಲ ತುಂಬೋರು, ತೂರೋರು, ಬಡಿಯೋರು ಯಾಂತ್ರಿಕವಾಗಿ ಎಲ್ಲಾನು ಅದರ ಪಾಡಿಗ ಅದು ನಡಿತಾನೇ ಇತ್ತು. ಮಾಡೋರು ಮಾಡ್ತಾನೇ ಇದ್ರು ನಿಂತೋರು ನಿಂತಿದ್ರು ಮಾತಾಡೋರು ಆಸರಕಿ, ಬ್ಯಾಸರಕಿ ಮಾತುಗಳನ್ನು ಆಡ್ತಿದ್ರು, ಚಿಮ್ಮಿ ಒಂದ ಸಲ, " ಎಯ್ ಕೈ ಆಡಸ್ರೀ, ಸೂರ್ಯ ಮುಳಗ್ತಾನೆ, ಮನಿಗ ಹೋಗೋ ವಿಚಾರ ಐತಿಲ್ಲೋ ನಿಮಗ, ಹೊತ್ತಾರೆ ಮುಗಿಸಿದ್ರ ಹೊತ್ತಾರೆ ಮನಿ ಸೇರ್ತಿವಿ." ಜೋರಾಗೆ ಹೇಳಿದ್ಲು. ಕೂಲಿ ಆಳುಗಳು ಮಾತು ನಿಲ್ಲಿಸಿ ಕೈಗ ಸಿಕ್ಕಿದ್ದ ಕೆಲಸ ಮಾಡತೊಡಗಿದವು. ರಂಗೋಲಿಗೆ ಒಳಗೆ ಒಂದು ಯೋಚನೆ ಆರಂಭ ಆಯ್ತು. ನಾನು ಯಾಕೆ ಇವರಂಗೆ ದುಡಿಬಾರ್ದು? ಮದುವಿಗ ಮುಂಚೆ ಕೆಲ್ಸ ಮಾಡಿದ್ದೆ ಆಮೇಲೆ ಬಿಟ್ಟೆ ಬಿಟ್ಟೆ ಆ ಹುಡುಗಿ ಹೇಳಿದಂಗೆ ಗಾಂಪರ ಗುಂಪು ಸೇರ್ಕಂಡು, ಚಟಗಳಿಗೆ ದಾಸನಾಗಿ ಕಕ್ಕದೋರ ಬಾಯಿ ನೆಕ್ಕೊ ಹಂಗೆ, ಯಾರಾರು ಕುಡಿಸಿಯಾರೇನಂತ ಕಾಯಬೇಕು ದಗಲಬಾಜಿತನ ಮಾಡಬೇಕು.

ಅವರಿವರಿಗೆ ಟೋಪಿ ಹಾಕಬೇಕು, ಸುಳ್ಳಿನ ಸಹವಾಸ ಮಾಡಬೇಕು ಕಾಸಿಗಾಗಿ ಮರ್ಯಾದೇನ ಬಿಡಬೇಕು. ಇದೇ ಬದಕು ಚೆನ್ನ ಹೂಂ...ಹೂಂ....., ಅಂತ ಅವನ ಕೈ, ಇವನ ಕೈಗೆ ತಲುಪೋದರಲ್ಲಿ ಹೊತ್ತು ಆಗೆ ಹೋಗುತ್ತೆ. ಮೈಮುರುದು ದುಡಿದರೆ ಅದರಲ್ಲಿ ಸಿಗುವ ಆನಂದವೆ ಬೇರೆ, ಗುಂಪಿನೊಳಗೆ ಗೋವಿಂದ ಹೆಂಗೋ ಕಾಲಹಾಕಬಹುದು. ರಂಗೋಲಿಗೆ ಯಾಕೊ ಕೆಲಸ ಮಾಡ್ತಿರೋರನ್ನ ನೋಡಿ ಜೀವ ಮಿಡಿಯ ತೊಡಗಿತು.

ಕರ್ನಾಟಕ ಬಸ್ಸು ಅನತಿದೂರದಲ್ಲಿ ಶಬ್ದ ಮಾಡಿದ್ದೆ ಸೈ, ಬುತ್ತಿಗಂಟ ಎತ್ಕೊಳಾಕ ಓಡಿದ್ರು ಆಳುಗಳು. ಈ ಕರ್ನಾಟಕ ಬಸ್ಸು ಅವರಿಗೆ ಗಡಿಯಾರ ಆಗಿತ್ತು. ಪ್ರತಿದಿನ ಸರಿಯಾಗಿ ನಾಕುವರೆ ಐದುಗಂಟೆಗೆ ಬಂದೇ ಬರ್ತಿತ್ತು. ಆ ವೇಳೆ ಆಳುಗಳ ಕೈ ಕಾಲು ಆಡ್ತಿರಲಿಲ್ಲಾ. ಇದ್ದಕ್ಕಿದಂತೆ ಮನೆ ನೆನಪಾಗಿ ಬಿಡುತ್ತಿತ್ತು. ಮುಂಜಾನೆ ಹೊತ್ತಾರೆ ಅಡಗೆ ಮಾಡ್ಕೊಂಡು, ಏನೈತಿ, ಏನಿಲ್ಲಾ ಅಂತ ನೋಡದೆ ಮನೆ ಬಿಟ್ಟ ಹೆಂಗಸರು ಸೌರಾತ್ರಿ ದೆವ್ವ ಏಳೋ ಹೊತ್ತಾದ್ರುವೆ ಅಡಗಿ ಮಾಡಿ ಆಟ ಆಡಿ ಬಂದು ಮಲಗಿದ ಚಿಕ್ಕ ಮಕ್ಕಳನ್ನ ಎಬ್ಬಿಸಿ ರಮಿಸಿ ಊಟ ಮಾಡ್ಸಿ ಮಲಗಿಸಬೇಕು. ಕೆಲಗಂಡಸರು ಅವರೊಟ್ಟಿಗೆ ಬಂದು ಕೆಲ್ಸ ಮಾಡಿ ಬಂದೋರು ಕಡ್ಡಿ ಎತ್ತಿ ಆಚೆ ಇಡದಂಗೆ ಹೆಂಡತಿ ಮಾಡೊ, ಗಂಜಿನೋ, ಮುದ್ದಿನೋ ಉಣ್ಣೋದಕ್ಕೆ ಕಾಯ್ಕಂಡಿರ್ತಿದ್ರು. ಮುಂಜಾನೆ ಹೊತ್ತಾರೂನೂ ಬೆಂಕಿ ಮುಂದೆ ಅವಳೇ ಸಾಯಬೇಕು. ಸಂಜಿಗ ಎಟೊತ್ತಾದ್ರು ಆಕಿನೆ ಬೆಂಕಿ ಕಾಸಬೇಕು. ಈ ಎಲ್ಲಾ ರಂಪಾಟ ಕಂಡು ರೋಸಿ ಹೋದ ಕೆಲ ಹೆಂಗಸರು ಯಾಕಾರು ಹೆಣ್ಣು ಜನ್ಮ ಕೊಟ್ಯೋ ಭಗವಂತ, ಹಾಳಾದ್ದು, ಆಸರಕಿ, ಬ್ಯಾಸರಕಿ ಅನ್ನೋದ ಇಲ್ಲ ಈ ಜೀವಕ್ಕ, ಗಂಡಸು ಒಲಿಮುಂದ ಬರಂಗಿಲ್ಲ ಯಾಕಂದ್ರ ಸಮಾಜದಾಗ ಅದು ಕೀಳು. ತಮ್ಮ ರೋದನೆಯನ್ನ ತೋಡಿಕೊಳ್ಳೋದಕ್ಕ ಆಗದೆ ಸಿಂಬಳದೊಳಗೆ ಸಿಗಾಕಿಕೊಂಡ ನೊಣದಂಗೆ ಒದ್ದಾಡ್ತಿದ್ರು. ಇನ್ನು ಒಸಮಂಧಿ ಗಂಡಸರು ದುಡಿಯಂಗಿಲ್ಲ ದುಗ್ಗಾಣಿ ಬಡಿಯಂಗಿಲ್ಲ, ಊರಾನ ಮನಿ ಎಣಿಸಿ ಎಣಿಸಿನೆ ಸುಸ್ತಾಗಿ, ಕಸ ಮುಸರಿನೂ ಮಾಡದೆ ಹೆಂಡತಿ ಬರೋ ಮಟಾ ಒಲಿಯಾಗ ಬೂದಿನೂ ತೆಗಿಯದೆ ಕಿವಿಗ ಮಂಡಿ ಆನಿಸ್ಕೊಂಡ ಕುಂತಿರ್ತಾರ. ನಾಕೈದ ಮೈಲಿ ದೂರ ನಡ್ಕಂಡಹೋಗಿ ನಡ್ಕಂಡ ಬರಬೇಕು ಹೆಂಗಸರು, ಅವರಿಗ ಮಾತ್ರ ದಣಿವು ಅನ್ನೋ ಮಾತೆ ಇಲ್ಲ. ಮನಿಯಾಗು ದುಡಿಬೇಕು ಹೊಲ್ದಾಗೂ ದುಡಿಬೇಕು ನೆಮ್ಮದಿ ಸಿಗೋದಂದ್ರ ಸ್ಮಶಾನಕ್ಕ ಹೋದ ದಿನಾನೆ.

ರಂಗೋಲಿ ಮನಸ್ಸು ಡೋಲಾಯಮಾನವಾಗಿತ್ತು. ಆಟ ಹುಡುಗಿ ಚಿಮ್ನಿಗ ಇರೋ ಬೆಲೆ ನನಗಿಲ್ಲ ಅವನವ್ವನ ಈ ಜನ್ಮ ತಗೊಂಡಾರ ಎನ್ ಸುತ್ತೋದೈತಿ. ನಾಸಣ್ಣಾವ ಇದ್ವಗಿಂದಲೂ ಈ ಊರ ಕೆಲ್ಸನೆ ಮಾಡ್ತಿರೋದು. ರಾಘುಪ್ಪನ ಅಜ್ಜನ ನೋಡಿನಿ, ಅವರಪ್ಪನ ನೋಡಿನಿ, ಈಗ ಅವನ್ನ ನೋಡಾಕಹತ್ತಿನಿ ನಮ್ಮ ಪಡಿಪಾಟ್ಲು ಇದಿದ್ವೆ. ಸಾವುಕಾರ ಮಂದಿ ಹೆಂಗ ಬದುಕಿದ್ರು ನಡಿತೈತಿ ನಮ್ಮಂತ ನರಪಿಳ್ಳೆಗಳಿಗ ಎಲ್ಲವೂ ನಿಮಿತ್ತ. ಆಲೋಚನೆಯೊಳಗ ಮುಳುಗಿದ ಇಲ್ಲ ನಾನು ದುಡಿಬೇಕು ಗಂಡಸಿಗೆ ದುಡಿಮೆ ಇದ್ದರೇನೆ ಭೂಷಣ ಇಲ್ಲಂದ್ರೆ ನಾಡ ಮಂದಿ ಬಾಯೊಳಗೆ ಥು- ಛಿ ಅನ್ನೊಸಿಕೊಳ್ಳೋದೆ ಆಗುತ್ತೆ. ನಿರ್ಧರಿಸಿದವನೆ ಏನೋ ಬದಲಾವಣೆ ಆದಂತೆ ಮುಂದೆ ಮುಂದೆ ಹೊರಟಿದ್ದ. ನನ್ನ ಈ ಬದಲಾವಣೆಗೆ ಚಿಮ್ನಿಗೆ ಗೊತ್ತಾತು. ಅದೆಂಥ ನಿಯತ್ತಿನ ಹುಡುಗಿ ರೊಕ್ಕನ ಕೊಡಸದೇ ಇರಬಹುದಿತ್ತು. ನನ್ನ ಬಗ್ಗೆ ಅವಳಿಗೆ ತುಂಬಾ ಚೆನ್ನಾಗೆ ಗೊತ್ತಿದೆ ಆದರೂ ನನ್ನ ನಂಬಿದ್ಲು. ಸಾವುಕಾರನ ಹತ್ರ ಶಿಫಾರಸ್ಸು ಮಾಡಿದ್ಲು. ಮನುಷ್ಯನ ಮನಸ್ಸು ವಿಶಾಲವಾಗಿರಬೇಕು ಅಂದಾಗ ನಂಬಿಕೆ ತನ್ನ ಪಾಡಿಗೆ ತಾನೆ ಬರುತ್ತೆ ಒಂದು ವೇಳೆ ಸಂಕಟಗೊಂಡಿದ್ದರೆ ಈ ಆಲೋಚನೆಗಳಿಗೆ ಅವಕಾಶವೇ ಇರ್‍ತಾ ಇರಲಿಲ್ಲ. ಅವಳ ಮಾತಿಗೆ ರಾಘುವ ಎದುರಾಡಲಿಲ್ಲಾ. ಕೆಳ ಜಾತಿಯವಳ ಮಾತಿಗೆ ರಾಘುವ ಇಟೊಂದು ಮರ್ಯಾದೆ ಕೊಟ್ಟ ಮೂನ್ನೂರು ಹಿಡಿಸಿದನೆಂದರೆ ಹುಡುಗಾಟವೇ ಅದೇನೋ ಒದ್ಕಂಡು ಅವನ ಚಿಗಪ್ಪನಿಗೆ ಮಕ್ಕಳ ಮರಿ ಇಲ್ಲದಕ್ಕೆ ಅವನೆ ವಾರಸುದಾರನಾಗಿದ್ದ. ಏಟ ಜನ್ಮ ತಿಂದ್ರುವೇ ಸವೆಯದಷ್ಟು ಆಸ್ತಿ ಪಾಸ್ತಿಯಾ ಮೂಲಿಯೊಳಗ ಕೈ ಹಾಕಿದ್ರು ರೊಕ್ಕಸಿಗೋ ಹಂಗ ಸ್ಥಿತಿ ಇರಬೇಕಾರ ಕೇಳಬೇಕ. ಅಂವ ಹೆಂಗಿರಬಹುದಾಗಿತ್ತು, ಓದಿರೋದ ಅವನನ್ನ ವಿನಯವಂತನನ್ನಾಗಿ ರೂಪಿಸಿದೆ ಇಲ್ಲಕ್ರ, ಆ ಚಿಕ್ಕ ದೂರಪ್ಪನ ಮನಿವೂ, ಸಣ್ಣೋರು ದೊಡ್ಡೋರು ಅನ್ನದೆ, ಸಾವುಕಾರಕಿದರ್ಪದಾಗ " ಏನ್ಲೇ, ಮಗನ, ಬಗಲಾಗ ಹಲ್ಲಬಂದಾವೇನು?" ಅಂಥೇಳಿನೆ ಮಾತು. ಆದ್ರು ಗತಿ ಇಲ್ಲದೆ ಲಮಾಣ್ಯರೆಲ್ಲ ಅವನ ಕೆಲ್ಸಕ ಹೊಕ್ಕರ. ಇದೇ ಒಳ್ಳೆ ಟೈಮಂಥ ನೆಲಕ್ಕ ಕುಂಡಿ ಊರಾಕ ಬಿಡದಂಗ ಆಳಗಳನ್ನ ಸಾಯಿಸ್ತಾರ. ಮಂದಿಗ ಸಳಿ ಜ್ವರ ಏನಾರ ಬಂದಿದ್ರ ರಾಘುವನೇ ಗುಳಗಿ ತಂದ ಕೊಟ್ಟು ಮರದನೆಳ್ಳಾಗ ಅಡ್ಡಾಗಕ ಹೇಳ್ತಾನ ಒಂದೀಟ ಪಾಡ ಆದಿಂದ ಅವನ ಕೈಯಿಂದ ನಿಗಬಹುದಾದಾ ಕೆಲ್ಸ ಹೇಳ್ತಿದ್ನೆ ವಿನಃ ಆ ರಾಕ್ಷಸರರಿಗೇನು ಜೀವ ಹಿಂಡ್ತಿರಲಿಲ್ಲಾ. ಅದಕಂತ್ಲೆ ಸುತ್ತ ಊರ ಮಂದಿ ಅವನ ಕೆಲ್ಸ ಅಂದ್ರ ಕುಣ್ಕಂಡ ಹೊಕ್ಕಾರ. ಅಂವ ಮಾತ್ರ

ಲಮಾಣಿ ಮಂದಿ ನಂಬಿಕಸ್ಥರು, ಆಳ ಹಿಂದ ಮನಿ ಮಂದಿ ಇರಬೇಕಂತೇನು ಇಲ್ಲ. ಒಂದ ಮಾತ, " ಲೇ ನಾ ಆಟು ಮನಿತಂಕ ಹೋಗಿ ಬರ್ತಿನಿ ಕಳ್ಳ ಬದಕ ಮಾಡ್ದಂಗೆ ಕೆಲ್ಸ ಮಾಡ್ರಿ, ಯಾರ ಹೆಂಗೆ ಅಂತ ನಂಗ ಗೊತ್ತು. ನಮ್ಮ ಚಿಮ್ನಿ ಹೇಳ್ದಂಗೆ ಕೇಳಬೇಕು. ನಾ ಬರೋವರಿಗೂವೆ" ಅಂದ್ರು ಸಾಕು ಬರೋ ಮಟ ಹಂಗೆ ಕೆಲ್ಸ ಮಾಡ್ತವೆ, ಈ ಊರ ಮಂದಿ ನಂಬಂಗೆ ಇಲ್ಲ, ಅವ್ನೇನ ಬಾರಿ ಬಿಡು, ಜಗತ್ತಿಗಿಲ್ಲದ ಸಾವುಕಾರನೇನಲ್ಲ ಅವನಿಲ್ಲಿಕ್ರ ಮತ್ತೊಬ್ಬಂತೇಳಿ ಮನಸ್ಸಿಗೆ ಬಂದಂಗೆ ವರ್ತನೆ ಮಾಡ್ತರೆ. ಈ ಸತ್ಯ ರಾಘವನಿಗೆ ಗೊತ್ತಿತ್ತು. ಅದ್ರಗ ಬ್ಯಾರೆ ಅಂವ ಸಾಲಿಕಲಿತೋನು ಮಂದಿನ ಹೆಂಗ ಮಾತಾಡಿಸಬೇಕು, ಯಾವಾಗ ನಂಬಬೇಕು ಅನ್ನೋ ಸತ್ಯ ಅರಿತಿದ್ದ. ಅದರಂತೆ ಅಪ್ಪ ದೊಡಪ್ಪನನ್ನ ಹಿರಿತನದಿಂದ ಬಿಡಿಸಿ ತಾನೆ ಹಿರೆತನ ಮಾಡ್ಲಿಕ್ಕೆ ಸುರು ಮಾಡಿದ್ದು. ಕಾಲಬದಲಾಗ್ತಿದ್ದಂತೆ ಮಂದಿ ರೀತಿ ರಿವಾಜು ಬದಲಾಗಿತ್ತು. ಅವನಪ್ಪ ಹಳೆ ಕಾಲದ ಮನುಷ್ಯ, ಸೇರ ಕಾಳ ಕೊಟ್ಟು ದಿನವಿಡಿ ಕೂಲಿ ಮಾಡಿಸಿಕೊಂಡವ. ಈಗ ಮಂದಿ ಬದಲಾಗ್ಯಾರನ್ನೋ ಸತ್ಯ ಅರಗಿಸಿಕೊಳ್ಳೋದು ಕಷ್ಟ ಆಗಿತ್ತು ಅವನಿಗೆ ಸ್ವತಂತ್ರ ಬಂದೇಟಿಗೆ ಮಂದಿಗಿನ್ನು ಜ್ಞಾಪನೆ ಬಂದಿರಕಿಲ್ಲ. ಬಡವರು ಬಡವರಾಗೆ ಇದ್ದರು, ಕೂಲಿಗಳಿಗೆ ಊರು - ತಾಂಡದ ಜನಕ್ಕೆ ಅವರ ಸುತ್ತಲ ಜಮೀನ್ದಾರ ಲಿಂಗಾಯ್ತರು, ಕುರುಬರುಗಳೆ ಗತಿ, ತಾಂಡದಾಗ ಏನಾರು ಗಲಾಟೆಯಾದ್ರೆ ಊರ ಪಕ್ಕದ ದೊಡ್ಡ ಹಿಡುವಳಿದಾರ ಜಮೀನ್ದಾರರಾಗಿದ್ದ ಬ್ರಾಹ್ಮಣರೆ ಪಂಚಾಯ್ತಿ ಬಗೆಹರಿಸೋದಕ್ಕೆ ಬರಬೇಕಿತ್ತು. ಸ್ವಾತಂತ್ರ್ಯದ ಜೊತಿಗ ಮಂದಿಗ ತಿಳುವಳಿಕೆ ಬರ್ತಿದಂಗೆ, ಭೂ ಮಾಲೀಕರಾಗಿದ್ದ ಬ್ರಾಹ್ಮಣ ವರ್ಗ ಕ್ರಮೇಣ ಭೂಮಿ ಕಳೆದುಕೊಳ್ಳೋದಕ್ಕೆ ಶುರುಮಾಡಿತ್ತು. ಐವತ್ತು, ನೂರು, ಇನ್ನೂರು ಎಕ್ಕರೆ ಜಮೀನು ಮಾಲೀಕರಾಗಿದ್ದವರು. ಕಾಲಕ್ರಮೇಣ ನೆಲವೆಲ್ಲಾ ಮಾರಿಕೊಂಡು ಪಟ್ಟಣ ಸೇರಿಕೊಂಡರು. ಪ್ರೈವೇಟಿನಲ್ಲೋ, ಸರ್ಕಾರದಲ್ಲಿ ಜವಾನ, ಚಪರಾಸಿ ಆದ್ರೂ ಸರಿ ನೆರಳು ಹುಡುಕಿಕೊಂಡು ಹೋದರು. ಯಾಕಂದ್ರ ಬ್ರಿಟಿಷ ಮಂದಿ ದೇಶ ಬಿಟ್ಟು ಹೋದ ಮ್ಯಾಲ ಭಾರತದ ಮಂದಿ ಯಾರ ಮಾತು ಕೇಳದಾದರು, ತಿಳುವಳಿಕೆ ಹೆಚ್ಚಿತು. ತಾಂಡದ ಮಂದಿಗೂ ಸಾಲಿಗಿಲಿ ಅಂತೇಳಿ ಉದ್ಧಾರ ಆಗಾನ ಎದರ ವಾದಿಸೋದು, ಪ್ರಶ್ನೆ ಕೇಳೋದು ಸುರುಆಯ್ತು. ಆನಂತರದಲ್ಲಿ ಕೂಲಿಗಳನ್ನೆ ನಂಬಿ ಜಮೀನು ಊಳುತಿದ್ದವರೆಲ್ಲಾ ಲುಕ್ಸನ್‌ನಲ್ಲಿ ನೆಲ ಮಾಡೋದು ಬ್ಯಾಡಂತ ಬಿಟ್ರು. ಈಗ ಉಳ್ಕೊಂಡಿದ್ದು ಲಿಂಗಾಯ್ತುರು, ಕುರುಬರು, ಅಲ್ಲಲ್ಲಿ ಬ್ಯಾರೆ

ಮಂದಿ ಜಮಿನ್ದಾರ ಅವರನ್ನ ನಂಬಿಕೊಂಡಿರೂ ತಾಂಡದ ಮಂದಿ. ಈ ಎಲ್ಲಾ ಬದಲಾವಣೆ ನೋಡಿಕೊಂಡು ರಾಘುವ ಲಮಾಣಿ ಮಂದಿಯನ್ನ ಚೆನ್ನಾಗಿ ನೋಡಿಕೊಳ್ಳ ತೊಡಗಿದ. ಅವರು ಕೇಳಿದಾಗ ಅಡ್ವಾನ್ಸ್ ಕೊಡೋದು, ತಾಸ ಹೆಚ್ಚು ಕಮ್ಮಿ ಆದ್ರ ಸುಧಾರಿಸಿಕೊಂಡು ಒಳ್ಳೆ ಮಾತಿಂದಲೇ ಕೆಲಸ ಮಾಡಿಸುತ್ತಿದ್ದಿದ್ದರಿಂದ, ಮಂದಿ ರಾತ್ರಿ ಕೌಳ ಆದ್ರು ಹೊಲದಾಗ ಹಿಡಿದ ಕೆಲಸ ಮುಗಿಸಿಯೇ ಹೋಗುತ್ತಿದ್ದರು. ಅವನ ಉದಾರತನದಿದಂಲೇ ರಂಗೋಲಿ ಮತ್ತೆ ದುಡಿಯೋದಂತ ನಿರ್ಧರಿಸಿದ. ಇದಕ್ಕೆ ಚಿಮ್ನಿಯ ಪಾತ್ರನು ಬಹಳವಾಗಿ ಇತ್ತು. ಚಿಮ್ನಿ ಯಾರೇ ಏನೆ ಅಂದರೂವೆ ರಂಗೋಲಿಯನ್ನ ನಂಬಿದ್ದಳು. ಅವನೊಬ್ಬ ದಂಡಪಿಂಡ ಅಂತೇಳಿ ಗೊತ್ತಿತ್ತು. ಅವಳಿಗೆ ರೊಕ್ಕ ಕೊಟ್ಟರೆ ಹೋಯ್ತು ಅಂತ್ಲೆ ಅಂತೇಳಿ ಮಂದಿ ಕಣ್ಣಾಗ ಮಾತಾಡ್ತಿದ್ರು ಆದದ್ದಾಗಲಿ ಎಂದು ಅವನ ಬಗ್ಗೆ ಒಳ್ಳೆಯದನ್ನೇ ಮಾತಾಡಿದ್ಲು. ಎಲ್ಲರೂ ಒಳ್ಳೆಯವರಾಗಿರುವಾಗ ನಾಯಾಕೆ ಹೀಗೆ? ರಂಗೋಲಿಗೆ ವಿಷಯ ತಲೆಗೆ ಏರಿತ್ತು. ಮಾರನೇ ದಿನಾನೆ ಬುತ್ತಿಗಂಟು ಕಟ್ಕೊಂಡು ರಾಘುವನ ಹೊಲಕ್ಕೆ ಹೊಂಟಿದ್ದ. ಅವನ ಜೊತೆಗೆ ಗಾರಿಕಟ್ಟೆ ಮೇಲೆ ಕೂಡುತ್ತಿದ್ದ ಗಾಂಪರ ಗುಂಪಿನ ನಾಯಕ ಪಂಡಿತ ಪಾಪ ನಾಯ್ಕನಿಗೆ ತಲೆ ತಿರುಗಿದಂಗಾಗಿತ್ತು. ತನ್ನ ಗುಂಪಿನ ಸದಸ್ಯನೊಬ್ಬ ಹೀಗೆ ಏಕಾ ಏಕಿ ಬಿಟ್ಟು ದುಡಿಯಾಕ ಹೊಂಟ್ರ ಹ್ಯಾಂಗಂತ." ಯಾಕ್ಲೆ ರಂಗೋಲಿ ನಿನಗೇನ ಕೆಟ್ಟ ಬುದ್ಧಿ ಬಂತು ಅಂತೀನಿ ನಮ್ಮನೆಲ್ಲಾ ಬಿಟ್ಟು ಕೂಲಿಗ ಹೋಗಾಕ ಅದೆಂಗ ಮನಸ ಬಂತು ಅಂತೀನಿ. ಯಾರೋ ನಿನ್ನ ತಲಿ ಕೆಡಿಸಿರೊ ಹಂಗೈತೆ, ಯಾಕಂದ್ರ ನಿನ್ನ ಪಾಡಿಗ ನೀ ಹೋಗೊ ಮಗಾನೇ ಅಲ್ಲ. ಏಲ್ಲೋ ಏನೋ ಎಡವಟ್ಟ ಆಗಿದೆ ಬಿಡು" ಅಂತೇಳಿ ಕುಡದು ಬೋವಿ ಮನಿ ಮುಂದಿನ ಕಟ್ಟಿಗೆ ಅಂಡೂರಿದ. "ಹೂಂ ಹೋಗಪ್ಪ, ಭಾರಿ ಒಳ್ಳೆಯದನ್ನೇ ಹೇಳಿಕೊಡಾಕ ಹತ್ಯಾನ ನೋಡು. ಮನಿಮಂದಿ ಎಲ್ಲಾ ಮುಕ್ಕಾರೆ ಕೆಲ್ಸ ಮಾಡಿದ್ರೂ ತೂತುಗಳನ್ನ ಮುಚ್ಚಾಕಾಗಲ್ಲ ಅಂತಾದ್ರಾಗ, ಎಂತ ಪಾಡ ಬುದ್ಧಿ ಕಲಿಸ್ತಾನ ನೋಡು" ಚಿಮ್ನಿ ಕೈ ತಗೊಂಡ್ಲು. "ಎಯ್, ಬೇವರ್ಸಿ, ನೀಯಾವಳೇ ನನಗ ಬುದ್ಧಿ ಹೇಳಕ. ನಿಂದ ಬಾಳ ಆಗೈತಿ ಊರಾನ ಮಂದಿ ಬಾಯಿಯೊಳಗ ಬಾರಿ ಕೇಳಿನಿ ನಿನ್ನ ತಾರಿಪು, ನನ್ನ ಹತ್ರ ಅದೆಲ್ಲ ನಡಿಯಾಕಿಲ್ಲ ಸುಮ್ನೆ ಟೀ ಮುಚ್ಕೊಂಡ ಇರಬೇಕು ಇಲ್ಲಿದ್ರ ನಾ ತಲಿಕೆಟ್ಟ ಮನುಷ್ಯ ಏನ ಮಾಡ್ತಿನಂತ ನಂಗೆ ಗೊತ್ತಿಲ್ಲ" ಎದ್ದವನೆ ಮುಕಳಿ ಅಡಗಿನ ಟವಲ್ ಕೊಡವಿ ಹೆಗಲಿಗೇರಿಸಿದ. "ಲೇ, ಹಡಸಿ ಮಗನ ಆ ತಾಯಿ ಅದೇನ ತಪ್ಪಹೇಳಿದ್ಲು ಅಂತೀನಿ. ನಿನ್ನ ಸಹವಾಸ ಮಾಡಿದ ಮಗ ಯಾವನ ಉದ್ಧಾರ ಆಗ್ಯಾನ ಹೇಳು? ನಿನ್ನ

ಸುತ್ತಲಿರೊರೆಲ್ಲ ಅವರೆ ನವಗ್ರಹಗಳಿದಂಗೆ ಗತಿಗೆಟ್ಟೋರು. ಅವರ ಹೆಂಡ್ರು ಅದೇನಾರು ಮಾಡ್ಕಂಡ ದುಡ್ಕಂಡ ಬಂದು ಕುಡಿಯಾಕ ಕಾಸ ಕೊಟ್ರೆ ಅದೇ ಸಾಕು ಇತಿಹಾಸನೆ ಕೇಳಕಿಲ್ಲ ಅಂತೋರ ಗುಂಪಿನ ನಾಯಕ ನೀನು" ನಗ ನಗ್ತಾನೆ ಸರಿಯಾಗಿ ಮೇಟ್ಟಿಲೆ ಹೊಡದಂಗ ಹೇಳಿದ ಪಂಡಿತ ಪಾಪನಾಯ್ಕ ಇನ್ನೂ ಇಲ್ಲೆ ಇದ್ರ, ರಂಗೋಲಿ ಜನ್ಮಾನೆ ಜಾಲಾಡಿ ಬಿಡ್ತಾನೆ ಅಂದವನೆ ಮೆತ್ತಗೆ ಸಾಂಬಪ್ಪನ ಚಹಾದ ಹೋಟೇಲಿಗೆ ಹೊಂಟೆ ಬಿಟ್ಟ.

ಚಿನ್ನಾನಾಯ್ಕ ಯೋಚಿಸುತ್ತಿದ್ದ. ಕೂಲಿಯನ್ನ ನಿಯತಿಂದ ಮಾಡ್ತ ಜನರ ವಿಶ್ವಾಸ ಗಳಿಸಿಕೊಂಡು ದೊಡ್ಡೋರು ಸಣ್ಣೋರು, ಎಲ್ಲರನ್ನೂ ಸಂಭಾಳಿಸಿಕೊಂಡ ಇಡಿ ಮನಿಯ ದಿಕ್ಕನ್ನೇ ಬದಲಿಸಿದ್ದು ಚಿಮ್ನಿ. ಈ ಹುಡುಗಿ ಮಂಗ್ಲ್ಯಾನ ಹೊಟ್ಟೆಯೊಳಗ ಹುಟ್ಟೋದಕಿಂತ ದೊಡ್ಡ ಜಾತಿಯೊಳಗೆ ಹುಟ್ಟ ಬೇಕಿತ್ತು ಬಿಡು ಅಂತೇಳಿ ಮಂದಿ ಮಾತಾಡಿಕೊಳ್ತಿದ್ದು. ಚಿಮ್ನಿ ಮಾತ್ರ ಯಾವ ಆಹಾಂಗೆ ಬಲಿಯಾಗದೆ ಮೂಕ ನಾಯಕಿಯಾಗಿ ದುಡಿಯುವುದರಲ್ಲೇ ನಿರತಳಾಗಿದ್ದಳು. ಮನ್ನೆ ಟಿ.ವಿ.ಯೊಳಗೆ ಹಾರ್ಟಹೋಲ' ಕಾಯಿಲೆಯಿಂದ ಪಾಕಿಸ್ತಾನ ಹುಡುಗಿಯೊಬ್ಬಳು ಸತ್ತಿದ್ದು ಬಂತು. ಸ್ವತಃ ಬಿಲ್‌ಗೇಟ್ಸ್ ಎಂಬ ಅಮೇರಿಕಾದ ಸಾಫ್ಟ್‌ವೇರ್ ಶ್ರೀಮಂತ ಎಷ್ಟೇ ಖರ್ಚು ಬರಲಿ ಆ ಹುಡುಗಿಯನ್ನ ಬದುಕಿಸಿ ಎಂದು ಭರವಸೆ ಕೊಟ್ಟರು ಇಡಿ ವಿಶ್ವದ ವೈದ್ಯರುಗಳಿಗೆ ಸವಾಲಾದ ಈ ಕಾಯಿಲೆ ಸುಮಾರು ಮೂವತ್ತೈದು ವರ್ಷದ ಹಿಂದೆ ಜಗತ್ತು ಯಾವ ಅವಿಷ್ಕಾರಗಳನ್ನ ಕಾಣದ ಸಂದರ್ಭದಲ್ಲಿ ಚಿಮ್ನಿ ಹೃದಯದಲ್ಲಿ ರಂಧ್ರ ಕಾಣಿಸಿಕೊಂಡಿತ್ತು. ಹೆಂಗಸರು ಹುಟ್ಟುವುದೇ ಸಾಯುವುದಕ್ಕೆ ಅವರ ಬದುಕಿಗೆ ಅರ್ಥವೇ ಇರುವುದಿಲ್ಲ. ಇಡೀ ಕುಟುಂಬದ ಸಲುವಾಗಿಯೇ ಬದುಕಿ, ಸಾಯುತ್ತಾರೆ ಈ ಬದುಕಿನ ನೊಗ ಹೊತ್ತ ಯಾರೂ ಸುಖವಾಗಿರಲಾರರು. ಬದುಕಿನ ಜಂಜಾಟದಲ್ಲಿ ಜೇಡನ ಬಲೆಗೆ ಸಿಕ್ಕ ಕೀಟದಂತೆ ನರಳಿ ನರಳಿ ಸಾಯುವುದು ಇಷ್ಟೇ ಜೀವನ. ಅಂತ ಜಂಜಡದಿಂದ ಮುಕ್ತಳಾಗಿದ್ದ ಚಿಮ್ನಿ ಬಹಳವಾಗಿ ಕಾಡಿದ್ದು ಚಿನ್ನನಿಗೆ. ಯಾಕಂದ್ರೆ ಅವಳ ನೋವು ತುಂಬಿದ ಮಾತುಗಳಿಗೆ ಸಾಕ್ಷಿಯಾಗಿದ್ದು. ಅವನಾಗ ಕೇವಲ ಹನ್ನೆರಡು ಹದಿಮೂರರ ಹುಡುಗ. ಒಂದೇ ಗೋಡೆಯ ಆಚೆ ನಡೆಯುವ ಪ್ರತಿಯೊಂದು ಮಾತುಗಳಿಗೆ ಮೂಕ ಪ್ರೇಕ್ಷಕನಾಗಿದ್ದ. ಸಾವನ್ನ ಹೊತ್ತು ಬದುಕುವುದು ಬಹಳ ಕಷ್ಟದ ಕೆಲಸ. ಅದು ಹೇಗೆ ಅವನ ಅಕ್ಕ ಚಿಮ್ನಿ ಬದುಕಿದ್ದಳೋ ದೇವರಿಗೆ ಗೊತ್ತು. ಇಡೀ ಕುಟುಂಬವೇ ಸಾವಿನ ಸೂತಕದಲ್ಲಿದ್ದಂತೆ ಇದ್ದರು. ಈಗ ಬರಬಹುದು, ಆಗ ಬರಬಹುದು, ಕೂತರೆ, ನಿಂತರೆ, ಮಲಗಿದರೆ, 'ರೆ'

ಎನ್ನುವ ಶಬ್ದವೇ ಚಿಮ್ನಿಯ ಕಿವಿಯೊಳಗೆ ಗುಯ್‌ಗುಡುತ್ತಿತ್ತು. ಅದು ಒಮ್ಮೆಂದೊಮ್ಮೆಗೆ ಬಂದರೆ ಗಟ್ಟಿಯಾಗಿ ಕಣ್ಣು ಮುಚ್ಕೊಂಡು ಸತ್ತು ಬಿಡಬಹುದು. ಆದರೆ ಹಾಗಿಲ್ಲ ಅದು ಬರುವವರೆಗೆ ಕಾಯಬೇಕು. ಅವಳ ಸಾವನ್ನ ಕಾಯುತ್ತಿದ್ದ ಇತರರು. ಈ ಎಲ್ಲಾ ಸಾವಲುಗಳಿಗೆ ಉತ್ತರವನಿತ್ತು ಹೋಗಿದ್ದ ಚಿಮ್ನಿ ಮಂಗ್ಲ್ಯ ಚಿಕ್ಕಪ್ಪನ ಕೂಡ ಮಾತ್ತಾಡಳೆ. ಅವನ ಕೊನೆಗಾಲಕ್ಕೆ ಊರುಗೋಲಾಗಿದ್ದಾಳೆ ಎನ್ನುವ ದಿಕ್ಕು ದಸೆ ಇಲ್ಲದ ಮಾತುಗಳು ಎದ್ದಿರೋದನ್ನ ಕೇಳಿ ಸೋಜಿಗವಾಯ್ತು. ಚಿಮ್ನಿ ಸತ್ತು ಮೂವತ್ತು ವರ್ಷಗಳೇ ಆದವು ಮಂದಿ ಮಾತ್ರ ಗುಬ್ಬಚ್ಚಿ ಹಂಗೆ ಮುದಡಿಕೊಂಡು ಕುಂತ ಈ ವ್ಯಕ್ತಿ ರಾತ್ರಿ ಕೆರೆ ಏರಿ ಮೇಲೆ ಯಾರದೊ ಜೊತೆಗೆ ನಡಿತಾ ಹೋಗೋದ ನೋಡಿ ಹೌಹಾರಿ ಧೋತ್ರದೊಳಗೆ ಉಚ್ಚೆ ಮಾಡ್ಕೊಂಡಿರೊದನ್ನ ಹೇಳ್ತಾರೆ, ರಾತ್ರಿ ಗಡ್ಡದ್ದಾಗಿ ಗುದ್ದಮ್ಮನ ಕಟ್ಟೆ ಮೇಲೆ ಕುಂತು ಬೀಡಿ ಸೇದತಿದ್ದ. ಎಯ್, ಅವರ ಕಣದಾಗ ಬಣಮೆಯಿಂದ ರಾಗಿ ಹುಲ್ಲು ಹಿರದು ನಡುರಾತ್ರಿಯೊಳಗೆ ಎತ್ತಿನ ಗ್ದಾಂದ್ಲಿಗ ಹಾಕ್ತಿದ್ದ. ಇವೆ ಮಾತುಗಳು ತಾಂಡದ ತುಂಬ ಗುಲ್ಲೆದಿದ್ದವು. ಯಾವತ್ತೊ ಸತ್ತ ಚಿಮ್ನಿಯ ಆತ್ಮ ಈಗ ಜಾಗ್ರತೆಗೊಳ್ಳೋದಂದ್ರೆ. ನಾನು ಅನುಮಾನದಿಂದಲೇ ಈ ವಿಷಯವನ್ನ ತಳ್ಳಿ ಹಾಕಿದೆ. ನಾನು ಕಾಟೇಬಾರಿ ತಾಂಡಕ್ಕೆ ಹೋದಾಗೊಮ್ಮೆ ನನ್ನ ಇತಿಹಾಸದ ಕೊನೆಯ ಕುರುಹು ಆಗಿರುವ ಚಿಗಪ್ಪನ್ನ ಮಾತಾಡಿಸೋದಕ್ಕೆ ಹೋಗೆ ಹೋಗ್ತಿನಿ. ಯಾಕಂದ್ರ ಅಂವ ಸತ್ತ ಮೇಲೆ ಅಪ್ಪನೊಂದಿಗೆ ಇರುವ ಸಂಬಂಧದ ಕೊಂಡಿ ಕಳಚಿಕೊಂಡು ಮುಂದಿನ ತಲೆಮಾರು ಉಳಿದುಕೊಳ್ಳುತ್ತದೆ. ಆಗ ಸಂಬಂಧಕ್ಕೆ ಯಾವ ಬೆಲೆ ಇಲ್ಲ. ಹಾಗಾಗಿಯೇ ನಾನು ಹೋದಾಗೊಮ್ಮೆ ಅವನಿಗೆ ಇಷ್ಟವಾಗಿರೊ ಸರಾಯಿಯನ್ನ ತೆಗೆದುಕೊಂಡೆ ಹೋಗುತ್ತೇನೆ. ಈ ಸಲ ಗ್ಯಾರಂಟಿ ಸಾಯ್ತನೆ ಅಂದ್ಕೊಡ ಹೋಗಿ ಆರು ತಿಂಗಳಿಗೆ ವಾಪಾಸಾದೆ. ನನ್ನ ತಮ್ಮ ದೂರವಾಣಿ ಕರೆ ಮಾಡಲಿಲ್ಲಾ ಪರವಾಗಿಲ್ಲ ಆತ ಗಡದ್ದಾಗೆ ಇದ್ದಾನೆ ಅಂದುಕೊಂಡೆ. ಮನ್ನೆಸಾಯುವ ಹಾಗೆ ಕಂಡ ಆದರೆ ಆತನ ಸಾವಿನ ಸುತ್ತ ಎದ್ದಿರುವ ಕತೆಗಳು ಮಾತ್ರ ಬೇರೆ ಬೇರೆ ರೂಪ ಪಡ್ಕೊಂಡಿದ್ದವು. "ಏಯ್, ನಿಮ್ಮ ಕಾಕ ನಾಟಕ ಮಾಡ್ತ ಇದ್ದಾನೆ ಕಣಯ್ಯ ಕಣ್ಣು ಕಾಣಲ್ಲ, ನಡಿಯೋದಕ್ಕೆ ಆಗಲ್ಲಂತ. ಮನೆ ರಾತ್ರಿ ಆತನ ಮನೆ ಪಕ್ಕದ ಹುಡೆ ಮೇಲೆ ಪಸಂದಾಗೆ ನಿಂತ್ಕೊಂಡು ಯಾರದೊ ಜೊತೆಗೆ ಮಾತಾಡ್ತಿದ್ದ. ರಾತ್ರಿ ಒಬ್ಬನೆ ನಡಿತಾನೆ ಹಗಲು ಗೂಬೆ ಹಾಗೆ ಕುಂತಿರ್ತನ. ನನಗೆ ಯಾವುದು ನಂಬಬೇಕೊ, ಯಾವುದನ್ನ ಬಿಡಬೇಕೋ ಒಂದು ತಿಳಿಯಲಿಲ್ಲಾ. ಖುದ್ಧಾಗಿ ಅವನು ನಡಿಯೋದಾಗಲಿ, ಇಲ್ಲಾ ಚಿಮ್ನಿ ಅನ್ನೋ ಅವನ ಮಗಳು ಅವನೊಂದಿಗೆ ಮಾತಾಡೋದು ಕಂಡಿಲ್ಲ.

ಮಂದಿ ಮಾತ್ರ ಅವತ್ತು ದುಡದು ಮನಿಯನ್ನ ಮುಂದಕ ತಂದ್ಲು. ಇವತ್ತು ಸತ್ತು ತನ್ನ ತಂದೆತಾಯಿಗೆ ಕಷ್ಟ ಬರಬಾರದಂತೇಳಿ, ಮಗನಂತೆ ಆರೈಕೆ ಮಾಡಿದ್ಲು ಬಿಡು. ಅಂತೇಳಿ ಚಿಮ್ನಿಯ ಬಗ್ಗೆ ಮರತು ಹೋಗಿದ್ದ ಕತೆಗಳು ಪವಾಡದಂಗೆ ಮತ್ತೆ ಮರಕಳಿಸಿದ್ದವು. ಅಲ್ಲ ಸಾಯೋ ಕಾಲಕ್ಕೆ ಗಂಡ ಮಗ ಬೇಕು ನೋಡಿಕೊಳ್ಳದಕ್ಕೆ ಅಂತ ಗಂಡನ್ನೆ ಹಂಬಲಿಸಿ ಹೆಣ್ಣು ಶಿಶುವನ್ನ ಕೊಲ್ಲುವ, ಮಾರಾಟ ಮಾಡುವ, ಗರ್ಭದಲ್ಲೇ ಕೊಲೆಗೈಯುವವರಿಗೆ ಚಿಮ್ನಿ ಸವಾಲಾಗಿದ್ದಳು. ಅದೆಂಥ ಹಠಮಾರಿ ಅಂತ. ಹೀಗೆ ಬದಕ್ತಿನಿ ಅಂತ ಅಂದುಕೊಂಡು ಹಾಗೆ ಬದುಕಿದ್ದೊಳು ಸತ್ತ ಮೇಲೆ ತಂದೆ ಆರೈಕೆ ಇಲ್ಲದೆ ಹಾಸಿಗೆ ಹಿಡಿದು ಸಾವು ಬದುಕಿನ ನಡುವೆ ಪರದಾಡ್ತಿರೋದನ್ನ ನೋಡಿ ಸಹಿಸಲಾಗದ ಮೂವತ್ತೆ ವರ್ಷಗಳ ಅವಳ ಸತ್ತ ಜೀವ ಮತ್ತೆ ಪ್ರತ್ಯಕ್ಷವಾಗಿ ಅವನನ್ನ ಆರೈಕೆ ಮಾಡ್ತಾ ಇದೆ ಅಂದ್ರೆ ಸೋಜಿಗವೇ ಸರಿ. ಇಡಿ ತಾಂಡದ ಮಂದಿ ಚಿಮ್ನಿ ಸತ್ತಾಗ ಮಣ್ಣು ಮಾಡಿದ ಜಾಗವನ್ನ ಹುಡುಕಿ ಅಲ್ಲೊಂದು ಹಂದರ ಹಾಕಿ, ಕಲ್ಲಿಟ್ಟು ದೇವರು ಅಂತೇಳಿ ಪೂಜೆ ಮಾಡಲು ತಾಂಡದ ಪೂರ್ವ ದಿಕ್ಕಿನಲ್ಲಿರೊ ಈಚಲಗೆ ಹೊರಟೆ ಬಿಟ್ರು. ಒಂದು ಜಾಗವನ್ನ ಗುರುತಿಸಿ ಒಂದೆರಡು ಕಲ್ಲುಗಳನ್ನ ಇಟ್ಟು ನಡುವೆ ದೊಡ್ಡದೊಂದು ಕಲ್ಲಿಗೆ 'ಚಿಮ್ನಿಯಾಡಿ' ಅಂತ ಗುರುತಿಸಿ, ಸುಣ್ಣ, ಕೆಮ್ಮಣ್ಣು ಬಳಿದು ಊದಿನ ಕಡ್ಡಿ, ಕಾಯಿ, ಕರ್ಪೂರ, ಹೂ ಅರ್ಪಿಸಿ ತಮ್ಮ ಮನೆಯ ಕಷ್ಟಗಳನ್ನೆಲ್ಲಾ ಪರಿಹರಿಸುವಂತೆ ಕೋರಿಕೊಳ್ಳ ತೊಡಗಿದರು. ನನಗೆ ಸಖೇದಾಶ್ಚರ್ಯವಾಗಿತ್ತು. ಏನು ಈ ರೀತಿ! ಯಾರೋ ಹೊಂಟೋರನ್ನ ಮಾತನಾಡಿಸುವ ಪ್ರಯತ್ನ ಮಾಡಿದೆ. "ಅಲ್ಲ ಕಣ್ರಯ್ಯ ನಿಮಗೇನಾರು ಐಬ, ಸತ್ತು ಜೀವ ಇಲ್ಲಿಗಂಟಾನು ಭೂಮಿ ಮೇಲೆ ಇರೋಕ ಸಾಧ್ಯನ ಯಾವ ವಿಜ್ಞಾನಿ ಹೇಳಿದ್ದ ನಿಮಗೆ, ಅದೇನೋ ನನ್ನ ಚಿಗಪ್ಪ ನಾಟಕ ಆಡ್ತಾನೂ ಇರಬಹುದು. ನಡಿಯೋದಕ್ಕೆ ಆಗಲ್ಲ ಅಂತೇಳಿ, ಅದನ್ನ ನಂಬಿ ಈಗ ಈ ರೀತಿ ವೈಭವಿಕರಿಸೋದು ಅಂದ್ರೆ" ಮಾತಾಡುತ್ತಲೇ ಇದ್ದೆ. ಮಂದಿ ನನ್ನನ್ನೆ ಅನುಮಾನದಿಂದ, ಹುಚ್ಚ ನನಗೆ ಹಿಡಿದಿದೆ ಅನ್ನೋ ಹಾಗೆ ಕಾಣೋದಕ್ಕೆ ಸುರುಮಾಡಿಂದ ಗಪ್ಪಾದೆ. ಯಾರದೋ ಕನಸೊಳಗೆ ಬಂದು, ನಾನು ಈಚಲಲ್ಲೆ ಅದೀನಿ ನೆರಳು ಮಾಡ್ರಿ ನಿಮ್ಮನ್ನ ಉದ್ಧಾರ ಮಾಡ್ತಿನಿ ಅಂದಿದ್ಲಂತೆ ಅದಕ್ಕೆ ಈ ಪಾಟಿ ವೈಭವ.

ಯಾವುದು ಸತ್ಯನೋ, ಯಾವುದು ಸುಳ್ಳೋ ಜನ ಮಾತ್ರ ಚಿಮ್ನಿ ಅನ್ನೋ ದೇವರನ್ನ. ಅವ್ವ ಮಾ ತಾಯಿ ಚಿಮ್ನವ್ವ, ಉಧೋ ಉಧೋ ತಾಯೇ, ನರಮನುಷ್ಯರು ನಾವು, ಕರಿ

ತಲೆಯೋರು ಒಂದ ತಿಳಿದ್ರೆ ಒಂದು ತಿಳಿಯಲ್ಲ ದಾರಿಯಲ್ಲಿ ಸಹಾಯ ಮಾಡಬೇಕು, ಜೀವ ಜಂತುಗಳನ್ನ ಕಾಪಾಡಬೇಕು. ಸೇರಿಗೆ ಸವಾಸೇರು ಕೊಡಬೇಕವ್ವ ನಮ್ಮವ್ವ ನಂತಾಯಿ ಅಂತೇಳಿ ವಿನಂತಿ ಮಾಡೋದು ಚಾಲ್ತಿಯಲ್ಲಿದೆ. ಈಗ ಚಿಮ್ನಿ ಕಾಟೇಬಾರಿ ತಾಂಡದ ಸ್ಥಾಪಿತ ದೇವರುಗಳಲ್ಲಿ ಅದಿದೇವತೆಯಾಗಿ ಪ್ರತಿಷ್ಠಾಪನೆಗೊಂಡಿದ್ದಾಳೆ ನನಗಂತು ಬಹಳ ಖುಷಿಯಾಗಿತ್ತು ಎಷ್ಟೋ ವರ್ಷಗಳ ಹಿಂದೆ ನಶಿಸಿ ಹೋಗಿದ್ದ ಶರೀರ ಈಗ ಒಮ್ಮಿಂದೊಮ್ಮಿಗೆ ಹೊಸದೊಂದು ಅವತಾರ ತಳದದ್ದ ಕೇಳಿ. ಆದರೆ ಮಾಸಿಹೋಗಿದ್ದ ಗಾಯದ ಮೇಲಿನ ಕರಿಸಿಪ್ಪೆಯನ್ನ ಕಿತ್ತ ಮೇಲೆ....

*****

ಮನಿತುಂಬ ಗಲಾಟೆ. ಚಿಮ್ನಿನ ನೋಡಾಕ, ಚೊಕ್ಲಾನ ತಾಂಡದಿಂದ ಚವ್ಹಾಣ್ ಪಂಗಡದೋರು ಬಂದಿದ್ರು. ವೀಳ್ಯಶಾಸ್ತ್ರ ಮಾಡಿ ಮಾತಗಟ್ಟಿ ಮಾಡೋ ಇರಾದೆ ಅವರದು. ಆವಾಗ್ಲೆ ತಾಂಡಾದಾಗ ಚಿಮ್ನಿ ಬಗ್ಗೆ ಅಪಪ್ರಚಾರ ಸುರು ಆಗಿತ್ತು. "ಹುಡುಗಿ ಆಗ್ಲೆ ಮುದಕಿ ಆಗಾಕ ಬಂದ್ಲು. ಮಂಗ್ಲ್ಯಾನ ಬುದ್ಧಿಗೇನ ಮಂಕವದೈತೇನು. ಮದ್ವಿ ಸೊಲ್ಲೆ ತಗೀತಾ ಇಲ್ಲ, ಹಿಂಗಾರ ತಾಂಡದ ಸಂಸ್ಕೃತಿನ ಹಾಳಾಗಿ ಹೊಕೈತಿ." ಒಳಗೊಳಗೆ ಹೋಗಿ ಯಾಡ್ತಿತ್ತು ಸುದ್ದಿ. ಮಂಗ್ಲ್ಯಾ ತಲಿಕೆಡಿಸಿಕೊಂಡಿರಲಿಲ್ಲಾ. ಗಂಡ ಹುಡ್ರಂಗೆ ದುಡಿತವಳೆ, ದುಡಿಲಿಬಿಡು ಯಾರಾರು ಬಂದ್ರೆ ನೋಡಿದ್ರಾತು ಅಂತೇಳಿ ಸುಮ್ಮನಾಗಿದ್ದ. ಹಬ್ಬದ ಒಂದ ದಿನ ಜಕ್ಕು ಜುಲ್ಮಿಯಿಂದ ಹಿಡಿದು ಮನಿಯೊಳಗ ಚಿಮ್ನಿಯನ್ನ ಇರೊಹಂಗ ಮಾಡಕೆ ಪೀಕಿಗ ರಗಡಾಗಿ ಹೊಕ್ಕಿತು. "ಎಟ ದುಡಿತಿ ಮಗಳೇ, ನಾಳೆ ಅಲ್ಲೂ ನೀ ದುಡಿಬೇಕು. ಮೈಯಾನ ಕಸುವೆಲ್ಲಾ ಇಲ್ಲೆಕಳ್ಕಂಡ ಮುಂದೇನ ಮಾಡಿಯವ್ವ. ಇವತ್ತಾರು ಮನಿಯೊಳಗೆ ಆರಾಮದಿಂದ ಕುಂತ್ಕ" ಅಂಗಲಾಚುತಿದ್ಲು. "ಯವ್ವಬೇ ಅದೇನೋ ನನಗ ರೂಢಿಯಾಗೈತೆ. ಸುಮ್ನ ಕುಂತ್ಕೊಳೋದು ಅಂದ್ರ ಮೈಯೆಲ್ಲ ಜಿಡ್ಡುಗಟ್ಟಿದಂಗಾಗಿ ಏನೋ ಒಂಥರಾ. ಕೊಡಿಲ್ಲಿ ನಿನ್ನ ಸೂಜಿದಾರ, ಆಟು ನಿನ್ನ ಸೀರೆಕೆಲ್ಸನಾರು ಮಾಡ್ತಿನಿ. ನೀ ಅಂತು ಅಡಗಿ ಕೆಲ್ಸಕ ಹಚ್ಚಂಗಿಲ್ಲಾ" ಸೂಜಿದಾರ ತಗೊಂಡು ಅವರವ್ವನ ಸೀರೆ ಹೊಲಿಯೋದಕ್ಕೆ ಗಾಜು, ಟಂಕಿಸಿದ ಹಳೇ ನಾಣ್ಯಗಳನ್ನು ಕೌವಡಿಗಳನ್ನು, ಗುಂಡಿಗಳನ್ನು ಹೊಲಿಯುತ್ತಿದ್ದಳು. ದೀಪಾವಳಿಯಂತು ಲಂಬಾಣಿ ತಾಂಡದಾಗ ದೊಡ್ಡ ವಿಶೇಶವಾದ

ಹಬ್ಬ. ಊರ ಹುಡುಗಿಯರೆಲ್ಲಾ ತಿಂಗಳ ಮುಂಚೇನೆ ಸೇವಾಭಾಯನ ಮಟ್ಯೋದ ಎದುರಿಗೆ ದೀಪ ಹಚ್ಚಿಟ್ಟು ಹಬ್ಬಕ್ಕೆ ಲಂಬಾಣಿ ನೃತ್ಯದ ತಯಾರಿ ನಡಸ್ತಾರೆ. ಚಿಮ್ನಿಯ ಓರಿಗೆಯ ಸೋನಾಲಿ, ಸೇವಲಿ, ಚಾವಳಿ, ಗುಜುರಿ, ಗೋಮ್ಲಿ, ಮದವಿಯಾಗಿ ಒಂದೆರಡು ಮಕ್ಕಳ ತಾಯಂದಿರಾಗಿದ್ರು. ಸುಮಾರು ವರ್ಷಗಳಿಂದ ಚಿಮ್ನಿನೆ ಹಿರೀಕಳಾಗಿದ್ದರಿಂದ ಮೇಗಿನೊಣಿಯ ಹುಡುಗಿಯರಿಗೆ ಇವಳ ಮಾತಕೇಳ್ಕಂಡಿರೋದಕ್ಕೆ ಕಸಿವಿಸಿ. "ಈ ಮುದಿಗೂಬೆ ಯಾವಾಗ ಮದಿವೆ ಮಾಡ್ಕಂಡ ಹೊಕ್ಕೈತಂತೆ. ಏಟ ವರ್ಷದಿಂದ ನೋಡ್ತಾನೆ ಅದೀವಿ ಇದ್ರೋಸಡಗ ಊರಬಿಡೋ ಲಕ್ಷಣಗಳೇ ಕಾಣ್ತಿಲ್ಲ" ಪಾರಿ ತಾನು ದಬ್ಬಾಳಿಕೆ ಮಾಡಬೇಕು ಇವಳಂಗೆ ಅಂತ ಮನಾದಾಗಿನ ಮಾತು ಹೊರಗೆ ಹಾಕಿದ್ಲು. ಚಿಮ್ನಿ ಕಾಟೇಬಾರಿ ತಾಂಡದ ಜೀವನಕ್ಕೆ ಒಗ್ಗಿಕೊಂಡಿದ್ಲು. ಅವಳಪ್ಪ ಅವ್ವಂದಿರು, ತಂಗಿಯರು, ಇಷ್ಟೇ ಅವಳ ಜಗತ್ತು. ಈ ಗೂಡಬಿಟ್ಟು ಅಪರಿಚಿತ ಲೋಕಕ್ಕೆ ಕಾಲಿಡೋದನ್ನ ಊಹಿಸಿಕೊಂಡಾಗ ನಿಜವಾಗಿಯೂ ಅವಳು ಹೆದರಿ ಬೆವರಿಕೊಳ್ಳುತ್ತಿದ್ದಳು. ಗಂಡು ಜೀವಿಗಳ ಸಲಿಗೆಯೆ ಇಲ್ಲದ ಅವಳಿಗೆ ಕಾಫಿ ತೋಟದಲ್ಲಿ, ಊರ ಸುತ್ತ ಕೆಲಸ ಮಾಡುವಾಗ ಹುಡುಗರ ಪರಿಚಯ ವಿತ್ತು. ಎಷ್ಟೋ ಹುಡುಗರು ಅವಳನ್ನು ಕೆಣಕುವ ಪ್ರಯತ್ನ ಮಾಡಿದ್ದರು. ಒಂದಿಬ್ಬರು ಬಹಳ ಹತ್ತಿರ ಕೂಡಬಂದು ಅವಳಿಗೆ ಹತ್ತಿರವಾಗುವ ಪ್ರಯತ್ನ ಕೂಡ ಮಾಡಿದ್ದರು.

ಆವತ್ತು ಹುಡುಗಿಯರೆಲ್ಲಾ ಕುಣಿಯಲು ಬಂದಾಗ ಹುಡುಗರು ಗುಂಪು ಸೇರಿದ್ದರು. ಆ ಕಡೆಗೆ ಅವರು ಕಬ್ಬಡಿ ಶುರುಮಾಡಿದ್ದರು. ಹುಡುಗಿಯರು ಕುಣಿಯೋದರ ನಡುವೆ "ನೋಡ್ರೇ, ಗಂಡು ಹುಡುಗರು ಹೆಂಗೆ ಕಬ್ಬಡಿ ಆಡ್ತಾವ್ರೇ" ಚವ್ಹಾಣ ಕುಲದ ಜೈ ನನ್ನ ನೋಡೆ ಹೇಳಿದ್ಲು.

ಬಹುಶಃ ನನ್ನಕ್ಕ ಚಿಮ್ನಿಗೆ ಅರ್ಥ ಆಯ್ತು ಅಂತ ಕಾಣುತ್ತೆ. "ಯಾವಳಲೇ ಅಕಿ ಬೊಸುಡಿ, ಬಾಯಿ ಮುಚ್ಕಂಡು ಕುಣಿ, ಇಲ್ಲಿಕ್ರ ಹೋಗತ್ಲಗೆ" ಕೆಂಡಮಂಡಲವಾಗಿದ್ಲು. "ಚಿಮ್ನಿ, ಯಾಕಿಂಗ ಹೊಯ್ಕಂತಿದಿ, ನೀನಂತು." ಸಾಕಿ ಹೇಳಾಕ ಹೊಂಟಳು ಜೈ ಬಾಯಿ ಬಿಗಿ ಹಿಡಿದು ಬೇಡ ಎಂಬಂತೆ ಸನ್ನೆ ಮಾಡಿದ್ಲು. ಚಿಮ್ನಿಗೆ ಯಾರೋ ಹೊಡದಂಗೆ ಅನಿಸಿತು. ಆದ್ರ ಅಕಿ ಎದಿಯೊಳಗಿನ ಮಾತನ್ನ ಯಾರಿಗೂ ಹೇಳದ ಸ್ಥಿತಿ ಅವಳದು. ಅದೇ ಗುಂಪಿನೊಳಗ ಒಳ್ಳೆ ಕಟ್ಟುಮಸ್ತಾಗಿ ಯಾವ ಹೆಣ್ಣಿನ ನಿದ್ದೆಯನ್ನ ಬೇಕಾದರು ಕೆಡಿಸುವ ಆ ಹಿಂದಿನ ಓಣಿಯ ತಿಮ್ಮನಾಯ್ಕ ಎಷ್ಟೋ ದಿನಗಳಿಂದ ಅವಳ ನಿದ್ದೆ ಕೆಡಿಸಿದ್ದ.

ಯಾರಾದರು ಹುಡುಗಿಯರು ಚಿಮ್ನಿ ಅಕ್ಕ ನಾವು ಹುಡ್ರಕೂಡ ಆಟ ಆಡಾನ ಒಂದ ಘಳಗಿ ಅಂದ್ರೆ ಹಂಗೆ ಜಿಗದು ಅವನ ಜೋಡಿ ಆಟ ಆಡೋ ಹಂಬಲ. ಆದ್ರೆ ಅದನ್ನ ಮೀರಿ ನರ್ತಿಸುತ್ತಿದ್ಲು. "ಆಗೋದಾಗ್ಲಿ, ನಾನಂತು, ಚಿನ್ನನ ನೋಡಬೇಕು. ಅಂವss ತಾಂಡಕ ಬರೋದೆ ಈಗ, ಯಾರಏನಾರ ಅನ್ಲಿ. ಜೈಯಿ ಗಟ್ಟಿ ಮನಸು ಮಾಡಿ "ಅಕ್ಕ ಅಂತ" ಚಿಮ್ನಿ ಕಡೀಗನೋಡಿದ್ಲು. ಚಿಮ್ನಿಗ ಮಾತು ಕೇಳಿಸಲಿಲ್ಲಾ ಮತ್ತೊಂದು ಮೂರ ಸುತ್ತು ಕುಣಿದು. ಹಿಂದಕ್ಕೆ ಸರಿದು ಮುಂದಕ್ಕೆ ಬರುವ

ಚೀಟಿ, ಚೀಟಿ ಬಾಯಿ

ಲಾಯೇರ್ ಚೀಟಿ

ಕುಣ ಪಡೊ ಬಾಯಿ ಲಾಯೇರ ಚೀಟ

ಮಾರೊ ವೀರಾಪಡೊಬಾಯಿ ಲಾಯೇರ ಚೀಟಿ.

ಮಾರೋ ವೀರಾಪಡೊ ಬಾಯಿ ಲಾಯೇರ ಚೀಟಿ

ಸಾಕಿ ಜೋರಾಗೆ ತಿರುಗ ತೊಡಗಿದಳು. ಪ್ರತಿದಿನ ಈ ಹಾಡಿಗೆ ಬಂದೊಡನೆ ದಿನದ ನೃತ್ಯ ಮುಕ್ತಾಯಕ್ಕೆ ಬಂದಿತ್ತು ಎಂದರ್ಥ. ಚಿಮ್ನಿ ಸಾಕಿಯ ವರ್ತನೆ ನೋಡಿದವಳೇ, "ಲೇ ಹುಡುಗಿ ಹಿಂಗ ಮಾಡಿದಿ ಅಂದ್ರ ಮತ್ತ ಕುಣಿಸ್ತೀನಿ ನೋಡು. ಕೈಮಾಲ್ಯ ಧ್ಯಾನ ಕೊಡು" ಅವಳ ಒಳ ಒತ್ತಡ ಅರ್ಥೈಸಿಕೊಂಡೆ ಹೇಳಿದಳು. ಕೊನೆ ಸುತ್ತು ಮುಗಿತಿದ್ದಂಗೆ ಹುಡುಗರು ಕಬ್ಬಡಿ ನಿಲಿಸಿ ಕಣ್ಣಾಮುಚ್ಚಾಲೆ ಆಡೋದಂತೇಳಿ ನಿರ್ಧರಿಸಿದರು. ತಿಮ್ಮ, ಚಿನ್ನ್ಯಾ, ಪೀಕ, ಕಪಾಳೋ, ಗೋಡೋ, ನೋಳಿಯ, ಜಾಕು, ಚುಟ್ಟ ಹುಡುಗಿಯರ ಬರುವಿಕೆಯನ್ನ ಕಾಯತೊಡಗಿದರು. ಎರಡು ಗುಂಪುಗಳ ಆಟಕ್ಕೆ ಸುರು ಆದವು. ಚಿಮ್ನಿ ಮಾತ್ರ ತಿಮ್ಮನನ್ನ ಬೇಕಂತ್ಲೆ ರೇಗಿಸುತ್ತಿದ್ಲು. ಅವನು ಚಿಮ್ನಿ ಹಿಂದಿಂದ ಓಡಾಡುತ್ತಿದ್ದ. ಕತ್ಲಾಗ ದೀಪಮಲಿಕಂಬದ ಹಿಂದೆ ಬಚ್ಚಿಟ್ಕೊಂಡ ಅಕಿ ಹಿಂದ ಹೋಗಿ ಬಿಗಿಯಾಗಿ ಹಿಡ್ಕಂಡ. ಅವಳು ಏನು ಹೇಳಲಿಲ್ಲಾ ಅವನು ಕೈಬಿಡಲಿಲ್ಲಾ. ಪುರುಷ ಸ್ಪರ್ಶದೊಳಗೆ ಚಿಮ್ನಿ ಇಡಿ ಜಗತ್ತನೇ ಮರೆತಿದ್ದಳು. ನನಗೆ ಗೊತ್ತಿತ್ತು ತಿಮ್ಮ ನನ್ನಕ್ಕನ್ನ ಇಷ್ಟಪಡ್ತಿದ್ದಾನೆ ಅಂತ. ಆದ್ರೆ ನಮ್ಮ ಕುಲದ ಪ್ರಶ್ನೆ ನಾಳೆ ಮಂದಿ ಅವಳಪ್ಪನ ಬಗ್ಗೆ ಮಾತಾಡೋದು ಒಂದೇ ನಮ್ಮಪ್ಪನ ಬಗ್ಗೆ ಹೇಳೋದುವಂದೇ ಅಂದವನೆ, ಚಿಮ್ನಿ ಅಕ್ಕ ಔಟ್ ಅಂತೇಳಿ ಅವರಿದ್ದ ಜಾಗಕ್ಕೆ ಬಂದೇ ಬಿಟ್ಟೆ. ಇಬ್ಬರು ಹೌಹಾರಿ ಮಾರುದೂರ ಸರಿದರು. ಆಗಾಗ್ಗೆ

ಅವರಿಬ್ಬರು ಬೆಟ್ಟಿಯಾಗ್ತಿದ್ರು ಆದ್ರ ಒಳಗಿನ ಆತಂಕವನ್ನು ಹೊರಗ ಹಾಕಲಿಕ್ಕಾಗದೆ ಪರದಾಡುತ್ತಿದ್ರು. ಕಳೆ ತೆಗೆಯುವಾಗ, ಒಂದೊಮ್ಮೆ ಅವಳು ಮುಗಿಸಿ ಅವನ ಪಕ್ಕದ ಬೇರೆಯವರ ಸಾಲಿನ ನೆಪದಾಗ ಅವನ ಸಾಲಿನಲ್ಲಿ ಕುರ್ಚಿ ಆಡಿಸುತ್ತಿದ್ದಳು.

ಬೆಳದಿಂಗಳೊಳಗೆ ರಾಗಿಕೊಯ್ಯಲು ಗುತ್ತಿಗಿ ಹಿಡಿದಾಗಂತು ತಿಮ್ಮ ಎಲ್ಲರಿಗಿಂತ ಮುಂಚೆ ಮುಗಿಸಿ, ಅವನ ಹರಿತವಾದ ಕುಡಗೋಲಿಂದ ಅವಳ ಎದುರಿನ ಸಾಲನ್ನ ಹಿಡ್ಕೊಂಡ ಕೊಯ್ಯತ್ತಿದ್ದ. ಸಾಲು ಮುಗಿಸಿ ತಲಿಸಾಲೊಳಗೆ ಕುತ್ಕಂಡು ಮಾತಾಡುತ್ತಿದ್ದರು. ಚಿಮ್ನಿ ತನ್ನೆಲ್ಲಾ ಸುಖದ ಘಳಿಗೆ ಇದೇ ಅಂದ್ಕೊಳ್ಳುತ್ತಿದ್ದಳು. ತಿಮ್ಮನಿಗೆ ಅವಳನ್ನ ಮದುವೆಯಾಗುವ ಬಯಕೆ, ಆದ್ರ, ಅವನಪ್ಪ ಇದನ್ನ ಸುತಾರಾಂ ಒಪ್ಪಲ್ಲ ಅನ್ನೋದು ಗೊತ್ತಾಗಿದ್ದುರಿಂದ ಅವಳ ಜೊತೆಗೆ ಸಲುಗಿಯಿಂದ ಮಾತನಾಡುವ ಹಂತಕ್ಕೆ ಹೋದನೆ ವಿನಃ ಮುಂದುವರಿಯಲಿಲ್ಲಾ. "ಕೆಲ್ಸ ಮಾಡೋದ್ರಲ್ಲಿ ಗಂಡಬೀರಿ ಈಕಿ, ಮದ್ವಿ ಆದೋನು ಮಾತ್ರ ಪುಣ್ಯ ಮಾಡಿರ್ತಾನ" ತಿಮ್ಮ ತನಗೆ ಸಿಗದ ಚಿಮ್ನಿ ಕುರಿತು ತನ್ನೊಳಗೆ ಅಂದ್ಕೊಂಡಿದ್ದ. ಅವಳ ರೋಮ ರೋಮದೊಳಗು ಅವನೆ ತುಂಬಿಕೊಂಡಿದ್ದ. "ಗಂಡ ಅನ್ನೋನಿದ್ರೆ ಇಂಥೋವ್ನಿರಬೇಕು. ಕೆಲ್ಸ ಮಾಡಾಕನಿಂತ್ರ ಕೆಲ್ಸನ ಹೆದರ್ಕೊಬೇಕು. ಹೂಂ! ಯಾವ ಪುಣ್ಯಾತಗಿತ್ತಿಗ ಆ ನಸೀಬ ಐತೋ ಏನೋ" ಕನಸುಗಳು ಬೆಳೀತಾ ಬೆಳೀತಾ ಹೊಂಟಿದ್ವು. ಆಕಾಶದ ತುಂಬೆಲ್ಲ ಬೆಳಕಾಗಿ ಭೂಮಿತುಂಬೆಲ್ಲ ಹಸರಾಗಿ. ಕನಸಿಗೇನು ಕಾಸ ಕೊಡಂಗಿಲ್ಲ ಕಾಣೋದರಲ್ಲಿ ತಪ್ಪೇನಿದೆ. ಕನಸಗಳೆ ಮನುಷ್ಯನ ಬದುಕಿಸೋದು. ಜೀವಂತಿಕೆ ಸಿಗೋದೆ ಕನಸಿಂದ. ಜಗತ್ತಿನೊಳಗ ಬದುಕಿರೋ ಕೋಟಿ ಮಂದಿ ತಲಿ ತುಂಬ ಕನಸ ಇರ್ತಾವ ಅದಕ್ಕಾಗೆ ಅವರು ಬದುಕ್ಯಾರ. ನಾಳೆ ನಾನುವೇ ಇಂಥ ಜೀವನ ಸಾಗಿಸಿಯೇನು. ನಂಗಲದಿದ್ರುವೆ ನನ್ನ ಮಗ, ಮಗಳು ಛೇ, ಎಂಥ ಮಜ ಈ ಕನಸಿನೊಳಗಿನ ಜೀವನ. ನನ್ನಕ್ಕ ಬದುಕಿನೆಲ್ಲಾ ಕನಸುಗಳಲ್ಲಿ ಕಂಡಿದ್ಲು. ಮದುವೆ, ಮಕ್ಕಳು, ಶ್ರೀಮಂತಿಕೆ, ದೊಡ್ಡಸ್ಥಿಕೆ, ಮೊಮ್ಮಕ್ಕಳು, ಅಕ್ಕ, ತಂಗಿ, ಇಡೀ ಮನಿನೆ ಖುಷಿಯಿಂದ, ಊರೆ ಖುಷಿಯಿಂದ, ಜಗತ್ತೆ ಖುಷಿಯಿಂದ ಇರೋದನ್ನ ಕನಸು ಕಂಡಿದ್ಲು. ಕಾಣ್ತಾನೇ ಇದ್ಲು.

ಮನಿತುಂಬ ಬೀಗರು, ತಾಂಡದ ನಾಯ್ಕನ ಮನಿಗ ಕರಿಯಾಕ ಅವಳ ಮೂರನೇ ತಂಗಿ ರಾಮಿ ಹೋಗಿದ್ಲು. ಎಷ್ಟೇ ಗುದ್ದಾಡಿದ್ರು ದೊಡ್ಡೋನ ಬಿಟ್ಟು ಮಾತಾಡೋದ ಹ್ಯಾಂಗಂತ ಸಂತುನಾಯ್ಕನ್ನ ಕರಿಯಾಕ ಮತ್ತೊಂದು ಹುಡುಗಿಯನ್ನ ಗದುಮಿದ್ದು.

ಹುಡುಗನ ತಾಯಿ ಹುಡುಗಿನ ನೋಡಿ ಬಹಳನೇ ಖುಷಿಯಾಗಿದ್ಲು. "ನನ್ನ ಮನೀಗ ತಕ್ಕಂತ ಸೊಸಿ, ಇಂಥ ದುಡಿಮಸ್ಥ ಹೆಣ್ಣುಸಿಕ್ರ, ಯಾರ ಮನಿತಾನೇ ಉದ್ಧಾರ ಆಗಂಗಿಲ್ಲ" ಮನಸ್ಸಿನೊಳಗ ಮಂಡಗಿ ತಿನ್ನುತ್ತಿದ್ದಳು. ಹಂಗೆ ಆ ಕಡಿಗ ಹೋಗಿ ಗಂಡನ್ನ ವಾರಿಗ ಕರದು. "ತಡ ಯಾಕ ಮಾಡಾಕ ಹತ್ತೀರಿ, ಹುಡುಗಿ ಬಂಗಾರದಂಗದಾಳ, ನಮ್ಮ ಮನಿಗ ಹೇಳಿ ಮಾಡಿಸಿದಂಗೆ, ಎಲಿಶಾಸ್ತ್ರ ಮುಗಿಸಿ ಮದ್ವಿ ಮೂರ್ತನ ಮುಗಸನ ಮ್ಯಾಲೇಳ್ರಿ." ಜಲ್ದಿ ಮಾಡಿದ್ಲು. "ನಾ ಎಲ್ಲಿ ತಡಮಾಡಾಕತ್ತಿನೇ, ನಿಮ್ಮವ್ವನ ಹಡಬಿ, ತಾಂಡದ ನಾಯಕ, ಕಾರಬಾರಿ, ಡಾವೋ, ಊರ ಹಿರಿಯರು ಬರೋದ ಬ್ಯಾಡೇನು. ಶಾಸ್ತ್ರ ಇದು, ನಾವ ನಾವ ಮಾತಾಡಕ ಆಗಂಗಿಲ್ಲ. ಇರು ಆಟು" ಅಂದವನೆ ಅಕೀನ ಸಾಗಹಾಕಿ ಕುಂತ್ಕಂಡ.

ಈ ಕಡೀಗ ಮಾತುಕತಿ, ಮುಹೂರ್ತ ಎಲ್ಲಾ ತಯಾರಿ ನಡದಿತ್ತು. ಕರದ ಬಾಬ್ತು, ಸಂತಿ ಬಾಬ್ತು, ಗೋಟಿಗ, ಕುಂಬಾರರ ಮನಿಯಿಂದ ಮಡಿಕೆ -ಕುಡಿಕೆ ತರೋರಿಗೆ ಶಾಸ್ತ್ರ ಎಲ್ಲಾನೂ ಆಗಿ ದೀಪಾವಳಿ ಮುಗಿದು ವಾರೊಪ್ಪತ್ತಿಗೆ ಮದ್ವಿ ಮಾಡಿಕೊಡೋದಾಗಿ ಚಿಗಪ್ಪ ಒಪ್ಕೊಂಡಿದ್ದ. "ಏನಿಲ್ಲ ಮಳಿಗಾಲಕ ದುಡಿಯಕ ಕಾಫಿ ತೋಟಕ ಹೊಕ್ಕಾರ ಬಂದ ವಾರದಾಗ ಹಂದ್ರ ಹಾಕಿಸಿಬಿಡ್ತೀವಿ." ಚಿಗಪ್ಪ ಬೀಗರಿಗ ಭರವಸೆ ಕೊಟ್ಟಿದ್ದು ದೊಡ್ಡ ಚಿಗವ್ವ ಚಿನ್ನಿಗ ನಿಜವಾಗಲೂ ಎದಿತುಂಬಿ ಬಂದಿತ್ತು. "ಅಪ್ಪನ ಮನಿಯಾಗಂತು, ಒಂದದಿನ ಕುಂತಕಾಲಕಳಿಲಿಲ್ಲಾ ದುಡುದು ದುಡದು ಹಿಂಡಮಂದಿ ಹೊಟ್ಟಿಗ ಹಿಟ್ಟು ಹಾಕಿದ್ಲು. ಅಲ್ಲಿಗ ಹೋಗ್ಯಾದ್ರು ಸುಖವಾಗಿರ್ತಾಳ ಬಿಡು ನನ್ನವ್ವ" ಅಂತೇಳಿ ಕೆನ್ನೆ ಹಿಡಿದು ಲಟಗಿ ತಗಿಯಾಕ ಕೆನ್ನೆ ಮುಟ್ಟಿದ್ಲು, ಕೈಸುಟ್ಟಂಗಾಗಿ, ಹಿಂದಕ ತಕ್ಕೊಂಡ್ಲು. "ಹೂಂ, ಮುಂಜಾನಿ ಪಸಂದಾಗಿದ್ಲು ಏನಾತಿಗ" ಅನುಮಾನಿಸುತ್ಲೆ ಮೈ ಮುಟ್ಟಿದ್ಲು. "ಅಯ್ಯ ನನ್ನ ಶಿವನ, ಜ್ವರ ಕೆಂಡದಂಗ ಸುಡಾಕ ಹತ್ಯತಿ. ಏಯ್, ರಾಮಿ, ನಿನ್ನ ಔಸಡಗ ಹೇಳಬಾರ್ದೇನ ಅಕ್ಕಗ ಮೈಯಾಗ ಪಾಡಿಲಂತ ಹೋಗಾಟು ದೊಡಪ್ಪನ ಕರಿ, ಬೂದಿನಾರು ಮಂತ್ರಿಸಲಿ, ಗಾಳಿಏನಾರು ಬಡ್ಕಂಡಿರಬೇಕು" ಅಂದಾಕಿನ ಒಲಿಯಾನ ಬೂದಿ ತರಾಕಹೋದ್ಲು. ಯಾವತ್ತು ಮಾನಿಯೊಳಗ ಹೆಜ್ಜೆ ಇಡದ ಸಂತುನಾಯ್ಕ ಮಗಳಿಗ ಜ್ವರ ಐತೆಂದಿದ್ಕ ಸ್ವಾಭಿಮಾನ ಬಿಟ್ಟವನೆ ಮಾತಿನ ನಡುವೆ ಎದ್ದು ಒಳಗ ಹೋಗಿ ಕೈ ಮುಟ್ಟಿ ನಾಡಿ ನೋಡಿದ. "ಭಾರಿ ಜ್ವರ ಬಂದ್ಯೆತ ಮಗಳಿಗೆ, ಯಾರು ನೋಡಿಲ್ಲೇನ್ರವ್ವ. ಮೈ ಅನ್ನೋದು ಬೆಂಕಿ ಕೆಂಡ ಆಗ್ಯೆತೆ." ಎಲ್ರನ್ನೂ ಜಾಡಿಸಿ. "ಆಟ ಬೂದಿ ಕೊಡ ಚಿನ್ನವ್ವ" ಸೊಸಿನು ಮಾತಾಡಿಸಿದ "ಈಕ್ಕ ಮಾವ ತಂದೀನಿ" ಅಂತೇಳಿ ಒಂದು ಸಿಲಾವರಿ ತಾಟು

ಸರಿಸಿದ್ನು. ನಾಕೈದು ಸಲ ಮಂತ್ರ ಹೇಳಿ ಥೂ ಅಂತೇಳಿ ಬೂದಿ ಊದಿದ. ಚಿಟಿಕಿ ಬೂದಿಯನ್ನು ಹಣಿಗ ಹಚ್ಚಿ, ಆಟು ಮೈಗ ಸವರಿ ಚಿಟಗಿಯನ್ನು ಬಾಯೊಳಗ ಇಡ್ಕೋಳಾಕ ಕೊಟ್ಟು "ಎಲ್ಲೋ ಹೆದರ್‍ಯಾಳಿ ಪೋರಿ ಏನಗಲ್ಲ. ಗಾಳಿ ಸಂಬಂಧಿದ್ರ ಮುಂಜಾನಿ ಅಷ್ಟೊತ್ತಿಗ ಪಾಡಕೈತಿ ನೀವೇನು ಕಾಳಜಿ ಮಾಡಬ್ಯಾಡ್ರಿ" ಅಂದು ಮಂದಿಗೆಲ್ಲ ಹೆಂಡ ಹಂಚತಿರೋದ ನೋಡಿ ಕಾಲ್ಮರಿ ಮೆಟ್ಕೊಂಡು ಮನಿಕಡಿಗ ನಡದ. ಹೆಂಗೋ ಗಮನಿಸಿದ ಮಂಗ್ಲ್ಯಾ ನಮ್ಮಣ್ಣ ಹೊಂಟನಲ್ಲಾ ಅಂದವನೆ, "ಯಣ್ಣಾ, ನೀ ಎಲ್ಲಿಗ ಹೊಂಟಿ ಬಾ, ನಿನ್ನ ಮಗಳ ಕಾರೇವಿಂದ ಹೆಂಡ ಕುಡಿಯಂಗಿಲ್ಲೇನು" ಟವೆಲು ಕೊಡವಿ ಮೇಲೆದ್ದ. "ಬಂದೆ, ಸಾಗಸ್ರಿ, ಆಟು" ಮುಂದೆ ಹೆಜ್ಜೆ ಇಟ್ಟ. "ಏಯ್, ನೀ ಬರೋದು ನಂಗೊತ್ತಿಲ್ಲೇನು. ಆದದೆಲ್ಲಾನು ಮರ್‍ತಬಿಡು ಯಾಕ, ಚಿಮ್ನಿ ನಿನ್ನ ಮಗಳಲ್ಲೇನು? ನಿನ್ನ ಮಗಳಾಗಿದ್ರ ಹಿಂಗ ಮಾಡ್ತಿದ್ಯೇನು?" ಎರಡ ಮೂರು ಮಡಿಕೆ ಹೆಂಡ ಏರ್‍ಸಿದ್ರಿಂದ ಮಾತು ಹೆಚ್ಚಾಗಿದ್ವು. ಮಂದಿಯೊಳಗ ಇದೆಲ್ಲಾ ಪಾಡಲ್ಲ ಅಂತ ಸಂತುನಾಯ್ಕ ಗಪ್‌ಚುಪ್ ಹೋಗಿ ಕುಂತ. ಅವನ ಪಾಲಿನ ಹೆಂಡ ಕುಡಿಯೋ ಶಾಸ್ತ್ರ ಮಾಡಿ. "ನೋಡ್ರಪ್ಪ, ಮನಿತುಂಬ ಬೀಗ್ರುದಾರ, ನಿಮ್ಮ ಪಂಥಿಸಾಗಸ್ರಿ ನಮ್ಮನ್ಯಾರನ್ನು ಕರಿಬ್ಯಾಡಿ ಉಣ್ಣಾಕ" ಅವರ ಉತ್ತರಕ್ಕೂ ಕಾಯದೆ ಎದ್ದು ಮನಿಕಡೀಗ ಹೊಂಟೆ ಬಿಟ್ಟ. ಬಂದೋರೆಲ್ಲಾ, ಕಳ್ಳುಪಚ್ಚಿಗ ಕುರಿ ರಕ್ತ ಹಿಟ್ಟ ಕಲಿಸಿ ಮಾಡಿದ ಸಳೋಯಿ ರುಚಿಗ ಐದೈದು ಆರಾರು ರೊಟ್ಟಿತಿಂದು ಮಕ್ಕೊಂಡು, ಮುಂಜಾನಿ ಎದ್ದಿಂದ ಕೆಂಚವ್ವನ ಅಂಗಡಿಗ ಕರ್‍ಕೊಂಡ ಹೋಗಿ ನಾಕಾಣಿ ಬಜ್ಜಿ ಸಿಂಗಲ್ ಚಾ ಕುಡಿಸಿ ಊರಿಗ ಕಳುಸಿದ್ರು.

ಮಂಗ್ಲ್ಯ ಕಾಕನ ಸೊಂಟದ ನಳ ಛಳ್ ಅಂದಿತ್ತು. "ಆರೇಳ ವರ್ಷದಿಂದ, ಒಂದ ಪೈಸಕ್ಕೂ ಕೊರತೆ ಇಲ್ಲದಂಗೆ ತರೋದು ಸಾಗಸೋದು ಬಿತ್ತೋದರಿಂದ ಹಿಡಿದು ಕೋಯ್ಯುವುದರವರಿಗ ತಾನೇ ಮುಂದ ನಿಂತು ಕೆಲಸ ಮಾಡ್ತಿದ ಮಗಳನ್ನ ಮದುವಿ ಮಾಡಿಕೊಟ್ಟ ಮಾಲ್ಯ ಅಕಿ ಸ್ಥಾನ ತುಂಬೋದು ಯಾರು? ಬಾಕಿವೆಲ್ಲಾ ಪಿಳ್ಳಿಪಿಚ್ಕ. ಒಂದತಿಳಿದ್ರ ಒಂದು ತಿಳಿಯಾಣೆಲ್ಲಾ. ಯಾವತ್ತು ಹೆಂಡಕ್ಕ, ಬೀಡಿಪೆಟಗಿಗ, ಕಮ್ಮಿ ಮಾಡ್ಲಿಲ್ಲ ಮಗಳು." ತಲಿಮ್ಯಾಲ ಕೈ ಇಟ್ಕೊಂಡು ಚಿಂತಿ ಮಾಡ್ತಿದ್ದ.

"ಯಪ್ಪ ಯಾಕೋ ಅಕ್ಕನ ಜ್ವರ ಕಮ್ಮಿನ ಆಗವಲ್ದು.

ನೋಡು ಬಾ ಆಟು" ನಾಲ್ಕನೆಯ ಚೈನಿ ಕರದಾಗಲೇ ವಾಸ್ತವಕ್ಕೆ ಬಂದಿದ್ದ. "ನಿನ್ನೆ ಮುಂಜಾನಿಪಾಡಿದ್ದಲ್ಲಾ ಏನಾತು?. ಥೀ, ಹುಚ್ಚಿ ಮದ್ವಿ ಅಂದ್ರ ಹಿಂಗ್ಯಾಕ ಮನ್ಸಿಗ

ಹಚ್ಕಂಡ ಜ್ವರ ತಂದ್ಕಂಡಿ. ಹೆಣ್ಣು ಪಡ್ಕೊಂಡ ಬಂದಿದ್ದೆ ಆಟು ಅಪ್ಪನ ಈ ಮನಿ ಶಾಶ್ವತ ಅಲ್ಲ ಮಗ". ಕಣ್ಣಿಂದ ನೀರು ಹನಿತಿರೋದನ್ನ ಒರಸಿಕೊಂಡು "ಅವ್ವಾ ಎನಾತವ್ವ ನಿನಗೆ. ಒಳ್ಳೆ ಕಲ್ಲಬಂಡಿ ಇದ್ದಂಗಿದ್ದೆ, ಹುಡಗನ ಕಡೆಯೋರು ನೋಡಾಕ ಬರ್ತಾರಂದಾಗ್ಲು ಇದ್ದೇನು ಮಾಡ್ಲಿ ಕೆಲ್ಸಕ ಹೊಕ್ಕೀನಿ ಅಂದೋಳು ಹಿಂಗ್ಯಾಕ ಮಲಗಿ, ಏಳವ್ವ, ಹೆದರಬಾರ್ದು ಗಂಡ ಹುಡ್ರಿಗಿಂತ ಗಟ್ಟಿ ಮನಸ್ಸಿನೊಳು ನೀನು" ಕೈ ತಲಿ ಕೆಳಗ ಹಾಕಿ ಮೇಲೆತ್ತಾಕ ನೋಡ್ದ. ಕೈ ಸುಡುತಿತ್ತು. "ದೇವರೆ ಇಷ್ಟೊಂದು ಜ್ವರ ಐತೆ, ದೊಡ್ಡಪ್ಪನ ಕರದು ಬೂದಿ ಮಂತ್ರಸಬಾರದೇನ್ರವ್ವ ಆಟು, ಏನು ಕತ್ತೆ ಕಾಯಕ ಹತ್ತಿರ. ನಿಮ್ಮವ್ವನ ದಂಡಪಿಂಡಗಳ" ಸಿಟ್ಟನ್ನ ಎಲ್ಲರಮ್ಯಾಲು ತಗದ. "ನಿನ್ನೆ ಸಂಜಿನಾಗ, ಬೂದಿ ಮಂತ್ರಿಸಿದ್ರು ಕಮ್ಮಿಯಾಗಿಲ್ಲ." ಈಗ ಮಕರಗೌಳ ಆಗಾಕಹತ್ಯತಿ ಹೋಗು ದೊಡ್ಡಪ್ಪನ ಕರದ ಬಾ ನೀರಾರು ಹೊಡಿಲಿ" ಐದನೆ ಸಾಂತಿಗ ಹೇಳಿದ. "ಇಟ್ಟೊತ್ನಾಗ ದೊಡಪ್ಪ ಹೆಂಡ ಕುಡಿಯಾಕ ಹೋಗಿದ್ರ" ಅನುಮಾನಿಸಿದ್ಲು. "ಛೇ, ನೋಡಾಕ ಮುಂಚೆ ಎಲ್ಲಾ ಗೊತ್ತಿರೋಳಂಗೆ ಮಾತಾಡ್ತಾಳ ನೋಡು ದೊಡ್ಡಮನುಷ್ಯಳು. ಏಯ್ ಬೇವರ್ಸಿ ಹೇಳಿದಾಟು ಮಾಡಹೋಗು" ನಾಯಿಗ ಗದರೋ ಹಂಗ ಗದರಿಸಿದ. ಮರುಮಾತತಗಿಯದೇ ಸಂತುನಾಯ್ಕನ ಕರ್ಕಂಡ ಬಂದಿದ್ಲು ಸಾಂತಿ. ಮತ್ತೊಂದು ಸರ್ತಿ ಬಲಗೈ ನಾಡಿ ನೋಡಿದವನೆ. "ಕುಡಗೋಲನ್ನ ಬೆಂಕಿಯೊಳಗ ಕಾಸ್ರಿ. ದೆವ್ವ ಏನಾರ ಮಟ್ಕೊಂಡರ ಹಿಂಗಾಗತೈತಿ ನೋಡ್ತೀನಿ, ಅದೆಂಗ ಬಿಟ್ಟು ಹೋಗಂಗಿಲ್ಲ." ಕಾದಕುಡಗೋಲನ್ನ ಅಕಿ ಮುಖದಿಂದ ಮದಲು ಮಾಡಿ ಮಂತ್ರಿಸುತ್ತಲೇ ನೀರು ಹೊಡೆಯತೊಡಗಿದ. ಏನು ತಿನ್ನದ ಚಿಮ್ನಿ ಕುಂದ್ರಾಕು ತಾಕತ್ತಿಲ್ಲದೆ ಕುಸದುಬಿಳ್ತಿದ್ಲು. ಏಳ ಸಾರಿ ನೀರು ಹೊಡೆದು ನಿವಾಳಿಸಿ ಗುಡಿಸಲ ಹೊರಗೆ ಕುಡಗೋಲು ಬಿಸಾಕಿ "ಜಾಗಬಿಡ್ಸಿ ಮಲಗಿಸ್ರೀ. ಒಂದು ಸಲ ಜಿಮುಭಗತ್‌ಗೆ ತೊರ್ಸೋದು ಪಾಡು" ಅಂದವನೆ ಅವರ ಮಾತು ಕಾಯದಂಗೆ ಹೊಂಟಿದ್ದ. ಚಿನ್ನಿ ಚಿಮ್ನಿ ಕಾಲಕೆಳಗ ಗದ್ದಕ್ಕ ಕೈ ಹಿಡದು ಕುಂತಿದ್ಲು. ಉಳಿದೆಲ್ಲಾ ತಂಗಿಯರು ಸುತ್ತವರದು ಕುಂತ್ಕಂಡಿದ್ರು. "ಏಯ್, ಹಿಂಗ ಸುತ್ಲು ಹೆಣದ ಸುತ್ತ ಕುತಕಂಡಂಗಯಾಕ ಕುಳತೀರಿ ನಡೀರಿ ಆತ್ಲಗೆ ಇಲ್ಲಿವರಿಗ ಬಿಟ್ಟಿಲ್ಲಾಂದ್ರ ಏನೋ ಹೊರಗಿಂದೆ ಚಾಟಿರಬೇಕು. ಆ ಹಿಂದಿನಮನಿ ಲಾಲ್ಯನ ನೋಡಿ ಕರ್ಕಂಡ ಬಾ ಆಟು. ಸಂಜಿಮಕ್ಕರ ಗೌಳದಾಗ ಕೋಡಿಸರದಾಗ ಒಂದೀಟು ರಂಗಮನಿಹಾಕಿ ತಗದಾರು ತಗಿಲಿ." ಮಂಗ್ಲ್ಯಾ ಒಳಗೊಳಗೆ ಚಡಪಡಿಸಾಕ ಹತ್ತಿದ್ದ.

ಜ್ವರದ ತಾಪ ಹೆಚ್ಚಾಕ್ತಿದ್ದಂಗೆ ಚಿಮ್ನಿ ಒಂದನಮೂನಿ ಅಕರಬರಕ ಮಾಡಾಕ ಹತ್ತು. ಚಿನ್ನಿಗ ಗೊತ್ತಾತು. "ಏಯ್ ಹಾದರಗಿತ್ತಿ ಯಾವಳಲೇ ನೀನು. ಇಡಿ ಜಗತ್ತೆ ಇತ್ತಲ್ಲಾ ನಿನಗ ಬಿಟ್ಟಿವಳೇ ನನ್ನ ಮಗಳೆ ಬೇಕಿತ್ತ? ನೋಡಿಯಿಲ ನಮ್ಮ ತಾಂಡದ ದುರಗವ್ವನ ಪೂಜಾರಿನ ಹಾಕ್ಕೊಂಡು ಅಂಡ ಮುರಿಯೋಮಟ್ಟ ಹೋಡಿತಾನ. ಒಳ್ಳೆ ಮಾತಿಂದ ಬಿಟ್ಹೋಗು ನನ್ನ ಮಗಳನ್ನ" ಚಿಮ್ನಿ ಕೂದಲು ಹಿಡಿದು ಎಳೆದಳು. ಜ್ವರತಾಪದಾಗ ಏನಾಗ್ತಿದೆ ಅನ್ನೋ ಪ್ರಜ್ಞೆನೆ ಇಲ್ಲದೆ ಬಿದಿದ್ಲು ಚಿಮ್ನಿ. "ಎಲ್ಲಿ ಆಟು ದಾರಿ ಬಿಡ್ರಿ." ಲಾಲೂ ಮೀಟ್ಕೊಂತ ಒಳಗ ಬಂದ. ಅಸ್ತವ್ಯಸ್ತವಾಗಿ ಮಕ್ಕೊಂಡಿದ್ದ ಚಿಮ್ನಿನೊಮ್ಮೆ ನೋಡಿದ. ನಾಡಿ ಹಿಡದ, ಕಣ್ಣರೆಪ್ಪೆ ನೋಡಿ, "ಇದೇನೊ ಹೊರಗಿಂದೆ ಅನ್ನುತೆ. ಗಡಾನ ಒಂದೈದು ಲಿಂಬಿಹಣ್ಣು, ಎರಡು ಕೊಬ್ಬರಿ ಗಿಟಕು, ಅರಿಶಿಣ, ಕುಂಕುಮ, ಒಂದು ಹ್ಯಾಟಿ ವ್ಯವಸ್ಥೆ ಮಾಡಿ ಮಕರಗೌಳದಾಗ ಆಗಬೇಕು ಕೆಲ್ಸ." ಹಿಂದಕ ತಿರುಗಿ ನೋಡದಂಗೆ ಹೊಂಟ. "ಏನಿಲ್ಲಾಂದ್ರು ಒಂದ ಇಪ್ಪತ್ತ ರೂಪಾಯಿ ಸಾಮಾನು. ಎಲ್ಲಿಂದ ತರಲಿ ನಾನು ಇದ್ದಿದ್ದನೆಲ್ಲಾ ಬೀಗರು ಬಂದಾಗ ಹೆಂಡಕ್ಕ, ಅದಕ್ಕ ಇದಕ್ಕಂತ ಖರ್ಚಾಗಿ ಹೋತು." ಮಂಗ್ಲ್ಯಾ ಪ್ರತಿದಿನದಂತೆ ರಾಗ ಎಳದ. ಅವನಿಗ ಗೊತ್ತಿತು. ಹುಡುಗಿಯರು ದುಡಿದ್ರಾಗ ಒಂದೀಟು ಕಾಸನ್ನ ಅವರವ್ವಗೂ ಕೊಟ್ಟಿರ್ತಾರಂತ. ಇದೇ ಸರಿಯಾದ ಟೈಮು ಕಾಸ ಬಿಚ್ಚಿಸಾಕಂದವನೆ ಚಿನ್ನಿಕಡೀಗ ನೋಡದ. "ಐಯ್, ನಿಂದ ಗೊತ್ತಿಲೇನ ನನಗ. ಒಳ್ಳೆ ಟೈಮಿಗೆ ನರ ಹಿಡಿತಿ. ಆನೆಯಂತ ನನ್ನ ಮಗಳೆ ಹಾಸಗಿ ಹಿಡಿದಿರೋ ಹೊತ್ನಾಗ ಈ ದುಡ್ಡು ಇಟ್ಕೊಂಡು ನಾನಾರು ಏನ್ಮಾಡೇನು ಮದ್ಲು ಮುಂದಿನೂರಿಗ ಓಡಿಹೋಗಿ ತಗಂಡ ಬಾ. ದುಡ್ಡಸಿಗ್ತು ಅಂತೇಳಿ ಹೆಂಡ ಕುಡಿಯಾಕ ಕುಂತಿಯಾ ಹೊತ್ತಿನ ಸರಿಗ ಕೆಲ್ಸ ಮುಗಿಲೇಬೇಕು. ಹುಷಾರ್." ಅವನಿಗೆ ತಾಕತ್ತು ಮಾಡಿನೆ ಕಳುಸಿದ್ಲು.

ಮಂಗ್ಲ್ಯ, ಎಷ್ಟೇ ಸಾಚಾ ಆದ್ರೂ ಬಾಟಲ ಹೆಂಡ ಕುಡಿಯದೆ ಬರೋನಲ್ಲಾ ಅನ್ನೋ ಸತ್ಯ ಎಲ್ಲರಿಗೂ ಗೊತ್ತಿತ್ತು. ಆದ್ರ, ಹೊತ್ತಿಗ ಸರಿಯಾಗಿ ಬಂದಿದ್ದ. ಮಂದಿ ಅಡ್ಡಾಡೋದು ಕಮ್ಮಿಯಾಗಾನ ಎಚ್ರ ಇಲ್ಲದಂಗೆ ಬಿದಿದ್ದ ಚಿಮ್ನಿನ ಇಬ್ಬರು ಮೂವರು ಹಿಡದು ನಡೆಸಿಕೊಂಡು, ಎಳೆದುಕೊಂಡೆ ಹೊಂಟರು.

ದಾರಿಯೊಳಗೆ ಹೆಚ್ಚು ಜನರಿಗೆ ಗೊತ್ತಾಗದಂಗೆ ನೋಡ್ಕಂಡ್ರು. ಲಾಲ್ಯ, ರಂಗೋಲಿಯೊಳಗ ಚೌಕ ಮನಿಮಾಡಿ ರಂಗ ಕಟ್ಟಿದ್ದ. ಲಿಂಬೆ ಹಣ್ಣು ಕೋಯ್ದು ಕುಂಕುಮ, ಅರಿಶಿಣ ಹಚ್ಚಿ ದಿಕ್ಕು ಕಟ್ಟಿದ್ದ ಯಾವಾಗೋ ಬಾಚ್ಕೊಂಡಿದ, ಹೊಲಸು

ನಾರತಿರೊ ಜಡಿ ಬಿಚ್ಚಿದ್ದ. ಮೊದಲೇ, ಮೂರುವರಿ ಅಡಿ ಎತ್ತರ ವಿಕಾರರೂಪ, ಕಪ್ಪು ಮೈ, ಬಿಳಿಗೂದಲು ನೊಸಲಿಗೆ ಕುಂಕುಮ ಬಳ್ಕಂಡೊ ಇನ್ನೂ ವಿಕಾರವಾಗಿ ಕಾಣ್ತಿದ್ದ. ಸಣ್ಣ ಹುಡುಗರೆಲ್ಲಾ "ಮನಿಗಹೋಗ್ರಿ, ಇಲ್ಲಾಂದ್ರೆ ನಿಮ್ಮನ್ನ ಹಿಡ್ಕಳುತ್ತೆ ನೋಡಿ." ಹೆದರಿಸಿ ಓಡಿಸಿದ. ದಿಕ್ಕಿಗೊಂದೊಂದು ವಿಳ್ಯದೆಲೆ, ಅಡಿಕೆ, ಅರಿಶಿಣ, ಕುಂಕುಮ ಹಚ್ಚಿ. ಊದಿನಕಡ್ಡಿ ಹಚ್ಚಿಟ್ಟು, ದಿಕ್ಕಿಗೊಮ್ಮೊಮ್ಮೆ ನಮಸ್ಕರಿಸಿದ. ಮಂತ್ರ ಉಚ್ಛಾರಣೆ ಮಾಡಿದ. ಏಯ್, ಕಾಳಿ, ಮಂಕಾಳಿ, ಕಲ್ಕತ್ತವಾಲಿ

ಯಾರ ಹೊರಗ ಹಾಕಲಿ, ಒಳಗಹಾಕಲಿ
ಗಾಳಿಯೊಳಗ ತೇಲಿಬಿಡಲಿ
ನೀರೊಳಗೆ ಹಾಕಿ ಬಿಡಲಿ ನೀಮಾತ್ರ ಎಲ್ಲಾ ತಗಿಬೇಕು
ಬಾ....... ಹೂಂ ಹೂಂ....... ಬಾ...... ತಾಯೇ ಬಾ......

ಬಾಳ ಹೊತ್ತು ಹಾಗೇ ಅಬ್ಬರಿಸುತ್ತಿದ್ದೋನು ಗಡಗಡ ನಡಗೋಕ ಸುರುಮಾಡಿದ. ಕಟ್ಟಿದ್ದ ಹ್ಯಾಟಿನ ಕೈಯಾಗ ಹಿಡಿದು ಚಿಮ್ನಿಮ್ಯಾಲ ನಿವಾಳಿಸಿ ಹಲ್ಲಿಂದ್ಲೆ ಜಬಡಿ ಕುತ್ತಿಗೆ ಹರಿದು ರಕ್ತಾನ ಚಿಮ್ನಿ ಮಾರಿಮ್ಯಾಲ ಚೆಲ್ಲಂತ ಚೆಲ್ಲಿದ ರಕ್ತ ಮಾರಿಮ್ಯಾಲ ಮೈಮೇಲೆ ಬಿದ್ದು ಮುಖ ವಿಕಾರಗೊಂಡಿತ್ತು.

"ಹಿಂದಕ ತಿರುಗಿ ನೋಡದ ಹಾಗೆ ಮಾತಾಡದಂಗೆ ಕರ್‍ಕೊಂಡ ಹೋಗಿ ಮಲಗಿಸಿ ಬಿಡ್ರಿ ಮುಂಜಾನೆಗಾಗಲೇ ಜ್ವರ ಕಮ್ಮಿಯಾಗುತೆ." ಅವನ ಕೈಯಾಗೆಲ್ಲಾ ಇರೋರಂಗೆ ಕರಾರು ವಕ್ಕಾಗಿ ಹೇಳಿದ. ಯಾರು ಮಾತಾಡದಂಗೆ ಸಿದಾಮನೀಗ ತಂದು ಹಾಸಗಿ ಬಿಡಿಸಿ ಗೋಡೆ ಕಡಿಗ, ದೇವರ ಗೂಡಿನತಾವ ಮಲಗಿಸಿದ್ರು. ಇಡಿರಾತ್ರಿ ಚಿಮ್ನಿ ಕನಲಿದಳು, ಜ್ವರದತಾಪ ಹೆಚ್ಚಾಗಿದ್ಕ ಕರಕರ ಹಲುಕಡಿದ್ಲು. ಜ್ವರ ಕಡಿಮಯಾಗೊ ಯಾವ ಲಕ್ಷಣಾನು ಕಾಣಲಿಲ್ಲಾ. ಗಾಬರಿಯಾದ ಚಿನ್ನವ್ವ. "ಹಾಳಮನಿ ಜ್ವರ ಯಾಕ ಕಮ್ಮಿಯಾಗವಲ್ದು, ಎಯ್, ಮಗಳೆ ಚಿಮ್ನಿ, ನೀರ ಕುಡಿತಿ ಏನವ್ವ" ಮೂರನಾಕದಿನ ಆಯ್ತು ಹೊಟ್ಟಿಗಾಟು ಅಂಬ್ಲಿ ಉಂಡ್ರು. ನನ್ನ ತಾಯಿ ತಾಂಡೆ ದುರಗವ್ವ, ಸೇವಾಬಾಯ, ಕಾಪಾಡಪ್ಪ. ಮಗಳು ಪಾಡಾದ್ರ ಜೋಡಿ ತೆಂಗಿನಕಾಯಿ ಹೊಡಿತೀನಿ. ತಾಳೀಮರದ ದುರಗವ್ವ, ಏಯ್ ನಮ್ಮವ್ವ ನಂತಾಯ ಊರಮುಂದಿನ ಚೌಡಿ, ಕಾಪಾಡ್ರವ್ವ ನನ್ನ ಕಂದನ್ನ ಹನುಮಾ ಬಾಪು, ನಿಮ್ಮದೇ ನಾರುದೋಷ ಇದ್ರೆ ತೀರಿಸ್ತಿವಿ ಅಪ್ಪ, ನಾವು ಕರಿತಲಿ ನರಮನುಷ್ಯರು ಒಂದ ತಿಳಿದ್ರ ಒಂದು ತಿಳಿಯಾಣೆಲ್ಲ ಎಲ್ಲಾ ನಿಮ್ಮ ಕೈಯಾಗೈತೆ." ಆವಾಗ್ಲೆ ಎದ್ದು ಸೀಮೀ ದೇವರನ್ನೆಲ್ಲಾ

ಸ್ಮರಿಸುತ್ತಿದ್ನು. "ಯವ್ವ ಯವ್ವ" ಚಿಮ್ನಿ ಕನಲಿದಳು. "ಏನಪ್ಪ, ಏನಾಗ್ತಿದೆಯವ್ವ. ಹೂಂ! ಹಾಳ ಮನಿ ದೇವರಿಗೂ ಕರುಣೆ ಇಲ್ಲ. ನಮ್ಮಂತ ಮಂದಿತಾವ ಏನೈತೆ ಅಂತ ಕಷ್ಟ ಕೊಡ್ತಾನ ಅಂತೀನಿ. ಏನಿಲ್ಲಾ, ಏನಾರು ಹೆಚ್ಚು ಕಮ್ಮಿ ಆತಂದ್ರ ಎಲ್ಲಾ ದೇವರನ್ನ ತಗೊಂಡ ಹೋಗಿ ಕೆರಿಯೊಳಗ ಎಸಿತೀನಿ" ಒಳಗಿನ ಸಂಕಟ ಕಡಿಮೆ ಮಾಡೋ ಪ್ರಯತ್ನ ಮಾಡತೊಡಗಿದಳು.

ಚಿಮ್ನಿ ಮೂಗಿಂದ ಬಸಾ, ಬಸಾ ಉಸಿರು ತಂಗೊತಿದ್ಲೆ ವಿನಃ, ಮಾತಿಲ್ಲದಂಗೆ ಬಿದ್ಕಂಡಿದ್ಲು. ಅವಳ ಅವ್ವ-ಅಪ್ಪ ಮಾಡೋ ಎಲ್ಲಾ ಪ್ರಯತ್ನಾನ ಮಾಡಿದ್ರು, ಯಾರೋ ಹೇಳಿದ್ರು ಭಗನ್ಯಾ ಪೂಜಾರಿ ಹತ್ರ ಹೋಗಿ ಶಕುನ ತಗಿಸಿನೋಡು ಅಂತ." ಅದು ಆಗೆ ಹೋಗಲಿ" ಮಂಗ್ಲ್ಯಾ ಓಡಿದ. ಭಗನ್ಯಾ ಪೂಜಾರಿ, ಸೊಪ್ಪಿ ತರಾಕ ಹೊಲಕ ಹೋಗಿದ್ದ. ಅವನ್ನ ಹುಡಕ್ಕೊಂಡು ಅವನ ಅಡವಿ ಹೊಲಕ್ಕೆ ಹೊರಟ. "ಈ ಹಾಳಾದ ಪೂಜಾರಿ, ಯಾವ ಮೂಲೆಯೊಳಗ ಸೊಪ್ಪಿಕೊಯ್ಯಕ ಹತ್ಯಾನಪ್ಪ." ಅನುಮಾನದಿಂದ್ಲೆ ಮುಂದೆ ಹೆಜ್ಜೆ ಇಟ್ಟೋನು ಹಿಂದಕ್ಕ ಸರದ. ಪೂಜಾರಿ ಯಾವದೋ ಹೆಂಗಸಿನ ಜೊತೆಗೆ ನಗ್ತಿರೋದು ಕೇಳಿಸಿದ್ದೆ ಮಂಗ್ಲ್ಯಾ ವಾಪಾಸು ದಾರಿಗೆ ಬಂದ. "ಥು, ಇವ್ನವ್ವನ ಹೊಲಸ ಪೂಜಾರಿ, ಮೈಮ್ಯಾಲಿನ ಹೊಲಸು ವರ್ಷ ಒಪ್ಪತ್ತಿಗೂ ತಗಿಯಂಗಿಲ್ಲಾ. ಅವನ ಜಡಿ ಅನ್ನೋದು ಗಬ್ಬನಾರುತ್ತೆ ಇಂಥೋವನಿಗೆ ಆ ತಾಂಡದ ದುರಗವ್ವ ಸೇವಾಭಾಯ ಹೆಂಗ ಒಲದ್ರೋ, ಅದು ಅಲ್ಲದೆ ಊರಾನ ಹೆಂಗಸರ ಕೂಡ ಇಲ್ಲಸಲ್ಲದ ವ್ಯವಹಾರ ಇವನೋವು. ಹ್ವಾದ ವರ್ಷ ನೋಡಿಯ ಅದ್ಯಾವಳನೋ ತಡವಾಕ ಹೋಗಿ ಕಾಲ್ಮರಿಯಿಂದ ಹೊಡತ ತಿಂದಿದ್ದ ಈಗ ಅದ್ಯಾವ ಪಾಪಿಷ್ಠೆನೋ ಏನೋ." ಹೆಂಗೂ ತಾಂಡಕ್ಕೆ ಬರ್ತಾನಲ್ಲ ನೋಡ್ಕಂಡ್ರಾತು" ಅಂದವನೆ ತೆಳಗ ಚೆಂಡ ಹಾಕ್ಕೊಂಡು ಮನಿಗ ಬಂದ. ಗಬ್ಬು ಚೀಲದಿಂದ ನಾಕ ಕವಡಿ ತಗದು ನೆಲದ ಮ್ಯಾಲಿಟ್ಟ. ಒಂದು ಊದನ ಕಡ್ಡಿ ಮುರದು ಹಚ್ಚಿದ. ಒಂದ ಸಲ ನೆಲದ ಮೇಲೆ ಕವಡಿ ಬಿಸಾಕಿ ಏನೇನೊ ಲೆಕ್ಕ ಹಾಕಿದ. ಮತ್ತೊಂದ ಸಲ, ಇನ್ನೊಂದು ಸಲ ಹಾಕಿ ಕಡೀಗ ಬಾಯಿ ಬಿಟ್ಟ ಭಗನ್ಯಾ ಪೂಜಾರಿ. "ಛೇ, ಯಾವದೋ ಗಂಡದೆವ್ವ ಬಡ್ಕಂಡೈತೆ. ಹುಡಗಿ ಜೀವಕ ಅಪಾಯ." ಕಣ್ಣು ಮುಚ್ಚಿ ಏನೇನೋ ಕಂಡೋನ ಹಾಗೆ, ಯಾರದೋ ಕೂಡ ಮಾತಾಡ್ತಿರೋ ಹಾಗೆ ಮಾಡ್ತಿದ್ದ. ಮಂಗ್ಲ್ಯಾ ಎರಡೂ ಕೈ ಜೋಡಿಸಿ ಅಸಾಯಕನಾಗಿ ಕುಳಿತಿದ್ದ. ಬಹಳ ಹೊತ್ತು ಚೌಕಾಸೆ ಮಾಡ್ದ ಪೂಜಾರಿ. "ಹೂಂ, ಹುಡಗಿನ, ಮಟ್ಟೊಗ ಕರ್ಕಂಡ ಬಾ, ಹಂಗೇ

ದುರ್ಗವಗಂತ ಎಲೆ, ಅಡಿಕಿ, ದಕ್ಷಿಣೆಗೆ ಒಂದ ಎರಡೂವರಿ ರೂಪಾಯಿ". ಭಗನ್ಯಾ ಪೂಜಾರಿ ಎದ್ದು ಗುಡಿ ಕಡಿಗ ಹೊಂಟ. ಮಂಗ್ಲ್ಯನಿಗೆ ಅವನ ವರ್ತನೆ ಹಿಡಸದೇ ಇದ್ರು, ಯಾವಾದಾರು ಗುಡಿಯೊಳಗೆ ನಿದ್ದೆ ಬಂದ್ರ ಸಾಕು ಅನ್ನೋ ನಿರ್ಧಾರಕ ಬಂದಿದ್ದ. ಜ್ವರ ಬಂದು ಎರಡ ವಾರಗಳೆ ಕಳೆದಿದ್ದು ಕಡಿಮೆ ಆಗೋ ಲಕ್ಷಣಗಳೇ ಕಾಣಲಿಲ್ಲ. ಜುಕ್ಕ ಜುಲ್ಮಿಯಿಂದ ರಾಗಿ ಕಾಟಿ ಹಾಕ್ತಿದ್ಲು ಅವಳವ್ವ. ಅದರ ಮ್ಯಾಲೆ ಜೀವ ಹಿಡ್ಕಂಡಿದ್ಲು ಚಿಮ್ನಿ. ಹರೆಯದ ಹುಡುಗಿ ಒಳ್ಳೆ ತೊಲಿತುಂಡಿನಂಗಿದ್ದೊಳು ಸೊರಗಿ ಹೋಗಿದ್ಲು. ಅವಳಪ್ಪ ಒಬ್ಬನೆ ಹೊತ್ಕಂಡ ಗುಡಿಗ ತಂದ. ಪೂಜಾರಿ, ಬಂಡಾರ ಬಡ್ಕಂಡು, ಕೈಯಾಗ ಬೇವಿನ ತಪ್ಲ ಮತ್ತೊಂದ ಕೈಯಾಗ ಹಚಡ, ಮೈಮ್ಯಾಲ ದುರಗಮ್ಮ ಬಂದಿದ್ಲು.

"ಹೂಂ....ಹೂಂ..........ಎಯ್, ಯಾರಲೇ ನೀನು

ಕುರುಕೊಡು?

ಹಚಡದಿಂದ ಎಲುಬಿನ ಹಂದರವಾಗಿದ ಚಿಮ್ನಿ ಮೈಗೆ ಬಾರಿಸಿ "ಹೂಂ, ಮಾತಾಡೋ, ಯಾರೋ ಕೇಮ್ಯಾನ, ಗೇಮ್ಯನಾ, ಬೋಜ್ಯ......ಯಾರಲೇ ನೀನು, ಬಾಯಿ ಬಿಡ್ತಿಯ ಇಲ್ಲಾ ಸಿಗದ ಹಾಕ್ಲ. ಯಾವ ಪ್ರತಿಕ್ರಿಯೆ ಬರದಕ್ಕೆ ಪೂಜಾರಿ ರುದ್ರನಾದ. ಚಿಮ್ನಿ ಕೂದಲ ಹಿಡಿದು ಬೊಗಳ ಯಾಕ ಬಂದಿ, ಏನು? ಈ ಹುಡುಗಿ ಇಷ್ಟ ಆದ್ಲ. ಬರದೇ ಇನ್ನೇನ ಮಾಡಿ. ಯಾವಾಗ ಹೊಕ್ಕಿ, ಏನು ಹೋಗಲ್ಯಾ? ಏನು ನಿಮ್ಮಪ್ಪ ಮನಿ ಅಂದ್ಕೊಂಡೀಯಾ. ಒಳ್ಳೆ ಮಾತಿಂದ ನಿನ್ನ ಗುರತು ಕೊಡು. ಕೊಡಲ್ಯಾ. ಜೋರು ಜೋರು ಸದ್ದು ಮಾಡಿ, ಇಡಿ ವಾತಾವರಣವನ್ನೆ ಭಯಭೀತಿಗೊಳಿಸಿ, ನೆರದ ಮಂದಿ ಗಡಗಡ ನಡಗ್ತಿದ್ರು. ಯಾವೋ ಒಂದೆಲ್ಡ ಸಣ್ಣ ಪಿಳ್ಳಿಗಳು ಅಂಜಿ ಉಚ್ಚೆ ಹೊಯ್ಕಂಡಿದ್ದು. "ಹಂಗ ಬಾ ದಾರಿಗೆ, ಲೇ ಬೋಜ್ಯ ನನಗ ಗೊತ್ತಿತು ನೀನ ಅಂತ. ಇಂಥ ಹುಡುಗೀನ ಹಿಡ್ಕಂಡಿ ಅಂದ್ರ ನೀನೆ...... ಜಾಣ ಹುಡಗನಂಗೆ ನನ್ನ ಮಾತು ಕೇಳು. ಒಂದ ಹಿಡಿ ನಿನ್ನ ಕೂದಲು ಗುರುತಿಗೆ ಕೊಟ್ಟು ಮತ್ತೆಂದು ನಮ್ಮೂರ ಗಡಿಗ ಹಾಯಿಬ್ಯಾಡ." ...... ಪೂಜಾರಿ ಶಾಂತನಾದಾಗ ಅವನ ಕೈಯಾಗ ಕೂದಲಿದ್ವು. ಮಂದಿಗ ಗಾಬರಿ. "ಸೂಳಿಮಗ ಹೊದ್ನಲ್ಲಾ ಬಿಡು" ಯಾರೋ ಹಿಂದಿಂದ ಧ್ವನಿ ತಗದ್ರು. "ಹರೆವಯಸ್ಸಿನೊಳಗೆ ಸಾಯ್ತುವ ಕಂಡೋರ ಮೈಯಾಗ ಸೇರ್ಕಂಡು ಆಟ ಆಡತ್ತಾವ" ಹಿರಿಯ ಜಂಜನಾಯ್ಕ ಹೇಳಿದ. "ಏನೋ ನಮ್ಮ ನಸೀಬ ಪಾಡಿತ್ತು ಸಣಪ್ಪ. ಪೂಜಾರಿ ಮಾತಿಗ, ಹೆದರಿ ಬಿಟ್ಟಹ್ವಾದ, ಅವನ

ಮೀಸ್ಯಾಗ ನನಹಾಟ ಹೊಯ್ಯ, ಎಲ್ಲರನ್ನ ಬಿಟ್ಟು ನನ್ನ ಮಗಳಿಗ ಹಿಡ್ಕಬೇಕ ಅದಾವಲ್ಲ. ಅವರ ಮನಿವು ಅವರನ್ನ ಬಡ್ಕಳೋದ ಬಿಟ್ಟು ನಮ್ಮ ಮನಿ ಮಟ ಬಂದಾನ, ಕಾಲಾನವು ಕೈಗ ತಗೊಂತಿದ್ದೆ ಮದ್ದೆ. ಆ ಹಾಟಗಳ ಅದಾನಂದಿದ್ರೆ ಅವನ ಒಸ ಅಡಗ್ಲಿ ಕದಕಟ್ಲಿ ನಮ್ಮ ಮನಿವು ಅಂದ್ರ ಅದೇಟ ಸಲಗಿ ಅಂತೀನಿ". ಚಿನ್ನಿ ತಾರಮಾರ ಬೋಯ್ಯ ತೊಡಗಿದಳು. ಅಲ್ಲೇ ಇದ್ದ ಬೋಜ್ಯ ನಾಯ್ಕನ ಅವ್ವ ತುಟಪಿಟಕ್ ಅನ್ನಲಿಲ್ಲ. ಬಾಯಿಬಿಟ್ರ ಮಂದಿ ಎಲ್ಲಾ ಸೇರ್ಕಂಡ ಉಗಿತಾರ ಈಗ ಚಿನ್ನಿ ಒಬ್ಯಾಕಿನ ಸುರು ಹಚ್ಕೊಂಡಾಳ ಅಂತ, ಸೀರಿ ಸೆರಗಿನಿಂದ ಕಣ್ಣೀರು ಒರೆಸಿಕೊಂಡು ಭಗನ್ಯಾ ಪೂಜಾರಿಗ ಹಿಡಿಶಾಪ ಹಾಕ್ತ ಹಿಂದಕ್ಕ ಸರದು ಮಾಯವಾದ್ಲು.

ಒಬ್ಬ ದೇವರನ್ನೂ ಬಿಡದೆ ಹೇಳಿಕ, ಪೂಜೆ, ಹರಕೆ ಎಲ್ಲಾ ಆಯ್ತು ಜ್ವರ ಮಾತ್ರ ಕಮ್ಮಿ ಆಗೋ ಲಕ್ಷಣಗಳೇ ಕಾಣಲಿಲ್ಲ. ಕಂಡ ಕಂಡೋರ ಮಾತನೆಲ್ಲಾ ಕೇಳಿ ಆಯ್ತು. ಯಾವದಕ್ಕೂ ಜುಪ್ ಅನ್ನದಕ್ಕೆ ಆಸ್ಪತ್ರಿಗಾರು ಕರ್ಕಂಡ ಹೋಗ್ರಿ ಅಂತೇಳಿ ಯಾರೋ ತಿಳಿದೋರು ಹೇಳಿದಕ್ಕೆ ಕಾಟೇಬಾರಿ ತಾಂಡದಿಂದ ಮೂರುವರೆ ಮೈಲಿದೂರದ ತೆಲಗಿರಹಳ್ಳಿಗೆ ಒಯ್ಯುಲು ಬಂಡಿ ಕೇಳಿದ ಮಂಗ್ಯಾಲ್ಯನಾಯ್ಕ. ಯಾರೋ ಪುಣ್ಯಾತ್ಮರು ಅವನ ಕಷ್ಟನೋಡಾಕೆ ಆಗದೆ ಬಂಡೀನು ಕೊಟ್ರು. ನಸಕಿನೊಳಗೆ ದವಾಖಾನಿಗ ಒಯ್ದು ಡಾಕ್ಟ್ರತಾವ ತೋರಿಸಿದ್ರು. "ಯಾವಗಿಂದ ಜ್ವರ ಬಂದವಪ್ಪ ನಾಯ್ಕ" ಬಾಯಾಗ ಮಿಷನಿಟ್ಟು ಕೇಳಿದ್ರು ಡಾಕ್ಟರ್ "ಎಯ್, ಏನ ಹೇಳ್ಲಿ ಸೊಮಿ, ಒಂದೆಲ್ಡ ಮೂರವಾರ ಆದ್ರು, ಹಿಂಗ ಸುಡ್ತಾವರಿ ಬುದ್ಧಿ ಅದೇನ ಬಡ್ಕಂಕೈತೋ" ಇತಿಹಾಸನೆ ಹೇಳಿದ. "ಹೊಟ್ಟೆಗ ಏನ ತಿಂತಿಯೋ ಬದ್ಮಾಷ್, ನೀ ಏನ ಮನುಷ್ಯನ ದೆವ್ವ. ಅಲ್ಲಾ ಜ್ವರದಿಂದ ಹುಡುಗಿ ಸಾಯ್ತಿರೋ ಹೊತ್ನಾಗ ನೀನು ಅದೇನ್ ಮಾಡ್ತಿದ್ದೆ ಇಷ್ಟೊಂದು ದಿನಗಳ ಕಾಲ?" ಮರುಕದಿಂದ ಬೊಯ್ಯ ತೊಡಗಿದರು. "ಏನ ಮಾಡ್ಲಿ ಬುದ್ಧಿ, ಗಾಳಿ ಬಡಕೊಂಡೈತೆ ದೆವ್ವ ಮೆಟ್ಕೊಂಡೈತಿ, ಯಾರೋ ಮಾಡ್ಸಿದಾರೆ ಅಂತೇಳಿ ಮಂದಿ ಹೇಳಿದ್ಕ ಅಲ್ಲೇ ಅದು ಇದು ಮಾಡ್ಸಿದೆ" ತಪ್ಪು ಒಪ್ಪಿಕೊಂಡ. "ಇನ್ನೊಂದು ದಿನ ತಾಂಡದಾಗೆ ಇಟ್ಕೊಂಡಿದ್ರ ಪಾಡಿತ್ತು. ಸತ್ತು ಹೊಕಿದ್ಲು. ದೆವ್ವದ ಕಾಟ ಇಲ್ಲ ದೇವರ ಕಾಟ ಅಂತಂದು. ಸುಟ್ಟು ಬರ್ತಿದ್ರಿ ಅತ್ಲಗೆ" ನೇರವಾಗೆ ಹೇಳಿದ್ರು ಡಾಕ್ಟ್ರು. "ಏನ ಮಾಡೋದ ಸೋಮಿ, ಮೂಡಜನನಾವು, ನಮಗೇನು ತಿಳಿತೈತೆ ತಾಂಡದಾಗ ಏನಂತಾರೋ ಅದನೆಲ್ಲಾ ಪ್ರಯತ್ನ ಮಾಡಿದ್ವಿ. ಗಂಡಸಿಗಿಂತ ಹೆಚ್ಚು ಹೊಲಮನಿ ಕೆಲ್ಸ ಮಾಡೋ ಮಗಳು ಇವತ್ತು

ಸತ್ತೋಳಂಗೆ ಬಿದ್ಕಂಡವಳೇ ನೀವೆ ಏನಾರು ಮಾಡಿ ಸಾಮೀ" ಅಂಗಲಾಚಿದ. ಅವನ ಮುಗ್ಧತೆಗೆ ಮರುಗಿದ ಡಾಕ್ಟ್ರು "ನೋಡು, ನನ್ನ ಪ್ರಯತ್ನ ಮಾಡ್ತಿನೀ. ಕಮ್ಮಿ ಆಗಬಹುದೂ ಇಲ್ಲದೆ ಇರಬಹುದು. ಒಂದು ಚೀಟಿ ಕೊಡ್ತಿನಿ. ದಾವಣಗೆರೆ ದೊಡ್ಡ ಆಸ್ಪತ್ರಿಗ ಹೋಗಿ ಅಡ್ಮಿಟ್ ಮಾಡಿಬಿಡು ಬದುಕಿದ್ರೆ ಬದುಕಬಹುದು" ಎಂದು ಅವನ ಕೈಗೆ ಒಂದು ಚೀಟಿ ಕೊಟ್ರು. "ಹಂಗನಬೇಡಿ ಸೋಮಿ, ನಾವು ಬಡವರು ನಮ್ಮತಾವೇನೈತೆ, ನಾಕ ಕಣ್ಣೀರು ಆಟೇಯ" ಚಿನ್ನಿ ಸೆರಗಿಂದ ಕಣ್ಣೀರು ಒರೆಸಿಕೊಂಡಳು. "ಈಗ ಅತ್ರ ಏನ ಪ್ರಯೋಜನ ಬೇ ಲಮಾಣಿ ನಿನ್ನಮ್ಮನ ಮೂಡಜನಾನತಂದು. ಏನ ಕಾಯಿಲೆ ಅಂತೇಳಿ ತಿಳಿಯೋಕ ಮದ್ಲು ನೀವ ನೀವ ಗಾಳಿಸಕ, ದೇವರದೋಷ ಅಂತಂದು ಕಾಲಹರಣ ಮಾಡಿ ಸಾಯೋ ಮುಂದ ಆಸ್ಪತ್ರಿಗ ಕರ್ಕೊಂಡು ಬಂದ್ರ ನಾವೇನ ಮಾಡೋಣು." ಡಾಕ್ಟರ್ ಸತ್ಯ ಹೇಳುವ ಪ್ರಯತ್ನ ಮಾಡಿದ್ರು. "ಎನೋ ಸೋಮೀ, ನೀವು ತಿಳಿದವಸ್ತ್ರು, ಹೆಂಗಾನ ಮಾಡಿ ಮಗೀನ ಉಳಿಸ್ಕೊಡಿ, ನಿಮ್ಮ ಕಾಲಿಗ ಬೇಕಾದ್ರು ಬಿಳ್ತೀನಿ" ಚಿನ್ನಿಬಾಯಿ ಕಾಲ ಹಿಡ್ಕಂಡ್ಲು. "ಅಲ್ಲಬೇ ನಿಮ್ಮ ದೇವರೆ ಉಳಿಸಾಕ ಆಗದಿರೋ ಹೊತ್ನಾಗಿ ನಾನು ಮನುಷ್ಯ ನನಿಂದೇನಾ ದೀತು. ಮಾಡೋ ಆಟು ಮಾಡೀನಿ ಈ ಗುಲ್ಕೋಸ್ ದೇಹಕ ಹೋದಿಂದ ತಾಪ ಕಮ್ಮಿ ಆಕೈತಿ. ಏನ ಕಾಯಿಲಿ ಅಂತೇಳಿ ಇಲ್ಲಿ ಹೇಳಾಕ ಆಗಾಲ್ಲ ದಾವಣಗೆರೆಯೊಳಗೆ ದೊಡ್ಡ ಆಸ್ಪತ್ರೆ ಐತೆ ಅಲ್ಲಿಗೆ ಸೇರಿಸಿನೋಡ್ರಿ" ಅವೇ ಮಾತ ಪುನರಾವರ್ತಿಸಿದರು.

ದಾವಣಗೇರಿ ದೊಡ್ಡ ಆಸ್ಪತ್ರಿ ಅಂದ್ರ ಚಿಮ್ನಿ ಕತಿ ಮುಗದಂತೆ ಬಿಡು ಅಂದ್ಕೊಂಡ್ರು ಮನಿಮಂದಿ. ಯಾಕಂದ್ರ, ಅವರ ತಾಂಡದಿಂದ ದಾವಣಗೇರಿ ದೊಡ್ಡ ಆಸ್ಪತ್ರಿಗ ಹೋಗಿದ್ದ ಸಾಮಮೇಸ್ತ್ರಿ ಬದುಕಿ ಬರಲಿಲ್ಲಾ. ಅವತಿಂದ ಮಂದಿ ಆಸ್ಪತ್ರಿ ಅಂದ್ರ ಸಾಯಾಕ ಹೋಗಬೇಕು ಅನ್ನೋ ನಿರ್ಧಾರಕ್ಕ ಬಂದಿದ್ರು. ಸಾಮ ಮೇಸ್ತ್ರಿ ಕಾಫಿ ತ್ವಾಟಕ ಬಹಳ ಹಿಂದಿದ ಆಳ ಕಟ್ತಿದ್ದ. ಅದೇನು ಅವನ ಗಮ್ಮತು ಅಂತೀನಿ. ಕೈಯಾಗಗೊಂದು ಆಟಮಿಟಿ ವಾಚು, ಮುಕ್ಕಾಗೊಂದು ಸೈಕಲು, ಬಗಲಾಗ ರೇಡಿವೆ, ಬಿಳಿ ಧೋತ್ರ, ಕೆಂಪು ಸೆಲ್ವೈವು ಮಂದಿ "ಬಂದ ನೋಡ್ರಲೇ ಮದಮಗ" ಅಂತೇಳಿ ಹಾಸೇವಾಡ್ತಿದ್ರು. ಅಂವ ಮಾತ್ರ ಕಮೀಷನ ರೊಕ್ಕದಾಗ ಸರಾಯಿ, ಹೆಂಡ, ಬಂಗಡೆ ಮೀನಿನ ಹಸಿಮುಳ್ಳ ಸಮೇತೆ ಅಗದು ನುಂಗಿ ಬಿಡ್ತಿದ್ನಂತೆ. ತಾರ್ಲೆ ಮೀನು, ಹೊಟ್ಟೆಪರ್ಕಿ ಯಾವ ಮೀನ ಆದ್ರುವೆ ಮುಳ್ಳತಗಿದೆ ರೊಟ್ಟಿ ಗುಕ್ಕಿನ್ಯಾಗ ಹಂಗೆ ಅಗದು ನುಂಗ ಬಿಡ್ತಿದ್ದ. ಅದೇನ ದುರಾದೃಷ್ಟನೋ ಯಾವುದೋ ಮೀನಿನ ಮುಳ್ಳು ದೊಡ್ಡಕರಳಿಗೊಳಗ ಸಿಗಾಕ್ಕೊಂದು ಕರಳನ್ನೆ ಕೊಳಿಯೋ

ಹಂಗ ಮಾಡಿಂದ. ಕಾಯಿಲೆ ಬಿದ್ದು ದಾವಣಗೇರಿ ದೊಡ್ಡಸ್ಪತ್ರಿ ಸೇರಿದ್ರೆ ಹೊಟ್ಟೆಕೊಯ್ದು ಮುಳ್ಳು ತಗದ್ರ ಕಳ್ಳಗಳೆಲ್ಲಾ ಕೊಳತು ಬಿಟ್ಟದ್ಕ ಬದಕಾಕ ಆಗದೆ ಸತ್ತಹ್ಯಾದ ಆದ್ರ ತಾಂಡದ ಮಂದಿ ತಲಿಯೊಳಗ ದೊಡ್ಡಾಸ್ಪತ್ರಿ ಅಂತಂದ್ರ ಕಸಾಯಿಕಾನಿ ಇದ್ದಂಗ ಜೀವ ತಗಿಯಾಕ ಒಯ್ಯತಾರ ಅಂದ್ಕೊಂಡಬಿಟ್ರು. ಅವರತಾವ ಬ್ಯಾರೆ ಉಪಾಯವೇ ಇರಲಿಲ್ಲಾ ಯಾರ್ಯಾರ್ದೋ ಕಾಲು ಕೈ ಹಿಡಿದು ದುಡ್ಡು ಹೊಂದಿಸಿ ದಾವಣರೇಗಿ ಧರ್ಮದಾಸ್ಪತ್ರಿಗ ಕರ್ಕಂಡಹ್ವಾದ್ರು ಚಿಮ್ನಿನ. ದೊಡ್ಡಚಿಗವ್ವ, ಚಿಗಪ್ಪ ಇಬ್ಬರೇ ಕೆಲ್ಸಬಗ್ಸಿಬಿಟ್ಟು ದೊಡ್ಡಾಸ್ಪತ್ರಿಯೊಳಗಿದ್ರು. ನಮ್ಮನಿ ತಾಂಡೆದುರಗ್ವನ ಗುಡಿ ಎದರಿಗಿದಿದ್ರಿಂದ, ಮಾಳಗಿಮನಿ ಖಾಲಿಬಿಟ್ರ ದೆವ್ವಗಳು ಸೇರ್ಕೊಂಡಾವಂತ, ನಾವೇ ಇಬ್ಬರು ಮೂವರು ಅಟವಾಳಗಿ ಯೊಳಗ ಮಲಗಾಕ ಹೊಕ್ಕಿದ್ವಿ. ಆವಾಗ ಬೇಸಿಗೆಯಾಗಿದ್ದರಿಂದ ದೊಡ್ಡ ಚಿಗವ್ವನ ಹುಡುಗಿಯರೆಲ್ಲಾ ಆಟವಾಳಗಿಯೊಳಗ ಸಾಲು ಮಲಗ್ತಿದ್ರು. ಆಸ್ಪತ್ರಿಯೊಳಗ ನಡಿಯೋ ಎಲ್ಲಾ ಸುದ್ದಿನೂ ಮಲಗೋ ಮುಂದ ಚಾಚುತಪ್ಪದೆ ನಮಗೆ ತಿಳಿಸುತಿದ್ರು. ನಮ್ಮವ ಅಪ್ಪಾ ಮಾತ್ರ ಒಂದೆರಡಸಲ ಹೋಗಿ ಹಣ್ಣು-ಬ್ರೆಡು ಕೊಟ್ಟು ಬಂದಿದ್ರು. "ನಮ್ಮ ಹಣೆಬರಾನೆ ಪಾಡಿಲ, ಹಾಳಮನಿ ಕಷ್ಟಗಳು ನಮಗೆ ಬರಬೇಕ" ನನ್ನ ಬಾಜು ಮಲಗಿದ್ದ ನನಗಿಂತ ದೊಡ್ಡವಳಾದ ಅಕ್ಕ ರಾಮಿ ತನ್ನ ಪಾಡಿಗೆ ಹೇಳಿದ್ಲು. "ಹಿಂಗ್ಯಾಕಂತಿ ಬಿಡಕ್ಕ ಮನುಷ್ಯ ಅಂದಮ್ಯಾಲ ಇದ್ದವೇ" ನನ್ನ ತಿಳವಳಿಕೆ ಮಟ್ಟದಾಗ ಸಮಾಧಾನಪಡಸಾಕ ನೋಡಿದೆ. "ಏನಬರ್ತಾವ ಬಿಡೋ ಚಿನ್ನಾ. ಒಂದಾದಮ್ಯಾಲ ಒಂದು. ಹ್ವಾದವರ್ಷ ಇದೇ ದಿನಗಳೊಳಗ ನಮ್ಮ ಕೊನಿ ತಂಗಿ ತೀರ್ಕಂಡ್ಲು. ಅದಾಗಿ ಎರಡ ಮೂರು ತಿಂಗಳೊಳಗೆ ನಮ್ಮ ಚಿಗವ್ವನ ಮಗಳು ಡೆಬರಿ ಸತ್ಲು ಹಂಗೆ ಸುಧಾರಿಸಿ ಕೊಳ್ತದಂಗೆ ದೆವ್ವದಂಗೆ ಗಂಡ್ಸರನ್ನೂ ಮೀರ್ಸಿ ಕೆಲ್ಸ ಮಾಡ್ತಿದ್ದ ನಮ್ಮಕ್ಕ ಚಿಮ್ನಿಗ ಹಿಂಗಾತು. ದೇವ್ರು ದಿಂಡ್ರು ಅನ್ನೋರ ಅದಾರೋ ಇಲ್ಲಪ್ಪ. ನನಗ್ಯಾಕೋ ಅನುಮಾನ. ಅಲ್ಲ ಅಲ್ಲೇ ನಿನ್ನ ತಲಿಮ್ಯಾಲ ಕುಂತಾಳಲ್ಲ ವಾಗಜಾಯಿ ಆಕಿಗಾದ್ರು ನಮ್ಮ ಕಷ್ಟ ತಿಳಿಬಾರ್ದ. ಪ್ರತಿ ಮಂಗಳವಾರ ಬಿಟ್ಟು ಬಿಡದಂಗೆ ಊದಿನಕಡ್ಡಿ ಹಚ್ಚಿ ಬೇಡ್ಕಂತಿವಲ್ಲ" ಅಕಿ ಆಳ್ತಿದ್ದು ನನಗೆ ಹೇಗೆ ಸಮಾಧಾನ ಹೇಳಬೇಕಂತ ತಿಳಿದೆ ಒಳಗೊಳಗೆ ಸಂಕಟದಿಂದ ಒದ್ದಾಡ್ತಿದ್ದೆ. ನನ್ನ ಪಕ್ಕದಾಗ ಮಲಗಿದ್ದ ನನ್ನ ತಮ್ಮ ಮತ್ತು ಅಣ್ಣನ ಮಗ ಸಣ್ಣಗೆ ಗೊರಕೆ ಹೊಡಿತಿದ್ರು. ಯಾಕೆ ಈ ಜೀವನ ಹಿಂಗೆ, ನಾನು ಒದ್ತಿರೊ ದೊಡ್ಡ ಊರೊಳಗೆ ಮಂದಿ ಸುಖವಾಗಿದ್ದಾರೆ. ಕಾರಗಳಲ್ಲಿ ಅಡಾಡ್ತಾರೆ, ಒಳ್ಳೊಳ್ಳೆ ಬಟ್ಟೆ ಬರೆತೊಟ್ಕಂತಾರೆ, ನಾನು,

ನನ್ನಂತೋರು, ನನ್ನಕ್ಕ ರಾಮಿಯಂತೋರಿಗೆ ಜೀವನ ಅಂದ್ರೆ ಏನೂಂತ ಗೊತ್ತೆ ಇಲ್ಲ. ಸಂತೋಷ ಅಂದ್ರೇನು, ಯಾವ ಅರ್ಥನೂ ತಿಳಿದಿಲ್ಲ ನಮಗ. ಅಪ್ಪ, ಅವ್ವ, ಅಣ್ಣಂದಿರೂ ಕೂಲಿ ಮಾಡಲೇಬೇಕು. ಕಾಫಿತ್ವಾಟಕೂ ಹೋದ್ರು ಇಷ್ಟೆಲ್ಲಾ ದುಡುದ್ರು ಹೊಟ್ಟೆ ತುಂಬ ಊಟ ಇಲ್ಲ ಮೈತುಂಬ ಬಟ್ಟೆ ಇಲ್ಲಾ ಯಾಕೆ? ಮಗ್ಗುಲಲ್ಲಿ ಮಲಗಿದ್ದ ಯಾವದೋ ಸಣ್ಣ ಹುಡುಗಿ ಎದ್ದು "ಯವ್ವ, ಎಲ್ಲದಿಬೇ, ಅಯ್ಯೋ ಸತ್ನೆ ಯವ್ವಾ ಎಲ್ಲದಿ" ಜೋರಾಗಿ ಅಳ್ತಿದ್ಲು. "ಯಾಕವ್ವ, ಏನಾತು, ಮಲಗು" ಸಮಾಧಾನ ಪಡಸಾಕ ನೋಡ್ದೆ. "ಇಲ್ಲ ನನಗೆ ನಮ್ಮವ್ವ ಬೇಕು" ರಂಪ ಹಿಡಿದ್ಲು. "ರಾಮಕ್ಕ, ಏಳಬೇ ನಿಮ್ಮ ಸಣ್ಣ ಹುಡುಗಿ ಎದ್ದು ಆಳಾಕ ಹತ್ಯಾಳನೋಡು" ಎಬ್ಬಿಸಿದೆ. "ಎಯ್, ಯಾವಳಲೇ ಲೌಡಿ, ಮಕ್ಕ ಮುಂಜಾನೆ ಹೊತ್ತಾರೆ ಎದ್ದು ಕೂಲಿಗ ಹೋಗಬೇಕು. ಮಲಗ್ತಿಯೋ ಹೇರ್ಲೊ ಬೆನ್ನಮ್ಯಾಲಸಾಕ ಗುದ್ದು" ಗದರಿಸಿದ್ಲು. ಅವಳೇನು ಮಾತ ಕೇಳದಂಗ ಕಾಣಲಿಲ್ಲಾ. ರಾಮಿನೆ ಎದ್ದು ಹ್ವಾದ್ಲು. ನಿದ್ದೆ ಯಾವಾಗ ಹತ್ತೋ ಗೊತ್ತಾಗ್ಲಿಲ್ಲಾ. ಮುಂಜಾನೆ ಬೆಳ್ಳಿ ಚುಕ್ಕಿ ಮೂಡಣದಾಗ ಕಾಣ್ತಿದಂಗೆ ಚೆಲ್ಲಾರ ಹೊಡಿಯಾಕ ಅಪ್ಪ ಎಬ್ಬಿಸುತ್ತಿದ್ದ.

ದೊಡ್ಡ ದೊಡ್ಡ ಡಾಕ್ಟರಗಳೆಲ್ಲಾ ನಾನ ನಮೂನಿ ಪರೀಕ್ಷೆ ಮಾಡಿದ್ರು ಕಾಯಿಲಿ ಕಂಡಹಿಡಿಯಾಕ ಆಗವಲ್ದು. ಜ್ವರ ಆಟು ಕಮ್ಮಿಯಾದಂಗಿತ್ತು. ಎಲ್ಲಾ ರೀತಿಯಿಂದ್ಲು ನೋಡಿದಮ್ಯಾಲ ಬೆಂಗಳೂರಿನಿಂದ ದೊಡ್ಡ ಡಾಕ್ಟರ ಸೋಮವಾರದ ದಿನ ಬರೋರಿದ್ರು ಅವರಿಗೂ ಒಂದ ಸಲತೂರ್ಸೆ ಬಿಡೋದಂತೆ ಧರ್ಮದಾಸ್ಪತ್ರಿ ಡಾಕ್ಟ್ರು ಮಂಗ್ಯಾನಾಯ್ಕನಿಗೆ ಹೇಳಿದ್ರು. ಅವರ ಏನಂತಾರ ನೋಡಿ ಮುಂದ ಆಸ್ಪತ್ರಿಯೊಳಗ ಇಟ್ಕಳೋದು ಇಲ್ಲಾಂತ ಹೇಳ್ತಿನಿ ಅಂತಾನು ಹೇಳಿದ್ರು. ಚಿನ್ನಿ ಸಣ್ಣವ್ವ ಕಣ್ಣಾಗ ನೂರಕನಸ ಹೊತ್ತುಕುಂತಿದ್ಲು. ಚಿಮ್ಮಿ ಮದ್ವಿಯಾಗಿ ಮನಿತುಂಬ ಗಂಡುಡ್ರನ ಹಡದು, ಕಿಚೋ ಅಂತಿದ್ಳು. ಅವಳನ್ನ ನೋಡಿದ ತಕ್ಷಣ ಅಜ್ಜ, ಅಜ್ಜಿ, ಅಜ್ಜಿ ಬಂದ್ಲು ಅಂತೇಳಿ ಚಿಮ್ಮಿ ಮಕ್ಕಳು ಚೀರಾಡ್ತಿದ್ಳು. ಆಸ್ಪತ್ರಿಯೊಳಗ ಏನಾಗ್ತಿದೆ ಅನ್ನೋ ಪರಿವೆ ಇಲ್ದ ಯಾವದೋ ಒಂದು ಅಮೂರ್ತ ಲೋಕಕ್ಕೆ ಹೋಗಿದ್ಲು. "ಅಜ್ಜಿ ಅಜ್ಜಿ ಬಾ ಇಲ್ಲಿ" ಒಂದು ಸುಂದರವಾದ ಗಂಡಮಗಿ ಕರಿತಾ ಐತೆ. "ಎಯ್ ಕಳ್ಳ, ಓಡಬ್ಯಾಡ ಬೀಳ್ತಿಯಾ, ಬಿದ್ರೆ ಗಾಯ ಆಗತೈತೆ, ಅದು ನೋವಾಗುತ್ತೆ ನಿಲ್ಲು ಮಗ, ನಿಲ್ಲು ಬೀಳ್ತಿಯಾ ಓಡಬ್ಯಾಡ, ಓಡಬ್ಯಾಡ." ಜೋರಾಗೆ ವದರಿದ್ಲು. "ಏಯ್ ಏನಾತ ನಿನಗೆ, ಹಗಲಗನಸಕಾಣಾಕ ಹತ್ತಿ ಏನು? ದೊಡ್ಡ ಡಾಕ್ಟ್ರು ಬರುಹೊತ್ತಾತು ಏಳ ಅತ್ಲಾಗೆ" ಮಂಗ್ಯಾ ಗದರಿಸಿದ. ಚಿನ್ನಿಗ ಸಮಾಧಾನ ಆಗಲಿಲ್ಲಾ.

"ಎಂಥಾ ಪಾಡಿತ್ತು ಆ ಮಗಿ" ಕನಲಿದ್ಲು. "ಯಾವ ಮಗಿ, ಎಲ್ಲೈತೆ?" ಮಂಗ್ಲ್ಯಾ ಎಚ್ಚರಿಸಿದ. "ಇಲ್ಲೆ ಇತ್ತಲ್ಲ ಈಗ ಎಲ್ಹೋತು" ಸುತ್ತ ಹುಡುಕಾಡಿದ್ಲು. "ನಿಮ್ಮಮ್ಮನ ಕೆಟ್ಟ ಜಾತಿನ ತಂದು, ನಿಂಗೆಲ್ಲೋ ಭ್ರಮೆ" ಗದರಿಸಿ ಸುಮ್ಮನಾಗಿಸಿದ. ಚಿನ್ನಿ ಮಾತ್ರ ಆ ಮಗುವಿನ ನೆನಪಿಂದ ಹೊರಗ ಬರೋದಕ್ಕೆ ಪರದಾಡ ತೊಡಗಿದಳು.

ಬಹಳ ಹೊತ್ತು ಪರೀಕ್ಷೆ ಮಾಡಿದ್ರು. ಡಾಕ್ಟರ ನೋಡಿದನೆಲ್ಲಾ ಒಮ್ಮೆ ನೋಡಿ ಒಂದು ತೀರ್ಮಾನಕ ಬಂದ್ರು. "ಈ ಕೇಸನ್ನ ಕರ್ಕಂಡ ಹೋಗಿ ಎಕ್ಸರೇ ಮಾಡ್ಸಿ, ರಕ್ತ ಪರೀಕ್ಷೆ ಮಾಡ್ಸಿ, ರಿಪೋರ್ಟ್ ತಗೊಂಡ ಬರ್ರಿ. ಮೂರ ಗಂಟೆಗೆ ಮತ್ತೊಮ್ಮೆ ನಾನು ವಾಪಸ್ಸು ಬರ್ತೀ ನಿ" ಅಂದ್ರು ಮದಲು ನೋಡ್ತಿದ್ದೋರು. ಚೀಟಿಕೊಟ್ಟು ಚಿಮ್ನಿನ ಗಾಲಿ ಇರೋ ಕುರ್ಚಿಮ್ಯಾಲ ಕುಂದ್ರಿಸಿ ಆಯಾನ ತಳ್ಕೊಂಡ ಹೋಗಾಕ ಹೇಳಿದ್ರು. ಅವಳ ಹಿಂದೆ ಅವರಿಬ್ಬರು ಹೊಂಟ್ರು. ಡಾಕ್ಟರ್ರು ಅರ್ಧಗಂಟಿ ನೋಡಿ ಮಂಗ್ಲ್ಯಾನ ಹೊರಗ ಕರ್ಕಂಡ ಹೋಗಿ "ನೋಡು ನಾಯ್ಕಪ್ಪ ನಿನ ಮಾಡೊ ಪ್ರಯತ್ನ ಮಾಡಿಯ" ಸುಮ್ಮನಾದ್ರು. ಮಂಗ್ಲ್ಯಾ ಅರ್ಥ ಆಗದೆ ಅವರ ಮಕನೋಡ್ತಾನಿಂತ. "ದೇವರು ಬಹಳ ಕೆಟ್ಟೋನು ನಿಮ್ಮಂತ ಬಡವರಿಗೆ ಈ ಕಾಯಿಲೆ ಬರಬಾರದಿತ್ತು" ಮಾತು ತುಂಡಾದವು. ಮಂಗ್ಲ್ಯಾಗ ತಲಿಬುಡಾನ ತಿಳಿದಂಗಾಗಿ ಒದ್ದಾದತೊಡಗಿದ. "ಅಕಿ ಹೃದಯದಾಗ ಒಂದ ಬೆರಳಿನಷ್ಟು ಅಗಲ ತೂತಾಗಿದೆ. ಬದಕಿದ್ರೆ ಬಹಳಂದ್ರ ಆರ ತಿಂಗಳು. ಅಪರೇಷನ್ ಬಹಳ ದುಬಾರಿ ನಿಮ್ಮ ಕೈಯಿಂದ ಆಗದ ಕೆಲ್ಸ. ಆರ ತಿಂಗಳು ಚೆನ್ನಾಗಿ ಜೋಪಾನ ಮಾಡ್ರಿ." ಡಾಕ್ಟ್ರರ್ ಹೊಂಟಹೋಗಿದ್ರು ಮಂಗ್ಲ್ಯಾಗ ಯಾವ ರೀತಿ ವರ್ತಿಸಬೇಕಂತ ತಿಳಿಯದೆ, ಅಲ್ಲೇ ನಿಂತಿದ್ದ ಯಾರೋ ಅವನ ಹೃದಯವನ್ನು ಕಿತ್ತು ಹೊರಗಹಾಕಿ ಕಾಲಿಂದ ತುಳಿಯುತ್ತಿರುವ ಅನುಭವವಾಗತೊಡಗಿತು. "ಕೈಗ ಬಂದ ಮಗಳು ಅಯ್ಯೋ ನಾ ಏನಮಾಡಲಿ, ಯಾರಿಗ ಹೇಳಲಿ, ವಿಧಿಯೇ ಎಂಥ ಕ್ರೂರಿ. ನಮ್ಮಂತ ಬಡವರಿಗೆ ಹುಡುಕಿ ಬಲಿತಗೊಳ್ತಿಯಲ್ಲಾ ಸಾವುಕಾರರನ್ನ ಮುಟ್ಟುಹೋಗು. ಷಕ್ಕಡದಿಂದ ಹೊಡಿತಾರ, ಹೊಡಿತಾರ. ಹೂಂ........ಹೂಂ.........." ರೋಧಿಸಿ ಅಳತೊಡಗಿದ. ಅವನನ್ನ ಸಮಾಧಾನ ಪಡಸೋದಕ್ಕೆ ಯಾರು ಇರಲಿಲ್ಲಾ. "ಆವಾಗ್ಲೆ ಸತ್ತಿದ್ರ ಏನೂ ಆಗ್ತಿರಲಿಲ್ಲಾ. ಎದಿಮಟ ಬೆಳೆದು ಗಂಡನ ಮನಿಗ ಹೋಗಿ ಸಂಸಾರ ಮಾಡಬೇಕಾದವಳು ಇದ್ದಕ್ಕಿದಂಗೆ ಸ್ಮಶಾನಕ ಸೇರ್ತ್ತಾಳಂದ್ರ" ಔಡಿಗಚ್ಚಿ ದುಃಖ ನುಂಗಾಕ ನೋಡ್ದ. "ಕಡೆಗಾಲ ಕೂಡಿ ಬಂದಿದ್ಕೆ ಇರಬಹುದು, ಈ ಪಾಟಿ ದುಡದ್ಲು. ಯಾರ ಬಾಯಿಂದಲೂ ಕೆಟ್ಟೋಳು ಅಂತ

ಒಂದು ಮಾತು ಹೇಳಿಸಿಕೊಂಡಳಲ್ಲಾ ಇಡಿ ತಾಂಡ ಸೈ ಅನ್ನೋ ಹಂಗ ಬದಕಿದ್ಲು ನನ್ನ ಮಗಳು" ಬಾಯಿಗ ಅರವಿ ತುರ್ಕಂಡು ಅಳತೊಡಗಿದ ಮಂದಿಗ ತನ್ನ ಧ್ವನಿ ಕೇಳಬಾರದು ಅಂತ. "ಹೊಂಟ್ನನಲಪ್ಪ ನನಮಗ ತಾಂಡದ ಮಂದಿ ಮಾತಾಡ್ಕೊಳ್ತಿದ್ರು. ಲೇ ಮಂಗ್ಲ್ಯಾ ಚಿಮ್ನಿ ಮಗಳಾಗೋಕ ಬದಲು ಮಗನಾಗಿ ಹುಟ್ಟಿದ್ರ ನಿನ್ನ ಮನಿ ಉದ್ಧಾರ ಆಗಿ ಹೊಕ್ಕಿತು ಕಣಲೇ" ಅಂತ. "ಅದರಿಗ ಆ ಮಗ ಬದುಕಿ ಉಳಿಯಂಗಿಲ್ಲಾಂತ ಹೆಂಗ ಹೇಳಲಪ್ಪ." ಏನೇನೂ ನೆನಪುಗಳು. ಡಾಕ್ಟರ್ ಕರದಿದಕ್ಕೆ ಚಿನ್ನಿ ಓಡಿಬಂದಿದ್ಲು. "ಏಯ್ ಡಾಕ್ಟ್ರು ಕರಿತವ್ರೇ" ಊಹಿಸಿಕೊಳ್ಳಾಕು ಆಗಲಿಲ್ಲಾ ಅಕೀಗ. ಹೆತ್ತ ಕರಳು ಅರಗಿಸಿಕೊಳ್ಳೋದು ಕಷ್ಟ. ಅವನು ಕಣ್ಣೊರಿಸಿಕೊಂಡು ಮುಂದಕ ಹೊಂಟಿದ್ದ. "ಏನಾತು, ಯಾಕ ಆಳ್ತೀರಿ," ಹಿಂದಿಂದ ಅರವಿ ಹಿಡದು ಜಗ್ಗಿದ್ಲು. "ಯಾಕಿಲ್ಲ ಬಿಡೆ ಸುಮ್ನೆ" ಮರೆ ಮಾಚೋದಕ್ಕೆ ನೋಡಿದ. "ನಾನ ಮದ್ವಿಯಾದಾಗಿಂದ ನೋಡಿನಿ ನಿಮ್ಮ ಯಾವತು ಅತ್ತೋರಲ್ಲ ಏನೋ ವಿಷಯ ಐತೆ. ಡಾಕ್ಟ್ರು ಏನಂದ್ರು ನಮ್ಮ ಮಗಳು" ಅರ್ಧ ಜೀವ ಹೋದಂಗೆ ಬಸವಳಿದಳು. "ಛೇ, ನಿನ್ನವ್ವನ ಅಂಥದ್ದೇನಿಲ್ಲ. ಗಾಬರಿಯಾಗ ಬ್ಯಾಡ ಸುಧಾರಿಸಿಕೋ" ಬೀಳ್ತಿದ್ದೊಳನ್ನ ಹಿಡಿದು ಮೇಲೆತ್ತಿದ. ಆದ್ರೂ ಅವಳಿಗೆ ಸಂಕಟ ಆಗಿತ್ತು. ಅತ್ತು ಅತ್ತು ಕಣ್ಣೀರು ಬತ್ತಿದ್ರುವೆ ಅವೆಲ್ಲಿದ್ವೋ, ಧಾರಾಕಾರವಾಗಿ ಹರಿಯತೊಡಗಿದವು. "ನಿನ್ನ ಬದಲು ನಂಗಾರ ಬರಬಾರದೇನೆ ನನ್ನವ್ವ ಈ ಸಂಸಾರದ ಜಂಜಾಟನ ಹರಕ್ಕೊಂಡು ಒಂದೇ ಸಲಕ್ಕೆ ಕಣ್ಣು ಮುಚ್ಚಿಬಿಡ್ತಿದ್ದೆ" ಚಿನ್ನಿ ಅರಚಾಡುತ್ತಿದ್ಲು. ಆದ್ರೆ ಅವಳಾಗಲಿ, ಅವಳ ಗಂಡ ಮಂಗ್ಲ್ಯಾ ಏನು ತಾನೇ ಮಾಡಂಗಿದ್ರು. ಎಲ್ಲಾ ಆ ವಿಧಿಯಾಟ.

ಅವಳ ರೋಧನದ ಅವಧಿ ಮುಗಿಯೋದ್ರಾಗ ಚಿಮ್ನಿಗ ಔಷಧಿ ಜ್ವರಕ್ಕೆ ಗುಳಿಗೆ ಎಲ್ಲಾನೂ ಕೊಟ್ಟು ಡಾಕ್ಟ್ರು ಹೋಗಿಯಾಗಿತ್ತು.

*****

ಈಗವಳು ನಡೆದಾಡುವ ಹೆಣವಾಗಿದ್ಲು. "ಯವ್ವ, ನಾಮತ್ತೆ ಮದ್ಲಿನಂಗ ಅಕ್ಕಿನಲ್ಲಬೇ, ಯವ್ವ ಅದ್ಯಾವದೋ ತಾಂಡದವರು ನನ್ನ ನೋಡಾಕ ಬಂದಿದ್ರಲ್ಲಾ ಮತ್ತೆ ಯಾವಾಗ ಬರ್ತಾರ?" ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳಿದ್ಲು. "ಹೂಂ! ಬರ್ತಾರವ. ಈಗ ದಿನ ಪಾಡಿಲ್ಲಂತ, ಸುನೆಮುಗದ ಮ್ಯಾಲ ಒಳ್ಳೆದಿನ ಬರ್ತಾವ ಆವಾಗ ಬರ್ತಾರ" ಚಿನ್ನಿಗ ದುಃಖ ತಡಿಯಾಕ ಆಗದೆ ಮುಖ ತಿರುಗಿಸಿಕೊಂಡು ಅಳ್ತಿದ್ಲು. ಚಿಮ್ನಿಗ ನಾಕ ಹೆಜ್ಜೆ ಕಿತ್ತ

ಹಾಕಿದ್ರು ಸುಸ್ತಾಗಿ ತಲೆ ತಿರುಗಬರ್ತಿತ್ತು. ಅಲ್ಲ, ಅಂತ ತೊಗರಿಖಾನದ ಗುಡ್ಡ ಹತ್ತಿ ಬೀಜಹರಿಯುವಾಗ ಏನೂ ಆಗಲಿಲ್ಲಾ ಈಗ ಅನುಮಾನ ಬಂದಿತ್ತು. ಆದ್ರ ಡಾಕ್ಟರ್ ಏನು ಹೇಳಿದ್ದಾರೆ, ಯಾಕಿಂಗೆ ಆಗುತ್ತೆ ನಾನು ಮತ್ತೆ ಮದಲಿನಂಗೆ ಅಕ್ಕೀನ ಅಂತ ಯಾರೊಬ್ಬರು ಹೇಳಿಲಿಲ್ಲಾ ಅವಳ ತಲಿಯೊಳಗೆ ಅನುವಮಾನದ ಕಿಡಿಯೊಂದು ಸುಳಿದಾಡುತ್ತಲೇ ಇತ್ತು. ಅವಳವ್ವ ಅಪ್ಪ ಯಾರೊಬ್ಬರು ಕಗ್ಗಂಟನ್ನ ಬಿಡಿಸಿ ಹೇಳೋದಕ್ಕೆ ತಯಾರಿರಲಿಲ್ಲಾ. ಮಾತಾಡಬೇಕು ಇಷ್ಟು ಮಾತಾಡಬೇಕು ಇಡಿರಾತ್ರಿ ಹಗಲು, ವಾರ ತಿಂಗಳು...... ಎದಿಯೊಳಗೆ ಮಡುಗಟ್ಟಿರೊ ಎಲ್ಲಾ ವಿಷಯಗಳನ್ನು ಮಾತಾಗಿ ಹೊರಗೆ ಹಾಕಬೇಕು. ಆದರೆ ನಾಕ ಮಾತಾಡಿದ್ರೆ ಸಹಿಸಿಕೊಳ್ಳಲಾಗದ ಸುಸ್ತು. "ಯವ್ವಾ, ಮೊದಲು ಯಾವತ್ತು ಆಗದ್ದ ಈಗ........." ಮಾತು ತುಂಡಾಗಿತ್ತು. "ಏನಿಲ್ಲ ಮಗ. ಆಸ್ಪತ್ರಿಯಿಂದ ಈಗ ಬಂದಿಯಲ್ಲ ಅದಕ್ಕೆ ಹಿಂಗಾಗುತೆ, ನಾಕ ದಿನ ಹೋದಿಂದ ಎಲ್ಲಾನು ಸರಿಯಾಗುತ್ತೆ. ಜಾಣಮರಿಯಲ್ಲ ನೀನು. ಹೆಚ್ಚು ಮಾತಾಡಬ್ಯಾಡ, ಸುಸ್ತಾಗುತೆ ಸುಮ್ನೆ ಮಕ್ಕ" ಸಮಾಧಾನ ಪಡಿಸಿದ್ಲು. ತಾನು ಮೊದಲಿನಂತಿಲ್ಲ. ಹಾಗೆ ಆಗುವುದು ಇಲ್ಲ ಅಂತ ಚಿಮ್ನಿಗೆ ಅನಿಸತೊಡಗಿತು. ಆದ್ರ ತನಗಿರೋ ಕಾಯಿಲೆನಾರು ಯಾವುದು? ಅದು ಯಾಕೆ ಬಂತು? ಯಾರಿಗು ಕೇಡು ಬಗದಿಲ್ಲ, ಯಾರಿಗೂ ಮೋಸಮಾಡಿಲ್ಲ ಆದ್ರೂ ತನಗೆ ವಾಸಿಯಾಗ ದಂತ ಕಾಯಿಲೆ ಯಾಕ ಬಂತು? ಅವಳೇ ಕೇಳ್ಕೊಳ್ತಿದ್ಲು. ಸುದ್ದಿ ಕಾಡಗಿಚ್ಚಿನಂಗೆ ಊರೆಲ್ಲಾ ಹರಡಿತ್ತು. ಚಿಗಪ್ಪನೆ ಬೀಗರಿಗೆ ಸಂಬಂಧ ಆಗಂಗಿಲ್ಲಾ ಬೇಕಾರ ಚಿಮ್ನಿಗಿಂತ ಚಿಕ್ಕವಳಾದ ರಾಮಿನ ಆರೇಳು ತಿಂಗಳು ಬಿಟ್ಟು ಮಾಡ್ಕಂಡ ಹೋಗ್ರಿ ಅಂದ ಬಂದಿದ್ದ. ದೊಡ್ಡವಳೆ ಹಿಂಗೆ ಸಣೋಳು ಹ್ಯಾಂಗೋ ಅವರ ಮನಿ ಸವಾಸನೆ ಬ್ಯಾಡಂತ ಅವರ ಬ್ಯಾರೆ ಕಡೀಗ ಹೆಣ್ಣ ನೋಡಿ ಮದ್ವಿ ಮಾಡ್ಕಂಡಿದ್ರು.

ಆಟವಾಳಗಿಯೊಳಗ ದೊಡ್ಡ ಚಿಗವ್ವನ ಮಗ್ಗಲೊಳಗೆ ಎಳೆ ಮಗುವಿನಂತೆ ಮಲಗಿ ಭವಿಷ್ಯದ ವಿಚಿತ್ರ ಕನಸುಗಳನ್ನ ಕಾಣ್ತಿದ್ದ ಚಿಮ್ನಿ ಅಕ್ಕನ್ನನ ನೋಡಿದಾಗ ನನ್ನೆದೆಯೊಳಗೆ ಚೂರಿ ಇರಿದಂಗಾಗುತಿತ್ತು. ನನಗೇನು ಸ್ವಂತ ಅಕ್ಕ ಅಲ್ಲದಿದ್ರು ಈ ಜಗತ್ತಿನ ಕೋಟಿ ಕೋಟಿ ಜನರೊಳಗೆ ಇವಳು ಒಬ್ಬಳು. ಸಾವನ್ನ ಕಂಕುಳಲ್ಲೇ ಇಟ್ಕೊಂಡು ಬದುಕಿರೋಳು. ಸಾವು ಯಾವ ಕ್ಷಣದಲ್ಲಾದರೂ ಬಂದು ಹದ್ದಿನ ಚೊಂಚಿನಂತ ತನ್ನ ಹರಿತವಾದ ಚೊಂಚಿನಿಂದ ಮುಗ್ದ ನನ್ನಕ್ಕನ ದೇಹದಿಂದ ಪ್ರಾಣವನ್ನ ತಕ್ಕೊಂದು ಹೋಗಬಹುದು. ಆದರೆ ಅದು ಯಾವಾಗಂತ ಗೊತ್ತೆ ಇಲ್ಲ. ನಾಳೆ ಯಾವತ್ತೊ ಒಂದು ದಿನ ತಾನು

ಸಾವಿನೊಂದಿಗೆ ಬದುಕಿದ್ದೇನೆ ಎಂಬ ಸತ್ಯ ಅರಿವಾದಾಗ ಪ್ರತಿಕ್ರಿಯೆ ಹೇಗಿರಬಹುದು. ಅಘಾತದಲ್ಲಿ ಆಗಲೇ ಪ್ರಾಣ ಬಿಡಬಹುದು ಅಥವಾ ನಿರ್ಲಿಪ್ತಳಾಗಿ ಬಿಡಬಹುದು. ಆ ಕ್ಷಣಗಳನ್ನ ಊಹಿಸಿದೆ. ಇವರ ಹತ್ತಿರ ಸಾಕಷ್ಟು ದುಡ್ಡಿದಿದ್ದರೆ ಇವಳನ್ನ ಬದುಕಿಸಿಕೊಳ್ಳ ಬಹುದಿತ್ತೇನೋ. ಬೆಂಗಳೂರು ಅನ್ನೋ ದೂರದ ಊರಿನಲ್ಲಿ ಚಿಮ್ಮಿಗ ಅಪರೇಷನ್ ಆಗಬಹುದಂತೆ. ದಿನಕಳಿಯುವುದೇ ದುಸ್ತರವಾಗಿರುವಾಗ ಲಕ್ಷಗಟ್ಟಲೇ ಹಣ ತರುವುದಾದರೂ ಎಲ್ಲಿಂದ. ಈತನ ಎಲ್ಲಾ ಆಸ್ತಿ ಮಾರಿದರೂ ಸಾವಿರಗಟ್ಟಲೆ ಹಣ ಸಿಗುವುದಿಲ್ಲ. ಸಿಕ್ಕರು ಮನೆತುಂಬ ತುಂಬಿಕೊಂಡಿರುವ ಹೆಣ್ಣು ಬೊಳಿಗಳ ಗತಿ ಏನು? ಸಾವೆ ಸೂಕ್ತವಾದ ಆಯ್ಕೆ. ಯಾಕೋ ಒಂದು ರೀತಿಯ ಕಳವಳ. ಇನ್ನೊಂದಷ್ಟು ದಿನಗಳಲ್ಲಿ ಈ ಜೀವ ನಮ್ಮನ್ನ ಶಾಶ್ವತವಾದ ಅಗಲಿ ಹೋಗುತ್ತೆ. ಎಷ್ಟೋ ಪಾಪಿಗಳಲ್ಲಿ ಇದೂ ಒಂದು. ನನ್ನ ನಾನು ಸಮಾಜಿಯಿಸಿಕೊಂಡು ಕೆರೆ ಏರಿಯನ್ನೇರಿ ನಡಿತಾಹೋದೆ. ಈ ಬಡತನಕ್ಕೆ ಪರಿಹಾರವೇ ಇಲ್ವೆ? ಇದ್ರಲ್ಲಿ ಯಾರದು ತಪ್ಪು. ಚಟಕ್ಕೆ ಇಪ್ಪತ್ತೈದು ಮಕ್ಕಳನ್ನ ಮಾಡಿಕೊಂಡ ಚಿಗಪ್ಪನದೋ, ಇಲ್ಲಾ ಹೆಣ್ಣಾಗಿ ಈ ಮನೆಯೊಳಗೆ ಹುಟ್ಟಿದ ಚಿಮ್ಮಿದು? ಉತ್ತರ ಸಿಗಲಿಲ್ಲ. ಹುಣಸಿಮರದ ಬ್ರಹ್ಮರಕ್ಕಸರನ್ನ ನೆನಪಿಸಿಕೊಂಡು ಹೊತ್ತಾರೆ ಮನೆ ಸೇರಲು ವಾಪಾಸಾದೆ. ಗಾರಿಕಟ್ಟೆ ಮೇಲೆ ಮೇಲಿನೋಣಿಯ ಸಾಕಿಗೆ ಗಂಡಿನ ಕಡೆಯವರು ಎಲಿ ಶಾಸ್ತ್ರಕ್ಕೆ ಬಂದಿದ್ರು, ಅವರನ್ನ ನೋಡ್ತಾ ಕುಂತೆ, ಸಮಯ ಹೋಗಿದ್ದೆ ತಿಳಿಲಿಲ್ಲಾ. "ಲೋ ಚಿನ್ನಾ ನೀ ಇಲ್ಲಿ ಕುಂತಿ, ಅವ್ವ ಮುದ್ದಿ ಉಣ್ಣಾಕ ಕರಿಯಾಕ ಹತ್ಯಾಳ" ತಮ್ಮ ನೆಪಮಾಡಿದ್ಕೆ ಎದ್ದು ಮನಿ ಕಡೀಗ ಹೊರಟೆ.

"ಯಾರದ ಇಳೆ ಶಾಸ್ತ್ರ ಮಾಡಿದ್ರು" ಚಿಮ್ಮಿ ಕೇಳಿದ್ಲು. "ಯಾರದು ಇಲ್ಲ ಬಿಡಬೇ, ಎಲ್ಲಿ ಹಚ್ಚಿ ಮಲಗು" ಜೋರಾಗೆ ಹೇಳಿದೆ. "ಮದ್ಲು, ಎಲ್ಲಾನು ಚಾಚು ತಪ್ಪದೇ ನನ್ನೆದುರಿಗೆ ಹೇಳ್ತಿದ್ದೆ ಈಗ ನಾನು ಹಿಂಗಾದೆ ಅಂತ ನೀನು ಹಿಂಗ ಮಾಡ್ತಿ ಎನ್ನಾ ಚಿನ್ನಪ್ಪ ಈ ಅಕ್ಕ ನಿನಗೂ ಬ್ಯಾಡ ಆದ್ಲು ಅನ್ನು" ಅವಳು ಮಾತಾಡ್ತಿದ್ಲು. ನನ್ನ ತಲಿಸಿಡದು ಚೂರಾದ ಅನುಭವ. ಮಾತು ಹೊರಡಲಿಲ್ಲಾ ಸ್ವಲ್ಪ ಹೊತ್ತು ಮೌನ ಆವರಿಸಿತ್ತು. "ಅದೇ ಮ್ಯಾಗಿನ ಓಣಿ ಸಾಕಿದು" ಯಾರೋ ಹೋಗ್ಲಿ ಅತ್ಲಾಗಾಂತ ಹೇಳಿದ್ರು. "ಒಳ್ಳೆದಾತ ಬಿಡು, ನನ್ನದಾಗಂಗಿಲ್ಲಾ, ಒಳ್ಳೆ ಹುಡುಗಿ. ಯವ್ವಬೇ, ಅಕಿ ನಂಗಿಂತ ಮೂರನಾಕ ವರ್ಷ ಸಣ್ಣಾಕಿ ಅಲ್ವಾ. ಅಕೀದ ಮದ್ವಿ ಅಕ್ಕೈತಿ ಬಿಡು.....ಆದ್ರ....." ಮಾತಾಡಲಿಲ್ಲಾ. ನನಗೆ ಪೇಚಿಗಿಟ್ಟಕೊಂತು, ಯಾಕಾದ್ರು ನಾನು ಈ ವಿಷಯ ಪ್ರಸ್ತಾಪ ಮಾಡ್ದೆ ಅಂತ.

"ಹಿಂಗ್ಯಾಕಂತಿ ಮಗಳೆ ನೀನು ಗಡಾನೆ ಪಾಡಾಗು ನಿಂದು ಆಗುತ್ತೆ. ನನಮಗಳು ರಾಜಕುಮಾರಿಯಂಗವಳೆ, ಏನು ಕಿವುಡಿನ, ಮೂಗಿನ ಇಲ್ಲ ಕುಂಟಿ, ಯಾವನ ಬೇಕಾರುವೆ ಕಣ್ಣುಚ್ಚಿ ಮದ್ವಿ ಆಗ್ತಾನ. ಎಂಥೆಂಥ ನೀತಿಗೆಟ್ಟವೆ ಮದ್ವಿ ಆಗ್ತವೆ" ಧೈರ್ಯ ತುಂಬಿದಳು. "ಯಾಕ ಸುಮ್ನೆ, ಈಡೇರದ ಕನಸುಗಳನ್ನ ನನ್ನ ತಲಿಯೊಳಗೆ ತುಂಬತಿ. ಆಗೋದನ್ನ ಮಾತಾಡು, ಅದು ಈ ಜನ್ಮದಾಗ ಸಾಧ್ಯವಿಲ್ಲದ ಮಾತು. ಹೆಚ್ಚಂದ್ರ ಆರ ತಿಂಗಳು ಬದುಕೇನು. ಅಷ್ಟರೊಳಗೆ ಮದ್ವೆ, ಮಕ್ಕಳು, ಸಂಸಾರ, ಊಹೂಂ!" ಅವಳು ನೇರವಾಗೆ ಹೇಳಿದ್ಲು. "ಥೂ, ಬಿಡ್ತು ಅನ್ನು ಯಾಕಿಂಗೆ ಆಪದ ಮಾತಾಡ್ತಿಯ. ಯಾರಂದ್ರು ಇನ್ನೂ ಆರೇ ತಿಂಗಳು ಬದಕ್ತಿಯಂತ, ಆ ದೇವರು ಮನಸ್ಸು ಮಾಡಿದ್ರೆ ನೂರು ವರ್ಷದ ಮೇಲೂ ಬದುಕಬಹುದು. ಮಕ್ಕಳಾಗಬೇಕು, ಮೊಮ್ಮಕ್ಕಳು, ಮರಿಮಕ್ಕಳು ಎಲ್ಲಾನು ನೋಡಬೇಕು" ಆಸೆ ಚಿಗುರಿಸುವ ಯತ್ನ ಮಾಡಿದ್ಲು. "ಯವ್ವ ತಲಿಮ್ಯಾಲ ಕೈ ಇಟ್ಟುಹೇಳು ನಾನು ನಿಜವಾಗ್ಲು ಮದ್ವಿ ಮಾಡ್ಕಬಹುದ? ಬದಕಿತ್ನಿನಾ.....ಯಾಕೆ ನಿಜಾನ ಮುಚ್ಚಿಡೊ ಪ್ರಯತ್ನ ಮಾಡ್ತಿಯ. ನಾನೇ ಸತ್ಯನ ಜೀರ್ಣಿಸಿಕೊಂಡಿನಿ. ನೀನು, ಅಪ್ಪ ತಂಗಿಯರೆಲ್ಲಾ ಸತ್ಯನ ಅರಗಿಸಿಕೊಳ್ಳೊ ಪ್ರಯತ್ನ ಮಾಡ್ರಿ" ಹೊಡದಂಗೆ ಮಾತಾಡಿದ್ಲು ಚಿಮ್ನಿ ಚಿನ್ನಿಬಾಯಿಗೆ ಮಾತೆ ಹೊರಡದಾದವು. ನೀರು ತುಂಬಿದ ಕಣ್ಣುಗಳನ್ನ ಒರಿಸಿಕೊಳ್ಳಾಕು ಆಗದೆ ತನ್ನೆರಡು ಕೈಗಳನ್ನ ಚಿಮ್ನಿ ತಲೆಮೇಲೆ ಇಟ್ಟು ಮೆತ್ತಗೆ ಕೂದಲು ನೆವರಿಸುತ್ತ. "ತಾಯಿ ನೀನೆಂಥ ದೊಡ್ಡೊಳವ್ವ. ನಮ್ಮ ಕೈಯಿಂದ ಸಹಿಸಿಕೊಳ್ಳುಕ ಆಗದ್ದನ್ನ ನೀನು ಸಹಿಸಿಕೊಂಡಿಯ. ಮುಂದ ಹುಟ್ಟು ಏನಾರ ಇದ್ರ ಏಳೇಳು ಜನ್ಮದೊಳಗು ನನ್ನ ಮಗಳಾಗೆ ಹುಟ್ಟು" ಕಂಠ ತುಂಬಿ ಬಂದಿತ್ತು. "ನನ್ನ ಆಶೆನೂ, ಯಾವಾಗಲು ನಿನ್ನ ಮಡಿಲೊಳಗೆ ಕೂಸಾಗಿ ಆಡಬೇಕು, ನಿನ್ನ ಕಷ್ಟದಾಗ ಪಾಲ ಹಂಚ್ಕೊಂಡು ನಿನ್ನ ಹಿಂದೆ ಮುಂದೆ ಅಡ್ಡಾಡಬೇಕು ಅಂದ್ರೆ ಹಾಳಮನಿದೇವರು ಈ ಜನ್ಮದಾಗ ಇಷ್ಟೇ ಕೊಟ್ಟ ಮತ್ತ ಹುಟ್ತೇನಿ, ನಿನ್ನ ಮಗಳಾಗೆ." ಆಕಿ ಮಾತ ಕೇಳಿ ತಡಿಯಕ ಆಗದೆ ಹದಿಮೂರು ಜನ ತಂಗಿಯರು ಅಳತೊಡಗಿದರು. ರಾಮಿ ಅವಳನ್ನ ಬಿಗಿಯಾಗಿ ತಬ್ಬಿಕೊಂಡು "ನಿನ್ನ ತಂಗಿಯಾಗಿ ನಾ ಹುಟ್ಟಿದ್ದೆ ಪುಣ್ಯಕಣೆ, ಇನ್ನ ಈ ಜೀವ ಏನಾದ್ರು ಆಗ್ಲಿ" ದುಃಖಾನ ತಡಿಯಾಕೆ ಆಗದೆ ದುಪ್ಪಿಯನ್ನ ಬಾಯೊಳಗೆ ತುರಕ್ಕೊಂಡು "ಊಹೂಂ..... ಊಂ....." ಅಳತೊಡಗಿದಳು.

ಬೆಳಕಾದಾಗ ಮಾಮೂಲು ಜೀವನ. ದೊಡ್ಡ ಹುಡುಗಿಯರೆಲ್ಲಾ ಹೊತ್ತಾರೆ ಕೂಲಿಗೆ ಹೋದ್ರು. ಸಣ್ಣೋರು ದನ ಮೇಯಿಸೋದಕ್ಕೆ, ಕುರಿ, ಆಡು, ಹುಲ್ಲು, ಹೊಲದ

ಕಳೆ ಮನಿಪೂರ ಖಾಲಿ. ನೆಲಕ್ಕೆ ಭಾರವಾಗಿ, ಸೂರನ್ನೆ ದಿಟ್ಟಿಸುತ್ತ ಮಲಗಿದ್ದ ಚಿಮ್ನಿಗೆ ನೀರವತೆ ಕಿತ್ತು ತಿನ್ನತೊಡಗಿತು. ಯಾರಿಗೂ ಹೇಳದೆ ಎಲ್ಲಿಗಾದರೂ ಓಡಿಹೋಗಬೇಕು ಅನಿಸಿತು. ಎಲ್ಲರಿಗೂ ಭಾರ ನಾನೀಗ, ಎಲ್ಲಾದ್ರು ಭಿಕ್ಷೆ ಬೇಡಿ ತಿಂದು ಬದುಕಿರೊ ಆಟು ದಿನ ಬದುಕಿ ಕಣ್ಣು ಮುಚ್ಕೊಂಡ್ರ ಮುಗೀತು ಕತೆ. ನಿರ್ಧಾರ ಮಾಡಕ ಆಗಲಿಲ್ಲಾ. ಅದೇ ತೊಳಲಾಟ, ಕನಸು, ಕನವರಿಕೆ, ಎದ್ದು ಕುಂತ್ಲು. ಮೂಲೆಯಲ್ಲಿ ನೀಟಾಗಿ ಜೋಡಿಸಿ ಇಟ್ಟಿದ ಮಡಕೆಗಳು, ಒಂದರ ಮೇಲೆ ಒಂದು ಒಂದರಲ್ಲಿ ನವಣೆ, ಸಜ್ಜೆ, ರಾಗಿ, ಒಂದೊಂದೆ ಇಳುಹಿ ನೋಡಿದಳು. ಹಳೇ ಪೆಟಾರಿಯನ್ನ ತಗದು ಕಾಪಿ ಸೀಮಿಗೆ ಹೋದಾಗ ತಾನು ಕೊಂಡಿದ್ದ ಲಂಗ ದಾವಣಿ ತಗದು ಉಟ್ಕಬೇಕು ಅನಿಸಿ ಉಟ್ಕಂಡ್ಲು. "ಈ ದೀಪಾವಳಿಗೆ ಅವನ ಗಮನ ಸೆಳಿಯೋ ಪ್ರಯತ್ನ ಮಾಡಬೇಕು, ಅವನೆ ಅವರಪ್ಪನ ಹತ್ರ ನಾನು ಮದ್ವಿಯಾದ್ರೆ ಚಿಮ್ನಿನ ಮಾತ್ರ ಹಂಗ ಮಾಡ್ತಿನಂತ" ಮನಸ್ಸಿನೊಳಗೆ ಅಂದ್ಕೊಂಡು, ಕೈಕಾಸನೆಲ್ಲಾ ಸೇರ್ಸಿ, ತಂಗಿಯರಿಗೆ ಹೇಳದಂಗೆ ಖರೀದಿಸಿದ್ದು. ಕನ್ನಡಿಯನ್ನ ತಂದು, ಹೇಗೆ ಕಾಣ್ತಿನಂತ ನೋಡಿದಳು. ನಿರ್ಲಿಪ್ತಳಾಗಿ ಕನ್ನಡಿಯನ್ನ ಆಚೆ ಇಟ್ಟು ಬಟ್ಟೆ ತೆಗೆದು ಮಡಿಚಿ ಜೋಪಾನದಿಂದ ಪೆಟಾರಿಯೊಳಗೆ ಇಟ್ಟು ಕದ ಮುಚ್ಚಿ ಹೊರಗೆ ಬಂದು ಬಿಸಲು ಕಾಸ್ತಾ ಕುಂತ್ಲು.

ಪಕ್ಕದ ಗುಡಿಸಲೊಳಗೆ ಹೆಣ್ಣು ಕೂಸನ್ನ ಹೆತ್ತಿದ್ದ ಅವಳ ಚಿಗವ್ವ ಇನ್ನೂ ಎರಡ ತಿಂಗಳ ಬಾಣಂತಿ. ಕೂಸು ಅಳ್ತಿರೋದನ್ನ ಬಿಟ್ಟು ಒಲಿ ಮೇಲೆ ಮುದ್ದಿ ಕುಡಿಸೋಕ ತೊಡಗಿದ್ಲು. "ಯವ್ವ, ಬೇ ಸಣವ್ವ ಕೂಸು ಅಳ್ತಿರೋದು ಕೇಳವಲ್ದ ಮದ್ಲು ಹಾಲು ಕೊಡು ತಂಗಿಗ." ಒಳಗೆ ಹೋದ್ಲು. "ಎತ್ಕ ಮಗಳೆ ಬಂದೆ" ಅಂದ್ಲು. "ಇಲ್ಲ ನೀನ ಬಾ ನಾನು ಮುದ್ದಿ ಕೊಡ್ಸಿಕೊಡ್ತಿ ನಿನಗ" ಅಂದು ಒಳಗ ಹೋದ್ಲು. ಎರಡಸುತ್ತು ಗರಗರ ತಿರುಗಿಸಿದ್ಲು, ಯಾಕೋ ಕೈಸೋತಂಗಾದ್ಬು, "ಅಯ್" ಅಂತ ಗಟ್ಟಿ ಮನಸು ಮಾಡಿ ಎರಡು ಕಾಲಿಂದ ಸ್ಯಾರಿ ಹಿಡಿದು ಗರಗರ ತಿರುಗಿಸಿ, ಕೈ ಬಟ್ಟಲಿಗೆ ತೊಡ್ಕಂಡು ಮುದಿಕಟ್ಟಿ ಮಣ್ಣಿನ ತಾಟಿಗಿಟ್ಟು, ಸಾಂಬರು ಹಾಕ್ಕೊಂಡು ತಗೊಂಡು ಮೇಲೆದ್ದಳು. ಕಣ್ಣು ಮಂಜಾದವು. ಬಿದ್ದ ಬಿಟ್ಟೆನೇನೋ ಅನ್ನೋ ಹೆದರಿಕೆಯಿಂದ ಗ್ವಾಡಿಹಿಡ್ಕಂದು ಸುಧಾರಿಸಿಕೊಂಡವಳೆ ಚಿಗವ್ವಗೆ ಮುದ್ದಿಕೊಟ್ಟು, ತಡಬಿಡಿಸುತ್ತಲೇ ಹೊರ ಬಂದು ಅಂಗಾತ ಬಿದ್ಲು. ಯಾಕೋ ಮನಸ್ಸು ವಿಚಲಿತಗೊಂಡಿತ್ತು." ಎಂಥ ಜೀವನವಿದು. ಬದುಕಿರೊವರೆಗೆ ಹೀಗೆ ಅಸಾಹಕಳಾಗಿ ಬದುಕೋದಕ್ಕಿಂತ ಒಂದೇ ಸಲಕ್ಕೆ ಸತ್ರೆ. ಹೌದು

ಸಾಯೋದಾದ್ರು ಹೇಗೆ? ನೇಣುಹಾಕ್ಕೊಂಡು, ಇಲ್ಲಾಂದ್ರೆ ಬಾವಿಗ ಹಾರಿ ಪ್ರಾಣ ಕಳ್ಕೋಬೇಕು". ತೀವ್ರವಾದ ಒತ್ತಡ, ಖಿನ್ನಳಾದ್ಲು. "ಯಾಕಪ್ಪ ಇಲ್ಲಿ ಮಲಗಿಯೆ" ಅವಳಪ್ಪ ಅವಳ ಹತ್ರ ಕುಂತ. "ಏನೂ ಇಲ್ಲಪ್ಪ, ಸುಮ್ನೆ" ಮಾತಾಡದಾದಳು. "ನೋಡ ಮಗಳೆ, ಮುಂದಿನವಾರ ಮತ್ತ ಡಾಕ್ಟರ ಹತ್ರಹೋಗಿ ಬರೋನ, ನಿನ್ನ ಗುಳಿಗೀನು ಖಾಲಿ ಆಗ್ಯಾವ. ನೀ ಏನು ಹೆದರಬ್ಯಾಡ, ನಾವದೀವಲ್ಲ" ಏನೇನೋ ಹೇಳಾಕಹೋದ. ಆತನ ಯಾವ ಮಾತಗಳು ಅವಳ ಮನದಾಳಕ ಇಳಿಯದಾದವು.

ತಾಂಡದ ಎಲ್ಲಾ ಸಣ್ಣೋರು ದೊಡ್ಡರಿಗೂ ಸತ್ಯ ಗೊತ್ತಿತ್ತು. ಯಾರು ಚಿಮ್ನಿ ಕಂಡಾಗ ಬೇರೇನು ಮಾತಾಡದೆ ಅವಳಿಗೆ ಸಂತೋಷ ಆಗೋ ಅಂತ ಮಾತುಗಳನ್ನೇ ಆಡ್ತಿದ್ರು. ಪೀರಜ್ಜ, ರೂಪ್ಲಿಡೊಕ್ರಿ, ಸಾಂಬಳು, ಸೇವು, ಸಸಿಯೊಂದು ಬೂದಿರೋಗಕ್ಕೆ ತುತ್ತಾಗಿ ಹೆಮ್ಮರವಾಗದೆ ಸಾಯ್ತಿರೋದನ್ನ ನೋಡಿ "ಏನ್ ಕಾಯಿಲೆಗಳೋ ಏನೋ ಅದ್ಯಾವ ಸೀಮೆರೋಗ ಅಂತೀನಿ. ಹಿಂದೆಂದು ಕೇಳಿರಾಕಿಲ್ಲ ಬಿಡು. ನಮ್ಮ ಕಾಲಕ, ದೊಡ್ಡ ರೋಗ ಬಂತಂದ್ರ ಊರಿಗ ಊರೆ ಸಪಾಟಕಿದ್ದು. ಹೆಣ ಊಳಾಕ ಮಂದಿ ಇಲ್ದೆ ಊರಿಗೆ ಬೆಂಕಿ ಹಚ್ಚಿ ಇದ್ದ ಬಿದ್ದೋರು ಜಾಗ ಬಿಟ್ಟು ದೂರ ಹೋಗಿ ಮನಿಕಟ್ಕೋಳ್ತಿದ್ರು. ಅದಬಿಟ್ರೆ ದಡಾರದಮ್ಮ, ಗಾಳಿದುರ್ಗಮ್ಮ, ಮೈಲಮ್ಮ, ಏಳು ಅಕ್ಕತಂಗಿಯರು ಅವಕ್ಕ ಆಟು ಬೇವಿನ ತಪ್ಪಲಿನ ಮಡಿಕಟ್ಟಿ ವಾರಕ್ಕೊಮ್ಮೆ ಸಿಹಿ ಎಡಿ ಮಾಡಿದ್ರ ಜೀವಕ್ಕ ಅಪಾಯ ಮಾಡ್ದಂಗೆ ಹೊಂಟ ಹೊಕಿದ್ದು". ಪೀರಜ್ಜ ಸಣ್ಣದೊಂದು ಭಾಷಣ ಮಾಡಿದ್ದ. "ಇದೇ ಮದ್ಲೆಯಪ್ಪ, ಇಂಥ ನಮೂನಿ ರೋಗದ ಹೆಸರ ಕೇಳಿದು". ಚುಕ್ಲಿ ತೊಂಡ್ಲ ಅಲ್ಲಾಡಿಸುತ ಹೇಳಿದ್ಲು. "ಆದ್ರ ಈ ಕೂಸಿನ ದೈವನೋಡೆ ದೊಡ್ಡವ್ವ ಈಟ ಸಣ್ಣ ವಯಸ್ಸಿನೊಳಗೆ, ಸಾಯ್ತಿನಿ ಅಂತೇಳಿ ಗೊತ್ತಿದ್ದು ಎಲ್ಲಾನು ಸಹಿಸಿಕೊಂಡು ಬದುಕಿರೋದು. ಭಾಳ ಗಟ್ಟಿ ಹುಡುಗಿ ಬಿಡು, ನಮ್ಮಂಥೋರಿಗೇನಾದ್ರು ಹಿಂಗಾದ್ರ ಅಲ್ಲೇ ಮೂರ್ಛೆ ಬಂದು ಜೀವನೆ ಕಳ್ಕಂಡ ಬಿಡ್ತಿದ್ವೆನೋ" ಸೀರಿಬಾಯಿ ಹೇಳಿದ್ಲು. "ಹೂಂ, ಬದುಕಿನ ಆಟಾನೇ ಅಂಥದ್ದು ಯಾರ ಏಟು ದಿನ ಪಡ್ಕಂಡ ಬಂದಿರ್ತಾರೋ ಆಟ ದಿನಗಳ ತೀರಿಸಿ ಮುಂದ ಬರೋರಿಗ ಜಾಗ ಬಿಟ್ಟು ಹೊರಡಬೇಕು. ಇಲ್ಲೆ ಇರ್ತಿನಂತ ಯಾವ ನಮ್ಮಪ್ಪ ಶೂರ ಮಳಿ ಬಡ್ಕಂಡ ಬಂದಾನೇಳು ನೋಡಾನು" ಸಾಂಬಳು ತತ್ವವನ್ನ ತಿಳಿಸಿಹೇಳಾಕ ನೋಡದ. ದೂರದಾಗ ಇವರ ಆಡುತ್ತಿರಬಹುದಾದ ಮಾತಿನ ದಾಟಿಯನ್ನ ಗಮನಿಸುತ್ತಲೆ ಕಲ್ಲಿನ ಜೊತೆಗೆ ಆಟ ಆಡ್ತಿದ್ದ ಚಿಮ್ನಿ ಅವರ ಹಾವ ಭಾವದಿಂದಲೇ ಅವರು ತನ್ನ ಕುರಿತು ಮಾತಾಡ್ತವ್ರೆ

ಅಂದುಕೊಂಡಳು. "ನಾನು ಅವರ ಸಾಲಿಗ ಸೇರಿದೊಳತಾನೆ. ಅವರು ಎಲ್ಲಾ ಆಟಗಳನ್ನು ಮುಗಿಸಿ ಸಾವೆಂಬ ಸರದಾರನ ದಾರಿಕಾಯ್ತಿರ್ರೋರು. ಒಬ್ಬಳು ಮಕ್ಕಳು, ಮೊಮ್ಮಕ್ಕಳು ಕಂಡು ಅವರೆಲ್ಲರಿಗೂ ಹೊರೆಯಾದಂತೆ ಬದುಕಿರ್ರೋಳು. ಆ ಬಾಯಿಯೊಳಗೆ ಹಲ್ಲೆ ಇಲ್ಲದ ಮುದಿಯ ಮುದ್ದಿಕೊಟ್ರೇ, ಲೇ ನಿಮ್ಮವ್ವನ, ಸೂಳಿಮಕ್ಕಳ್ರ, ಮುದ್ದಿತಿನ್ನಾಕ ನಾ ಏನು ಆಟು ಅಸನೇರಿ ಅಂದ್ಕಂಡಿರೇನ್ರಲೇ, ರೊಟ್ಟಿಕೊಡ್ರೊ ಅಂತೇಳಿ ಮುದ್ದಿನೆತ್ತಿ ನಾಯಿಗ ಬಿಸಾಕಿ ಕಡಕ ರೊಟ್ಟಿಯನ್ನ ಒಸಡಲೇ ಅಗದು ನುಂಗೋನು. ಅವರಿಗೆ ಸಾವು ಬರೋದು ಅನಿಶ್ಚಿತ. ಆದ್ರ ನನಗ, ಇನ್ನೂ ಆರೇ ತಿಂಗಳು. ಮದುವೆ, ಧಾರೆ, ಮೊದಲ ರಾತ್ರಿ, ನನ್ನ ತಾಯಿತನದ ಕನಸು, ಮಂದಿ ಹೇಳ್ತಿದ್ರು ಹೆಣ್ಣಿನ ಜೀವನದ ಸಾರ್ಥಕತೆ ಅವಳ ತಾಯ್ತನದಲ್ಲದೆಯಂತ. ನನಗ್ಯಾವ ತಾಯ್ತಿನ? ನಂಗೂ ಎರಡ ವರ್ಷದ ಹಿಂದೆ ಮದುವೇ ಮಾಡಿದ್ರೆ, ಫಲವತ್ತಾದ ನನ್ನ ಗರ್ಭದೊಳಗೆ ಅಪರೂಪದ ಕೂಸು ಹುಟ್ಟೇ ಹುಟ್ತಿತ್ತು ಅಥವಾ ಒಮ್ಮೆಯಾದರು ಈ ಹಾಳ ಸಮಾಜದ ಕಟ್ಟಳೆಗಳನ್ನ ಮುರಿದು ಪುರುಷನ ಜೊತೆಗೆ ಸೇರಿ ಶಾಶ್ವತವಾಗಿ ಕೃಷಗೊಂಡು ಸಾಯುತ್ತಿರುವ ನನ್ನ ಆಸೆಯ ಕುದುರೆ ಸವಾರಿ ಮಾಡುವವನ ಕೈಗೆ ಸಿಕ್ಕು ಹಣ್ಣುಗಾಯಿ, ನೀರು ಗಾಯಿಯಾಗಿ ನನ್ನಾಳಿಕ್ಕಿಳಿದು ಬಯಕೆಯ ಜ್ವಾಲೆಯಾದರು ಆರುತ್ತಿತ್ತು. ಈಗ ನಾನೊಂದು ಉಸಿರಾಡ್ತಿರೊ ನಿರ್ಜೀವ ವಸ್ತು, ಯಾವ ಗಂಡಿಗೂ ಬೇಡವಾದ ಹೆಣ್ಣು" ಯೋಚನೆಗಳು ಅವಳ ತಲೆಯೊಳಗಿನ ಮೆದುಳನೆಲ್ಲಾ ಆವರಿಸಿ ತಲೆಸಿಡಿಯುತ್ತಿರುವ ಅನುಭವ. ಮತ್ತೆ ಸೂರ್ಯ ಪಶ್ಚಿಮಕ್ಕೆ ಮಲಗಲು ಹೋದ. ಒಂದು ದಿನ ಕಡಿಮೆಯಾಯಿತು.

"ಅಕ್ಕ ಮಕ್ಕರಗೌಳದಾಗ ದೀಪಾನು ಹಚ್ಚದೆ ಇಲ್ಲಿಯಾಕ ಕುಂತಿ ಎಳು ಮನೀಗ ಹೋಗಾನು" ದನ ಮೇಯಿಸಾಕ ಹೋಗಿ ಬಂದಿದ್ದ ಭೂರಿ ಎಚ್ಚರಿಸಿದಾಗಲೇ ಕೌಳಾಗಿರೋದು ಗೊತ್ತಾಯ್ತು. "ಇದೇನು ಹೊರಗಿನ ಕತ್ತಲೋ, ಇಲ್ಲಾ ಒಳಗಿನ ಕತ್ತಲೋ" ಒಂದು ತಿಳಿವಲ್ಲದೇ ತಂಗಿ. ದನಗಳನ್ನ ಗೂಟಕ್ಕೆ ಒಯ್ದು ಕಣ್ಣೆ ಹಾಕ್ತಿದ್ದ ಭೂರಿಗೆ ಹೇಳಿದಳು. ಅಷ್ಟು ದೊಡ್ಡ ಮಾತಿನ ಅರ್ಥ ಹೊಳಿಯದೆ ದೊಡ್ಡಕೊಂಬಿನ ಎಮ್ಮಿ ಕರುವಿನ ಹತ್ರ ಹೋಗಿ ಮಲಿ ಉಣಿಸುತ್ತಿರೋದನ್ನ ಗಮನಿಸಿ, "ಹುಯ್ಯಲೇ ದೊಡ್ಡ ಕೋಡಿನ ಕಳ್ಳಿ, ಹಾಲಕರಿಯೋದ ಬ್ಯಾಡೇನು ಆವಾಗ್ಲೆ ಹೋಗಿ ಮಲಕೊಡ್ತಿದಿಯಲ್ಲ" ಅಂತೇಳಿ ಕೋಲ ತಗೊಂಡ ಹೋಗಿ ಬೆನ್ನು ಬಿರಿಯೊ ಹಂಗ ಹೊಡೆದು ಕೊಂಬ ಹಿಡಿದು ಅದರ ಜಾಗಕ್ಕೆ ತಂದು ಹಗ್ಗಕ್ಕ ಬಿಗಿದ್ಲು.

"ಮಲಿ ಉಣಿಸುವಾಗ ಆನಂದ ಆಗ್ತಿರಬೇಕಲ್ವಾ". ಚಿಮ್ನಿ ಅವಳೇ ಕೇಳ್ಕಂಡ್ಳು. "ನನ್ನ ಹಣೆಬರಾದಾಗ, ಆ ಸುಕಾನ ಪಡಿಲೇ ಇಲ್ಲ. ಅವತ್ತು ಕಾಫಿ ತೋಟದಾಗ ಆ ದಪ್ಪ ಮೀಸೆಯ ಕೊಂಗರ ರೈಟ. ನನ್ನ ಹಿಂದಿಂದೆ ಬಂದು ಸಾಲು ಹಿಡಿಯುವಾಗ ಬೇಕಂತ್ಲೆ ತನ್ನ ಮೊಳಕೈಯಿಂದ ಸಾಲು ತೋರಿಸೋ ನೆಪದಾಗ ನನ್ನ ಎದಿಗೆ ಹೊಡದ, ನನಗೆ ಜಗತ್ತೆ ತಿರುಗಿದಂಗಾಗಿತ್ತು. ನನ್ನ ಸಲಗೆ ಹಿಡಿದು ಏನಾರು ಮಾಡ್ಯಾನಂತ ಹುಸಿ ಕೋಪದಿಂದ ಸಾಲೇ ಬಿಟ್ಟು ಹೊರಗ ಬಂದಿದ್ದೆ. ಅವನು, ಸಾವುಕಾರರಿಗೆ ಹೇಳ್ತಿನೇನೋ ಅಂತೇಳಿ ಪದರಗುಟ್ಟಿಹೋಗಿದ್ದ". ಆ ನಿಶ್ಶಕ್ತಿಯೊಳಗು ಮೈ ಕಾವೇರಿತ್ತು. ನಾವಿದ್ದ ಲೈನಲ್ಲೆ ನಮ್ಮ ಪೈಕಿ ಗಂಡಾ ಹೆಂಡತಿ ಪಕ್ಕದಾಗ ಇದ್ರು, ನಾವು ಮೂವರೆ ಅಕ್ಕ ತಂಗಿರಿರೋದನ್ನ ನೋಡಿ ಆ ಮದ್ವಿಯಾದ ಹೆಂಗಸು ಸ್ವಂತಃ ಅಕ್ಕನಂಗೆ ಕಾಳಜಿ ಮಾಡ್ತಿದ್ಳು. ಗಂಡ ಮಾತ್ರ ಚವ್ಹಾಣ್ ಆಗಿದ್ದರಿಂದ, "ಏನ್ರೇ ಸೊಸೆಯಂದಿರ ಉಂಡ್ರೇನು" ಅಂತೇಳ ಕೆಟ್ಟದೃಷ್ಟಿ ಯಿಂದಲೇ ನೋಡ್ತಿದ್ದ. "ಅವತ್ತು ರಾತ್ರಿ ಮಾತ್ರ ಅಂವ ನಿರ್ಧಾರ ಮಾಡ್ದಂಗೆ ಇತ್ತು. ಹೆಂಡತಿಗ ನಿಶೆ ತಪ್ಪೊ ಮಟಾನು ಸರಾಯಿ ಕುಡಿಸಿ, ನಮ್ಮ ಮೂವರೊಳಗ ಯಾರಾದ್ರೂ ಒಬ್ಬಳ ಪಕ್ಕ ಮಲಗೋ ಇರಾದೆ. ಅವನ ಮೋಸದಾಟ ನನಗೆ ತಿಳಿದಿತ್ತು. ದೀಪ ಆರಿ ಗಂಟೆಯಾಗಿತ್ತು. ಅವನ ಹೆಂಡತಿ ಮೇಲಿಂದ ಕೈಹಾಕದ. ಅವನ ಕೈ ನೇರವಾಗಿ ನನ್ನ ಎದೆಯ ಮೇಲೆ ಬಿತ್ತು. ಮಂದಿ ದಣದ ಬಂದು ಮಲಗಿರೋ ವ್ಯಾಳೆದಾಗ ಕೂಗಿ ರಂಪ ಮಾಡಿದ್ರೆ ನಾಳೆ ಮಂದಿ ಸಲಗಿಯಿಂದ ಇನ್ನೇನೋ ಮಾಡ್ಯಾರಂತ ನಾನೇ ಸರದೆ. ಓಹೋ, ಅದೆಂತ ಸ್ಪರ್ಶ, ಒಂದೇ ಸಲಕ್ಕೆ ಮೈತುಂಬ ವಿದ್ಯುತ್ ಸಂಚಲನವಾದಂಗೆ ಬಯಕೆ ಗಳನ್ನೆಲ್ಲಾ ಕೊಂದು ಕೊಂಡು "ಕೈತಗಿಯೋ ಭಾಡಕವ್ ನನಮಗನೆ" ಅಂತೇಳಿ ಕಿತ್ತು ಬಿಸಾಕಿದೆ ಅವನ ಆಶೆಗೆ ತಣ್ಣೀರು ಎರಚಿ ತಂಗಿಯರನ್ನ ಆ ಕಡೆಗೆ ಸರಸಿ, ಅವನ ಹೆಂಡತಿಯನ್ನ ಅವನ ಕಡೆಗೆ ಸರಿಸಿ, ಅವನ ಕಡೆಗೆ ತಿರುಗಿಸಿದೆ. ಕತ್ತಲೊಳಗೆ ನಾನೆ ಅಂತ ತಿಳಿದು ಅವನು, ಮೆಲ್ಲಗೆ ಅವಳನ್ನ ಬಿಗಿಯಾಗಿ ಅಪ್ಪಿಕೊಂಡು. ಓ......." ಹಾಗೆ ಎಲುಬಿನ ಹಂದರವಾದ ಅವಳ ಮೈಯನ್ನ ಚೆಲ್ಲಿ ಅಡ್ಡಾದ್ಳು.

ದೀಪಾವಳಿಗ ಬರೋ ಬರಿ ತಿಂಗಳೈತಿ ಆದ್ರೂ ಯಾವ ಹುಡುಗಿಯರು ಗುಡಿಮುಂದ ಕುಣಿಯದಿರೋದನ್ನ ಗಮನಿಸಿದ ಹಿರಿಯ ಹೆಂಗಸರು ಹುಡುಗಿಯರನ್ನ ಹಿಡ್ಕಂಡು ತಾರಮಾರ ಬೊಯ್ದಿಂದೆ. ಹುಡುಗಿಯರೆಲ್ಲಾ ಸೇರಿ ಕುಣಿಯಾಕ ಹೋಗೋದಕ್ಕೆ ಅಣಿಯಾದ್ರು. ತಾಂಡದ ದೊಡ್ಡ ಹುಡುಗಿಯರೆಲ್ಲಾ ಒಬ್ಬರಿಗೊಬ್ಬರು ಸುದ್ದಿ ಮಾಡಿ ದೀಪಕ್ಕೆ ಎಣ್ಣೆ ಹಿಡ್ಕಂಡು ಮೇಲಿನ ಓಣಿಯಿಂದ ನಾಕೈದು. ಹಿಂದಿನ ಓಣಿಯಿಂದ ಅಷ್ಟು,

ಮೂಲಿಕಡಿಂದ ಅಷ್ಟು ಬಂದು ಸೇರ್ಕಂಡು ದೀಪ ಹಚ್ಚಿ ಹಾಡು ಸುರುಮಾಡಿದ್ರು. "ಯವ್ವ ದೀಪಾವಳಿ ಬಂತೇನಬೇ ದಿನಗಳು ಹೋಗಿದ್ದು ಗೊತ್ತೆ ಆಗಲಿಲ್ಲಾ. ಹುಡುಗಿಯರೆಲ್ಲಾ ಕುಣಿಯಾಕ ಬಂದೇ ಬಿಟ್ಟಾರ. ಹ್ವಾದ ದೀಪಾವಳಿಯೊಳಗ ನಾನು ಇದ್ವೆ ಅಲ್ಲಾ" ಚಿನ್ನಿ ಬಾಯಿಗ ತಡಿಯಾಕ ಆಗಲಿಲ್ಲಾ. ಮಾತುಗಳು ಶಬ್ದಗಳಾಗಿ ಹೊರಗ ಬರದೆ ವೇದನೆಯಾಗಿ ಉಸಿರಿನ ಕೂಡ ಗಾಳಿ ಸೇರಿಕೊಂಡಿದ್ವು. "ನಾನು ಪಾಡಾಗಿದಿದ್ರ, ಕುಣಿತಿದ್ದೆ ನೋಡು. ಹೌದು ನಮ್ಮ ಮನಿಯಿಂದ ಯಾರ ಹೋಗ್ಯಾರ?" ದೀಪ ಹಿಡದು ನೋಡಿದ್ಲು.

"ಲೇ ರಾಮಿ, ಬೋಸುಡಿ, ಕುಣಿಯಾಕ ಹೋಗೋದೂ ಬಿಟ್ಟು ಎಮ್ಮಿ ಹಂಗ ಬಿದ್ಕಂಡಿಯಲ್ಲ ಎದ್ದು ಹೋಗು" ತನ್ನ ಎಂದಿನ ದಿಮಾಕಿಂದ ಹೇಳಿದ್ಲು. "ಅಕ್ಕ ನಾನು ರಾಗಿ ಕೋಯ್ದು ದಣದೀನಬೇ, ಹೋಗಲ್ಲ" ಅಂತೇಳಿ ಮಗ್ಗಲು ಬದಲಿಸಿ ಮಲಗುವ ನಾಟಕ ಮಾಡಿದ್ಲು. "ಅಸ್ತಿತ್ವವನ್ನೇ ಕಳ್ಕೊಂಡು ಕ್ಷಣಗಣನೆ ಮಾಡ್ತಿರೋ ನಿನ್ನ ಬಿಟ್ಟು ಕುಣದು ಸುಖ ಪಡೋದ ಎನ್ನೈತಿ" ಕಣ್ಣೀರು ಹಾಗೆ ಒತ್ತರಿಸಿದವು ರಾಮಿಗೆ. "ನನಗೆ ಗೊತ್ತು ನೀ ನನ್ನ ಏಟು ಹಚ್ಕೊಂಡಿ, ಏನ ವಿಚಾರ ಮಾಡಾಕ ಹತ್ತಿ ಅಂತ. ಆದರೆ, ನನ್ನ ಜಾಣಮರಿ, ಆಗೋದನ್ನ ಆ ಪರಿಬ್ರಹ್ಮನಿಂದಲೂ ತಡಿಯಾಕ ಆಗೋದಿಲ್ಲ. ಮೇಲಿನ ನೀರು ಕೆಳಗ ಹರದು ಹೋಗುತ್ತೆ ಅದು ಹರಿತಾ ಕೆಳಗೆ ಹೋಗಬೇಕೆ ವಿನಃ ಮೇಲೆ ಬರೋದಿಲ್ಲ ಏಳು, ಹೋಗಿ ಹುಡುಗಿಯರ ಕೂಡ ಕುಣಿ" ಹುಸಿನಗುವ ಪ್ರಯತ್ನ ಮಾಡಿದ್ಲು ಚಿಮ್ನಿ. "ನನಗಾಗಂಗಿಲ್ಲವ್ವ, ಯಾರಾರು ಹೋಗ್ರಿ" ರಾಮಿ ಗಪ್ಪಾದ್ಲು. ಚಿಮ್ನಿಗ ಕಸಿವಿಸಿಯಾತು, ತನ್ನಿಂದಾಗಿ ಕುಣದು ಕುಪ್ಪಳಿಸೋ ತಂಗಿಯರು ಮುದಡಿಕೊಂಡು ಮಲಗಿರೋದು ನೋಡಿ. "ಅದೆಂಗ ದಣಿವಾತ ನಿಂಗ, ನೀನೇನು ನನಂಗ ರೋಗ ಬಂದೋಳ" ಬಾಯಿತಪ್ಪಿ ಅಂದ್ಲು. "ಅಕ್ಕ, ಯಾಕೆ, ಸಂಕಟಪಡ್ತಿ ನೀನೆ ಇಲ್ಲದ ಮೇಲೆ ಕುಣಿಯಾದಕ್ಕಾರು ಹ್ಯಾಂಗ ಕಾಲಗಳೇಳ್ತವ ಹೇಳು? ನೀನು, ನಿನ್ನ ಸಂತೋಷ, ನೆಮ್ಮದಿ ಮುಖ್ಯ ಕಣೆ. ನಮಗೆ ಬೇರೇನು ಬ್ಯಾಡ. ನಮ್ಮ ಸಲವಾಗಿ ಏನೆಲ್ಲಾ ತ್ಯಾಗ ಮಾಡಿ ಅನ್ನೋದು ನನಗೆ ಗೊತ್ತು ಅಂತಾದ್ರಾಗ" ಅವಳ ಬಡಕಲು ಮೈಯನ್ನ ಎದಿಗಾನಿಸಿ ಸಾಕಾಗುವಷ್ಟು ಅತ್ತಳು ರಾಮಿ. "ಅತ್ತಿದ್ದ ಸಾಕು ಎಳ ಮ್ಯಾಕ ನೀನು ಬಂದು, ಗುಡಿಯಾಗ ಕುಣದ್ರೆನೆ ಕುಣಿತಕ್ಕೊಂದು ರಂಗಬರೋದು, ಯಾಕಂದ್ರ ನಮ್ಮ ತಾಂಡದಾಗೆ ನಾವೇ ಬಹಳ ಮಂದಿ ಅಕ್ಕ ತಂಗೀರಿರೋದು. ಮುಂದಿನ ದೀಪಾವಳಿಗ ಸಾಯಾರೊ ಯಾರೋ ಬದಕೋರ್ಯಾರೋ" ಉಸರು ಹೊರಗ ಹಾಕಾಕು ಪ್ರಾಣ ಇಲ್ಲದಕ ಪುಸಂದ್ಲು. "ನೀ ಹಂಗ

ಮಾತಾಡ ಬ್ಯಾಡವ್ವ, ನಿನಗ ಏನೂ ಆಗಂಗಿಲ್ಲ, ಇನ್ನೂ ಬಹಳ ವರ್ಷ ಬದಕ್ತಿ ಕಣೆ, ನಮ್ಮೆಲ್ಲಿ ಆಯಸ್ಸು ನಿನಗೆ ಕೊಡ್ಲಿ ಅಂತ ದೇವರನ್ನ ಬೇಡಿಕೊಳ್ತಿದ್ದೀವಿ" ಸಾಂತಿ ಗದ್ಗದಿತಳಾಗಿ ಹೇಳಿದಳು.

ಹುಡುಗಿಯರೆಲ್ಲಾ ಕುಣಿಯೋದ ಬಿಟ್ಟು ಚಿಮ್ನಕ ಬಂದ್ರು ಅಂತೇಳಿ, ಸುತ್ತುವರಿದು ನಿಂತು ಅವಳನ್ನ ಮುಟ್ಟಿ ಮಾತಾಡಿಸಿದ್ರು. "ಎಯ್ ಯವ್ವ, ಛಳಿಯಾಗ ನೀ ಯಾಕ ಬರಾಕಹೋದೆ. ಲೇ ಚಿನ್ನಾ, ಅಕ್ಕಗೊಂದು ದುಪ್ಟಿ ಒಯ್ದು ಕೊಡ್ಲ". ಅವ್ವ ಹೇಳಿದ್ದೆ ತಡ, ನಾನು ಹೊತ್ಕೊಂಡಿದ್ದ ದುಪ್ಟಿಯನ್ನೆ ಕೊಡಾಕ ಮುಂದಾದೆ. "ತಂದಿನೋ, ಯಪ್ಪ, ಮನಿಂದ ಅವ್ವ ಕಳಸ್ಯಾಳ, ಹೋಗು ನೀನ ಹೊತ್ಕ, ಯಾಕ ಇವತ್ತು ಆ ಮನಿ ಆಟವಳಗಿನ ಮಲಗಾಕ ಬರಲ್ಲೇನ್ಲಾ ಚಿನ್ನು" ಕೇಳಿದ್ಲು. "ಬರ್ತಿವಬೇ, ಹುಡುಗಿಯರು ಕುಣಿಯಾಕ ಬಂದರಲ್ಲಾಂತ ಅದೀವಿ, ಮುಗದಿಂದ ಬರ್ತಿವಿ" ಅಕ್ಕನ ಪಕ್ಕದಾಗ ಕುಂತ್ಕಂಡೆ. ಆ ಹುಡುಗಿಯರು ಕುಣಿತಿರೋದನ ಬಿಟ್ಟು ಬಿಡದೆ ನೋಡ್ತಿದ್ಲು ಅಕ್ಕ. ಅವರು ಕೆಳಗೆ ಬಗ್ಗಿ ಮೇಲೆದ್ದು ಕೈಯನ್ನ ತಿರುವುದು ತಿರುಗುವುದನ್ನ ನೋಡಿಯೇ ಅನುಭವಿಸುತ್ತಿದ್ದಳು. ಅವರ ಪ್ರತಿಯೊಂದು ನಡೆಗಳಲ್ಲಿ, ಅಕ್ಷರಗಳಲ್ಲಿ ಲೀನಳಾಗಿದ್ದಳು. ಹೊರಗಿಂದ ಸಣ್ಣ ಹುಡುಗಿಯರು ಒಳಗೆ ಓಡಿ ಬರುವುದು, ಒಳಗಿನಿಂದ ಹೊರಗಡೆ ಮತ್ತೆ ಓಡುವುದು ತದೇಕಚಿತ್ತದಿಂದ ನೋಡುತ್ತಿದ್ದಳು. ಅವಳ ನೋಟ ನನ್ನ ಮನಸ್ಸನ್ನ ವಿಚಲಿತಗೊಳಿಸಿತ್ತು. ಯಾರೋ ಒಂದಿಬ್ಬರು ಹುಡುಗರು "ಲೇ ಚಿನ್ನಾ ಬಾರಲೆ, ಕಬ್ಬಡಿಗೆ ಹುಡ್ರು ಕಾಯ್ತವ್ರೆ" ಕರದಿದಕ್ಕೆ ಹಾಗೆ ಪಕ್ಕದಾಗಿಂದ ಸರಿದು ಓಡಿದೆ. ಅವಳು ಮಾತ್ರ ತಾನು ಕೂಡ ಹೀಗೆ ಸಣ್ಣೋಳಿದ್ದಾಗ, ಕುಣಿತಿದ್ದೋರ ನಡುವಿಂದ ಗುಂಪಿನೊಳಗೆ ಓಡ್ತಿದ್ದೆ. ಯಾರಾದ್ರು ಜಡಿ ಎಳದ್ರೆ ಹಿಡಿದು ಹೊಡೆಯೋದಕ್ಕೆ ಒಳಗಡೆಯಿಂದ ಹೊರಗೆ, ಹೊರಗಿಂದ ಮತ್ತೆ ಒಳಗೆ. "ಯಾವಳಲೇ ಅಕಿ, ನನ್ನ ಲಂಗದ ಲಾಡಿನೇ ಹರಿತ್ರೆಯವ್ವ ಯಾವಕಿನೋ ಹಿಂದಿಂದ ತುಳದ ಬಿಟ್ಲು" ಅಂತ ಮೇಲಿನ ಓಣಿಯ ಜಮಾಣಿ ಮಗಳ ಸಿಪಿ ಹೇಳಿದ್ಕ ಕುಣಿಯೋದು ನಿಲ್ತು. "ಥತ್ ತೇರಿಕಿ, ಕನಸ ಇದು. ನಾನು ಯಾರದೋ ಲಂಗ ತುಳದು ಹೊಡ್ತ ತಿಂದಿದ್ದು, ಬಾಲ್ಯ ಎಷ್ಟು ಚೆನ್ನಾಗಿತ್ತು ಯಾಕಾದ್ರು ನಾನು....! ದೊಡ್ಡೋಳಾದ್ರು ಏನ ಪ್ರಯೋಜನ. ಬಂಜಿ ಎಮ್ಮಿಮಣಕದಂಗೆ. ಹಾಲಿಲ್ಲ, ಗೀಬಿಲ್ಲ ನನ್ನದು ಅಂತೆದ್ದೆ ಸ್ಥಿತಿ ಹೇಳಾಕ ಏನು ಇಲ್ಲದೆ ಮೋಟ ಮರಗಾಳಿಮಿಂಡ. ನನ್ನ ನೆನಪನ್ನು ನನ್ನ ಬೆನ್ನ ಹಿಂದೆ ತಗೊಂಡ ಹೊಕ್ಕಿನಿ. ಅವ್ವ ಇರೋಮಟ ಅತ್ತಾಳು. ಅಪ್ಪನಿಗೆ ಅವನವೇ ಸಮಸ್ಯೆಗಳು

ಸಾವಿರಾರು, ಮದಲನೇ ಹೇಣ್ತಿವೆ ಸನ್ನ ಬಿಟ್ರೇ ಹದಿಮೂರು, ಎರಡನೇಯ ವಳಿಗೆ ಐದು ದೊಡ್ಡೋವ್ರ ಒಂದು ಕಂಕುಳಲ್ಲಿ ಆಗಲೆ ಮತ್ತೆ ಗರ್ಭಿಣಿ ನಮ್ಮಪ್ಪನು ಭಾರಿ ಗಂಡಸು. ವರ್ಷಕೊಂದು ತಯಾರ ಮಾಡಿ ಬಿಡ್ತಾನ. ಒಂದ ಗಂಡಾಗಿದ್ರೆ ಅಪ್ಪನ ವಂಶದ ಕುಡಿಯನ್ನ ನೋಡಿ ನೆಮ್ಮದಿಯಿಂದ ಸಾಯ್ತಿದ್ದೆ. ಈಗ್ಲೆ ಮೂರು ನಾಕು ಮದುವೆಗೆ ಬಂದವೆ. ಅವರ ಮದುವೆ ಆಗ್ತಿದಂಗೆ ಮತ್ತೆ ಸಾಲುಗಟ್ಟಿ ನಿಲ್ತವೆ. ಅದೆಂಗ ಮಾಡ್ತಾನೋ. ತಾಂಡೆದುರಗವ್ವ ನೀನೆ ಕಾಪಾಡವ್ವ" ಅನ್ನುತಿದ್ದಂಗೆ ಮತ್ತೆ ಹುಡುಗಿಯರು ಕುಣಿಯೋದಕ್ಕೆ ಸುರುಮಾಡಿದ್ರು. ಚಿಮ್ನಿನ ಕಳುಹಿಸಿ ನಿದ್ದೆಬಾರದೆ ಚಿನ್ನಿಚಿಗವ್ವ ಎದ್ದು ಬಂದಿದ್ಲು. ಮಗಳ ಮನಸ್ಸಿನೊಳಗೆ ಎದ್ದಿರಬದುದಾದ ಬಿರುಗಾಯನ್ನ ಊಹಿಸಿ ಕೊಳ್ಳೊದಕ್ಕು ಆಗದೆ ಮಗಳನ್ನ ನೋಡುತ್ತ ಅವಳಿಲ್ಲದ ಬದುಕನ್ನ ನೆನಪು ಮಾಡಿಕೊಳ್ಳಲು ಆಗದೆ ಹಿಂಸೆಪಡತೊಡಗಿದಳು.

ಪ್ರತಿದಿನ ಸಂಜೆ ಅಲ್ಲಿಗೆ ಹೋಗಿ ಹುಡುಗಿಯರು ಕುಣಿಯೋದನ್ನ ನೋಡಿ ಖುಷಿ ಪಡತೊಡಗಿದಳು. ಮುಖದ ಮೇಲೆ ಸ್ವಲ್ಪ ಲಕ್ಷಣ ಕಾಣತೊಡಗಿತು. ದೀಪಾವಳಿ ಬಟ್ಟೆ ತರಲು, ಹುಡುಗಿಯರು ತಾವು ಕೂಲಿ ಮಾಡುತ್ತಿದ್ದ ಸಾವುಕಾರರ ಹತ್ತಿರ ಮುಂಗಡ ಹಣ ತಗೊಂಡು ಬಂದು, ಪ್ರತಿ ವರ್ಷದಂತೆ ಚಿಮ್ನಿಗೆ ತಂದು ಕೊಟ್ರು. ಚಿಮ್ನಿಗೆ ಏನು ಮಾಡಕು ಹೊಳಿಯದೆ "ಇನ್ಮೇಲೆ ಬಟ್ಟೆನ ಅವ್ವ ಅಪ್ಪ ಹೋಗಿನೆ ತರ್ತಾರೆ. ದುಡ್ಡನೆಲ್ಲಾ ಅಪ್ಪನ ಕೈಗೆ ಕೊಡ ಹೋಗ್ರಿ" ಅಂದ್ಲು. ಅಲ್ಲಿ ಇಟ್ಟ ದುಡ್ಡನ್ನ ಯಾರು ಮುಟ್ಟಲಿಲ್ಲಾ. "ಅಂದ್ರೇನ್ರೇ ನಿಮ್ಮ ಅರ್ಥ, ನಾಕ ದಿನ ನಾನೇನು ಮುಂದ ಬಂದು ಕೆಲ್ಸ ಮಾಡದೆ, ನಾನೆ ಎಲ್ಲಾ ಅಂತ ತಿಳ್ಕೊಂಡಂಗೈತೆ. ಅಪ್ಪ ಈ ಮನಿ ಯಜಮಾನ. ಅವರಿಗೆ ಹೊರಿಯಾಗ ಬಾರದಂತ ಹಿಂದ ನಾ ಮಾಡಿದೆ. ಹೂಂ.......ಈಗ ನನ್ನ ಹತ್ರ ಆ ಶಕ್ತಿ ಎಲ್ಲೈತಿ ಹೇಳ್ರಿ" ಸೂರು ನೋಡತೊಡಗಿದಳು. "ಅಕ್ಕ ಅದಲ್ವೆ" ರಾಮಿಗ ಮಾತು ಹೊರಡಲಿಲ್ಲಾ."ಯಾಕ್ಲೇ ಬೋಳಿ, ಎಲ್ಲಾ ಮಾತಿಗೆ ಅಳ್ತಿ, ನೀನು ಅಳೋದಲ್ಲದೆ ಎಲ್ಲಾರನ್ನೂ ಅಳಸ್ತಿ. ನೋಡು ಇನ್ನ ಮೇಲೆ ನೀನು ಆ ಕೆಲ್ಸ ಮಾಡೋದನ್ನ ಕಲಿ. ಅಪ್ಪನ ಕೈಗೆ ದುಡ್ಡ ಹೋದ್ರೆ ಹೆಂಡದಂಗಡಿಗೆ ವಾರ ಬಡ್ಡಿ ಕಟ್ತಾನ. ಮತ್ತದೇ ಗೋಳು ಹಾಳಮನಿ ಸಾವುಕಾರನ ಮಕ್ಕಳು ಹರದು ಎದಿಕಾಣೋದನ್ನ ಕಿತ್ತು ತಿನ್ನೋ ಹಂಗೆ ನೋಡ್ತವೆ. ಬಡವರ ಮನಿ ಹೆಂಗಸುರ ಅಂದ್ರ ಆಟದ ಸಾಮಾನಿದ್ದಂಗೆ. ಅವಕ್ಕ ಮಾನಮರ್ಯಾದಿ ಅನ್ನೋದ ಇರಂಗಿಲ್ಲಾ ನಾಮರ್ದಗಳು. ಅವರು ಇನ್ನೊಬ್ಬಳ ತಾವ ಹ್ವಾದ್ರ ಅವರ ಹೆಂಡ್ರು ಸುಮ್ಮನಿದ್ದಾವೇನು?

ಅವ್ರ ದಾರಿಯೊಳಗೆ ಸಿಕ್ಕೋನ ತಾವ ತೀಟೆ ತೀರಸ್ಕೊಂತಾವ. ಹೋಗಲಿ ನನ್ನ ಪುರಾಣ ತಗಂಡ ನೀವೇನ ಮಾಡಿರಿ." ರಾಮಿ ಕಡಿಗ ನೋಡಿದ್ಲು. "ನೀ ಇರೋವರಿಗ, ಅದರ ಬಗ್ಗೆ ತಲಿನ ಕೆಡಿಸಿಕೊಳ್ಳಂಗಿಲ್ಲ ನೋಡವ್ವ ನಾನಂತು. ನೀನುಂಟು ರೊಕ್ಕ ಉಂಟು. ನಮ್ಮದು ದುಡದು ತಂದುಕೊಡೋದು ಆಟೇಯ ಕೆಲ್ಸ. ಆ ವ್ಯವಹಾರ ಏನೇ ಇದ್ರು ನಿನಗ ಸೇರಿದ್ದು ಅಲ್ಲೇ, ಹೆಂಗೂ ಆಟು ಅಡ್ಡಾಡಂಗಾಗಿ, ಊರಿಂದ ಯಾವಾರು ಬಂಡಿ ಹೊಕ್ಕಾವ ಹತ್ಕಂಡ ಧುಮ್ಮಾಡ ಮಟಹೋಗಿ ಬಸ್ಸು ಹತ್ತಿ ಅವ್ವ ಅಪ್ಪನ ಕೂಡ ಅರವಿ ತಗಂಡ ಬಾ, ನೀ ತಂದಿದ್ದು ಯಾರು ಜರಿಯಂಗಿಲ್ಲ" ರಾಮಿ ತನ್ನ ಮನಸಿನೊಳಗಿನ ಮಾತು ಹೊರಹಾಕಿದ್ಲು. "ಆತ ಬಿಡೆ, ನಿಮ್ಮ ಸಲವಾಗಿ ತಾನೆ ನಾನು ಬದಕಿರೋದು ಇನ್ನೆಟ ದಿನ ಮಾಡೇನು?" ಸುಮ್ಮನಾದ್ಲು. "ಬಾರಿ ಒಳ್ಳೆಳು ನನ್ನಕ್ಕ" ರಾಮಿ ಬಾಚಿ ತಬ್ಕೊಂಡ್ಲು.

ಪ್ಯಾಟಿ ಅಡ್ಡಾಡಿ ಬಂದಿದಕ್ಕೆ ಸುಸ್ತಾಗಿ ಮಲಗಿದ್ಲು ಚಿಮ್ನಿ. ಇಪ್ಪತ್ತು ಹುಡುಗಿಯರು ತಮ್ಮ ಅರವಿಗಳನ್ನ ತಗೊಂಡು ಉಟ್ಕಂಡು ನೋಡಿ ಖುಷಿಯಿಂದ ಮಡಚಿ ದೀಪಾವಳಿ ಹಬ್ಬಕ್ಕಂತ ಜೋಪಾನವಾಗಿ ಇಡತೊಡಗಿದರು. "ಹೌದು ನಮಗೆಲ್ಲಾ ತಂದೆ ಎಲ್ಲೆ ನಿನ್ನ ಅರವಿ" ಸಾಂತಿ ಕೇಳಿದ್ಲು. "ಎಯ್, ಒಳಗ ಅದಾವ ಬಿಡ್ಲೆ, ನಂದೇನು. ನಾ ಏನು ಉಟ್ಕೊಂಡು ಕುಣಿಯಾಕ ಇಲ್ಲ ಹೂ ಹರಿಯಾಕ ಹೋಗಿಕಿನ ಏನು?" ತಲಿ ನೋಯ್ತಿದ್ಕ ತಲಿಯನ್ನ ಗಟ್ಟಿಯಾಗಿ ಹಿಡ್ಕಂಡಿದ್ಲು. "ಎಲ್ಲಿ, ಕೈ ಬಿಡು ನಾನು ಅದುಮ್ತಿನಿ ತಡಿ, ಬಾಳದಿನಕ ಅಡ್ಡಾಡಿಯಲ್ಲಿ ಆಗಿರಬೇಕು". ಬೇಬಿ ಅದುಮಿದ್ಲು. ಹಿತ ಅನಿಸತೊಡಗಿತು. ಹಾಗೆ ನಿದ್ದೆ ಹೋದ್ಲು. "ಲೇ ಯಾರು ತುಟಪಿಟಕ್ ಅನ್ನಬ್ಯಾಡ್ರಲೇ ಅಕ್ಕ ಮಕ್ಕಂಡ್ಲು ಆಟ ಮಲಗ್ಲಿ ಮಾತಾಡಂಗಿದ್ರ ಹೊರಗ ಹೋಗ್ರಿ" ಮೆಲ್ಲಗೆ ಎದ್ದು ಹೊರಗನಡದ್ಲು ಬೇಬಿ.

ದೀಪ ಹತ್ತಿ ಆರಿ ಹತ್ತುತಿದ್ದಂಗೆ ದಿನಗಳು ಉರುಳಿ ದೀಪಾವಳಿ ಬಂದೇಬಿಟ್ಟಿತು. ಒಂದಿಬ್ಬರು, ಕೂಲಿ ಬಿಟ್ಟು ಗ್ಯಾಡಿನೆಲ್ಲಾ ಬಳದು, ನೆಲ ಸಗಣಿಯಿಂದ ಸಾರಿಸಿ ಎಮ್ಮಿ ಗ್ವಾತ ಹೊಯ್ದು ಮಣಕಾಲ್ಮಟ ಆಗಿದ್ದ ಗುಂಡಿಗಳಿಗೆ ಕೆರಿಮುಂದಿಂದ ಜರಗ ತಂದು ಹಾಕಿದ್ರು. ಎತ್ತಿನ ಮನಿಯೊಳಗಂತು ಸೊಂಟದ ಮಟಗುಂಡಿಗಳಿದ್ದು ಅವನ್ನು ತುಂಬಿಸಿ, ಅಂಗಳಾವೆಲ್ಲಾ ಸ್ವಚ್ಛಗೊಳಿಸಿ ವಾತಾವರಣವನ್ನೆ ಬದಲಾಯಿಸಿದರು. ಅದೆಲ್ಲವನ್ನ ಮೌನವಾಗೆ ಕುಂತು ಗಮನಿಸುತ್ತಿದ್ದ ಚಿಮ್ನಿ "ಈ ಹೆಂಗಸರು ಕಷ್ಟ ಜೀವಿಗಳು. ಬಾಚು,

ಬಳಿ, ತಿಕ್ಕು, ತೊಳಿ, ಎಲ್ಲಾ ಇವರ ಪಾಲಿಗೆ ಬರುತ್ತೆ. ಗಂಡನೇನಾರುವೆ ಸೊಂಬೇರಿ ಯಂತೋನು ಸಿಕ್ರ ಕತಿನೆ ಮುಗಿತು. ದುಡದತಂದು ಹಾಕಬೇಕು. ಅವನಿಗೆ ಕುಡಿಯಾಕು ಕಾಸ ಕೊಡಬೇಕು, ಮಕ್ಕಳನ್ನು ಹೆತ್ತು ಹೊತ್ತು ಸಾಕಬೇಕು. ಎಲ್ಲಾ ವಿಚಿತ್ರ ಈ ಜಗತ್ತಿನಲ್ಲಿ ನಮ್ಮವ್ವ ಒಂದು ಇಪ್ಪತ್ತು ಹುಡುಗಿಯರನ್ನಾದ್ರು ಹೆತ್ತಿರಬೇಕು. ಆದ್ರೆ ಉಳಿದಿರೋದು ಬರಿ ಹದಿಮೂರು ಹದಿನಾಕು. ಇವೆಲ್ಲವುಗಳಿಗೆ ಜೀವಕೊಟ್ಟು ಬದಕುಕೊಡ್ತಾಳ ಎಂತ ಸಾರ್ಥಕ. ಪ್ರತಿಯೊಂದು ಈ ಜಗತ್ತಿನ ನಿಯಮದಂತೆ ಸಾಗುತ್ತೆ. ಆದರೆ ನನಗ್ಯಾಕೆ ಈ ಬರಬಾರದ ವಯಸ್ಸಿನೊಳಗೆ ಈ ಕಾಯಿಲೆ ಬಂತು? ಯಾರಿಗೂ ಇಲ್ಲದಿರೋದು. ಆ ದೇವರು ಹೀಗೆ ಅಂತ ಪ್ರತಿಯೊಬ್ಬರಿಗೂ ಬರದು ಕಳಿಸಿದ್ದಾನೆ. ಅದರಲ್ಲಿ ನನ್ನ ಪಾತ್ರ ಇಷ್ಟೇ. ಒಬ್ಬ ಮಗಳು ಕಾಯಿ, ಹೀಚು, ಹೂವ ಬಿಡದ ಖಾಲಿಬಳ್ಳಿ, ನಿರರ್ಥಕ ಬದಕು" ಯೋಚಿಸುತ್ತಿದ್ದಂತೆಲ್ಲಾ ತನ್ನ ಮೇಲೆ ಜಿಗುಪ್ಸೆ ಉಂಟಾಗುತ್ತಿತ್ತು ಅವಳಿಗೆ. ಈ ಯೋಚನೆಗಳನ್ನ ಬಿಟ್ಟು ಇನ್ನೇನು ತಾನೆ ಮಾಡಲಿಕೆ ಆಗುತ್ತೆ ನನ್ನಿಂದ. ಒಳಗೊಳಗೆ ಒಳಸುಳಿಗಳಂತೆ ನನ್ನ ಮೆದಳ ಬಳ್ಳಿಗಳ ಸುತ್ತಲು ಗಿರ್ಕಿ ಹೊಡೆದು ಹೊರ ಬಂದು ವಿಚಾರಗಳೆ ಆಗುವುದಿಲ್ಲ, ಮದ್ದಿಲ್ಲದೆ ಟುಸ್ಸ್ ಎನ್ನುವ ಖಾಲಿ ಪಟಾಕಿಯಂತೆ. ಅರ್ಧ ಮೆದುಳು ಸತ್ತು ಹೋಗಿದೆ. ಪ್ರತಿದಿನ ಒಂದಿಷ್ಟು ಸಾಯುತ್ತಲೇ ಇದೆ. ಹಾಂ...ಇನ್ನು ಕೆಲವೇ ದಿನಗಳಲ್ಲಿ ನಿಂತ ಗಡಿಯಾರದಂತೆ ತನ್ನ ಕೆಲಸವನ್ನ ನಿಲ್ಲಿಸಿದಾಗ ನಾನೆಂಬ ನಾನು ಅಸ್ತಿತ್ವವನ್ನೇ ಕಳೆದುಕೊಂಡು ಬಹುಶಃ ಬೂದಿ ಕೂಡ ಆಗೋದಿಲ್ಲವೇನೊ. ಇವೆಲ್ಲವೂ ಅರ್ಥವಿಲ್ಲದ ಆಲೋಚನೆಗಳು ನನಗಷ್ಟೇ ಸೀಮಿತ ಯಾರಿಗೂ ಉಪಯೋಗವಿಲ್ಲ, ನಾನು ನೋಡಿಲ್ಲವೆ ಜಗತ್ತನು. ಕಾಫಿ ತೋಟಕ್ಕೆ ಎಷ್ಟು ಸಲ ಹೋಗಿಲ್ಲ. ನಮ್ಮಂತ ಕೂಲಿಗಳ ಪಾಡು ನರಕ. ಮುಂಜಾನೆ ಸೂರ್ಯ ತಾಯಿ ಗರ್ಭದಿಂದ ಉದಯಿಸಿ, ಕಣ್ಣುಜ್ಜಿಕೊಂಡು ಜಗತ್ತು ನೋಡುವ ಮುನ್ನವೆ ನಮ್ಮಂತ ಬಡವರ ಬದುಕು ಆರಂಭವಾಗಿರುತ್ತೆ. ಬಹುಶಃ ಈ ದುಡ್ಡಿರೋ ಮಂದಿ ಅಷ್ಟುಗಡಾನೇ ಏಳೋದಿಲ್ಲ ಅಂದ್ಕೊಂಡೀನ. ಯಾಕಂದ್ರು ಕೂಲಿಗ ಹೋಗ್ತಿದ್ದಾಗ, ಅರ್ಧ ಕೆಲ್ಸ ಮುಗ್ಸಿದಾಗ ಆ ಸಾವುಕಾರನ ಮಕ್ಕಳು ಎದ್ದು ಆಕಳಿಸುತ್ತಿದ್ದವು. ಎಂಥ ಸುಖಪುರುಷರು ಅಲ್ವಾ, ಪಡ್ಕೊಂಡು ಹುಟ್ಟಿದ್ದಾರೆ. ಮುಂಜಾನೆ ಬೆಳ್ಳಿ ಚುಕ್ಕಿ ಮೂಡಲದಿಕ್ಕಿಗೆ ಹುಟ್ಟಿದಾಗಲೇ ನಾವು ಒಲಿಯಾಗಿನ ಬೂದಿ ತೆಗದು ನೀರು ಬಿಸಿಮಾಡಿ ಹಿಟ್ಟು ಕಲಿಸಿ ರೊಟ್ಟಿ ಮಾಡ್ಕಂಡು, ಚಟ್ನಿಗ ಮೆಣಸಿನಕಾಯಿ, ಇದ್ರೆ ಒಂದು ಬದ್ನೆಕಾಯಿ, ಚೂರು ಪಾರು ಬಾಂಗಡಿ ಮೀನು,

ಕೈಯಾಗ ರೊಟ್ಟಿ....... ಬೀಜದ ಚೀಲ ಸೊಂಟದ ಮೇಲಿಂದ ಜಾರಿದರೆ ಮೇಲೆತ್ತಿ ಕಟ್ಟಲು ಗಂಡಸರನ್ನು ಕರೆದರೆ ಅವನು ಮುಟ್ಟ ಬಾರದ ಜಾಗವನೆಲ್ಲಾ ಸವರಿ ಅಸಾಯಕತೆಯ ಉಪಯೋಗಪಟ್ಕೊತಾನೆ.

ಅವಳು ಕೃಷಳಾಗಿದ್ದರೂ, ಎಲುಬುಗಳು ಕೆಲಸ ಮಾಡಿ ಗಟ್ಟಿಯಾಗಿದ್ದರಿಂದ ಒಳಗಿನ ನೋವನ್ನ ಸಹಿಸಿಕೊಂಡಿದ್ದಳು. ದೀಪಾವಳಿಗೆ ಅರಿವೆ ಉಟ್ಟು ದೀಪವನ್ನ ಹಿಡಿಯಲು ರಾಮಿಗೆ ಮುಜುಗರವಾಗಿತ್ತು. ಹಿರಿಯಳಾದ ಚಿಮ್ಮಿ ಬದುಕಿರುವಾಗಲೇ ಅದು ಅವಳು ಕ್ಷಣಗಣನೆ ಮಾಡುತ್ತಿರುವಾಗ, ಆದರೂ ತೋರಿಕೆಗಾದರೂ ಹೊಸ ಬಟ್ಟೆಗಳನ್ನ ಧರಿಸಲೇಬೇಕಿತ್ತು. ದೀಪಾವಳಿ ಲಂಬಾಣಿಗರಿಗೆ ದೊಡ್ಡಹಬ್ಬ. ನಾಯಕನ ಮನೆಯಿಂದ ಕೂಗು ಬಂದೆಬಿಡ್ತು. ತಂಗಿಯರೆಲ್ಲಾ ತಯಾರಾಗಿ ರಾಮಿ, ತಮ್ಮ ಜಾತಿಯ ಕಾಚಿನ ಸೀರೆ, ಕಾಂಚಳಿ, ಛಾಂಟಿಯಾ, ಕೂದ್ಲು ಬಾಚಿ ತೊಂಡ್ಲ ಹಾಕೊಂಡು ಮದಮಗಳಂತೆ ಕಾಣ್ತಿದ್ಲು. ಚಿಮ್ಮಿಗೆ ತಡಿಯಾಕ ಆಗದೆ ಇದ್ರು "ಲೇ ನನ್ನ ರಾಜಕುಮಾರಿ, ಮದುಮಗಳಂಗೆ ಕಾಣ್ತಿಯಲ್ಲೇ...... ಬಾ ಬಾಯಿಲ್ಲಿ" ಎರಡು ಕೈಗಳಿಂದ ಕೊರಳನ್ನ ಬಳಸಿ, ರೋದಿಸಿ ಅತ್ಲು. ರಾಮಿಗೆ ಮತ್ತಾಟು ಹಿಂಸೆಯಾಯಿತು. "ನನಗೆ ಬೇಡಕಣೆ, ನಿನಗೆ ಇಲ್ಲದ್ದು" ದೂರ ಹೋಗಿ ಕುಂತ್ಲು. "ಎಲ್ಲಾ, ನಡಿಲೇಬೇಕು ಕಣೆ, ಯಾರು ಸ್ಥಿರವಲ್ಲ ಇಲ್ಲಿ, ಇವತ್ತು ನಾನು, ನಾಳೆ ನೀನು ಹಿಂಗ, ಹೊಗೋರು ಹೋಗ್ತಾನೆ ಇರ್ತಾರ, ಬರೋರು ಬರ್ತಾರ ಇದರ ನಡುವೆ ಈ ಎಲ್ಲಾ ಆಟಗಳು. ನೋಡು ಇವತ್ತು ಹಬ್ಬದ ದಿನ ಖುಷಿಯಿಂದ ಎಲ್ಲರ ಕೂಡ ಮಾತಾಡು, ಬೆರೆತು ನಗು ನನ್ನಿಂದಾಗಿ ನೀನು ಉದಾಸೀನಳಾಗಿ, ನಿನ್ನ ಪಾಲಿನ ಖುಷಿ ಕಳ್ಕೊಳುದು ನನಗೆ ಇಷ್ಟವಿಲ್ಲ." ಬುದ್ಧಿ ಹೇಳಿದ್ಲು "ಹೋಗೆ ನಮ್ಮವ್ವ, ನನಗೆ ನಿನ್ನಂಗಿರಾಕ ಆಗೋದಿಲ್ಲ, ಭಾರಿಗಟ್ಟಿ ನೀನು, ಎಲ್ಲಾನು ನಗ್ತಾ ನಗ್ತಾನೆ ನುಂಗಿ ಬಿಡ್ತಿಯ ನಿನ್ನ ಒಳಗಿನ ನೋವನ್ನ" ಹುಸಿ ಕೋಪದಿಂದಲೇ ಹೋದ್ಲು ರಾಮಿ. "ಬಾರೆ, ತಗೋ ದೀಪಾ ಎಲ್ಲ ಎಲ್ಲರೂ ಬರ್ರಿ...... ಅಕ್ಕ ಈಗ ದೀಪ ಹಿಡದು ಮೇರಾ ಮಾಡ್ತಾಳೆ, ನೀವೆಲ್ಲಾ ಅವಳ ಹಿಂದಿರಬೇಕು. ಯಾವಾಗಲೂ ಒಂದಾಗಿ ಹೂಂ, ಸುರುಮಾಡ್ರಿನ್ನ" ಹಿಂದಕ ಸರದು ಕುಂತ್ಲು.

ವರ್ಷದಾಡ ಖೋಟದವಾಳಿ ಹಾಲತೋನ ಮೇರ
ವರ್ಷದಾಡ ಖೋಟದವಾಳಿ ಚೆಲುವಾ ತೋನ ಮೇರಾ
ವರ್ಷದಾಡ ಖೋಟದವಾಳಿ ಚಿಮ್ಮಿ ಬಾಯಿತೋನ

ಎಲ್ಲೋ ದೂರದಲ್ಲಿ ಮಾತಾಡ್ತಿರೋ ಹಾಗೆ ಅನಿಸತೊಡಗಿತು. ಏನೋ ಪ್ರತಿಧ್ವನಿ. ಚಿಮ್ನಿ ಯಾವುದೋ ಕತ್ತಲು ಗವಿಯೊಳಗೆ ಕಳೆದು ಹೋಗಿದ್ದಾಳೆ ಅವ್ವ, ಅವ್ವ..... ರಾಮಿ, ರಾಮಿ ತಲೆ ತುಂಬ ಪ್ರತಿಧ್ವನಿಗಳು. ಕಣ್ಣು ಮಂಜಾದಂತೆ, ಆರತಿ ಮಾಡ್ತಿರೋ ಬೆಳಕು ಮಂಜು ಮಂಜಾದಂತೆ, ಚಿಮ್ನಿ, ಚಿಮ್ನಿ ಎಲ್ಲಾ ಕಡೆಯಿಂದ ಅವಳ ಹೆಸರು, ಯಾರು ಯಾರದು...... ತಂಗಿಯರೆಲ್ಲಾ ಚಿಮ್ನಿ ಮಲಗಿದ್ದಾಳೆಂದು ರಾಮಿನ ಕರ್‍ಕಂಡು ನಾಯಕನ ಮನೆಗೆ ಹೋದ್ರು. ಎಷ್ಟೋ ಹೊತ್ತಿನ ಮೇಲೆ ಚಿಮ್ನಿಗೆ ಪ್ರಜ್ಞೆ ಬಂತು. ಮೈಯೆಲ್ಲಾ ಬೆವತಂತೆ, ಬಳಲಿ ಬೆಂಡಾದಂತೆ. ಓ ಎಂಥ ದೊಡ್ಡಗವಿ ಅದು. "ಥತ್, ಇನ್ನೂ ನಾನು ಸತ್ತಿಲ್ವೆ. ಹಾಳಾದ ಸಾವು ಒಳ್ಳೆ ಕಾಟ ಕೊಡುತ್ತೆ ಬಿಡು. ಈ ದೇಹ ಬಿಟ್ಟು ಜೀವ ತಗೊಂಡು ಹೊಂಟೆಹೋಯ್ತು ಅಂದ್ರೆ ಜೀವಕ್ಕೆ ಈ ನಿಸ್ತೇಜ ದೇಹದ ಮೇಲೆ ಇನ್ನೂ ವ್ಯಾಮೋಹ ಹೋಗಿಲ್ಲ ಅನ್ಸುತೆ. ಏನಿದೆ ಈ ಎಲುಬಿನ ಹಂದರದಲ್ಲಿ. ಅಸ್ತಿ ಪಂಜರದ ಮೇಲೆ ಸುಕ್ಕುಗಟ್ಟಿರುವ ಚರ್ಮದ ಹೊದಿಕೆ. ಶಕ್ತಿಹೀನ ದೇಹ, ಕಳೆಗುಂದಿದ ಗುಳಿಬಿದ್ದ ಕಣ್ಣುಗಳು, ಲಬ್ ಡಬ್ ಅಂತೇಳಿ ಉಸಿರಾಡ್ತಿರೊ ಗುಂಡಿಗೆ, ಲೋ ಹಾಳ ಮನಿ ಸಾವೆ ಮುಕ್ತಿಗೊಳಿಸೋ ನನ್ನ ಈ ಜಂಜಾಟದಿಂದ. ನಾಯಿ ಕೂಗು ಸ್ವರ್ಗಕ ಮುಟ್ಟಿತೆ. ಅವಳೆ ಸಮಾಧಾನ ಪಟ್ಟು ಈ ಕಡೆಯಿಂದ ಆ ಕಡೆಗೆ ಮಗ್ಗಲಾಗಲು ಪ್ರಯತ್ನಿಸಿದಳು, ಪ್ರಯತ್ನಿಸುತ್ತಲೇ ಇದ್ದಳು. ಯಾರೋ ಅವಳ ತಲೆಯ ಮೇಲೆ ನಿಂತ ಅನುಭವ. ಗಂಡು ಕಾಣಲು ಸುಂದರವಾಗಿದ್ದಾನೆ. ಯಾರು ಅಂತ ಗುರುತು ಸಿಗುತ್ತಿಲ್ಲ. ನನ್ನ ನೋಡಿ ನಗುತ್ತಿದ್ದಾನೆ. ಆ ನಗು ನನ್ನ ಹೆಣ್ತನಕ್ಕೆ ಸವಾಲೊಡ್ಡಿದಂತಿದೆ. ಎಯ್, ನಿನ್ನ ಯಾರು ಸ್ವೀಕರಿಸೋದಿಲ್ಲ. ಯಾವ ಸ್ಪರ್ಶಕ್ಕೂ ಒಳಗಾಗದ ಹೆಣ್ಣಲ್ಲವೇ ನೀನು. ಎಲ್ಲೂ ಸಲ್ಲುವುದಿಲ್ಲ. ಎಯ್, ಬಾರೆ, ಬಾ ಅವನು ಕರೆಯುತ್ತಿದ್ದ. ಯಾರವನು? ತಿಮ್ಮ, ಕಾಫಿ ತೋಟದಲ್ಲಿ ನಮ್ಮ ಪಕ್ಕದ ಹೆಂಗಸಿನ ಗಂಡ? ಛೇ! ಅವರಿಗಿಂತ ಸುಂದರವಾಗಿದ್ದಾನೆ. ಒಳ್ಳೆ ಗೂಳಿಯಂಗೆ. ಅವನ ಕೈಗೇನಾರುವೆ ಸಿಕ್ಕರೆ... ಎಚ್ಚರವಾದಾಗ ಹಾಸಿಗೆ ಮೇಲೆ ಮಗಲಾಗಲು ಪ್ರಯಾಸಪಡುತ್ತಿದ್ದಳು.

ರಾಮಿ ರಾತ್ರಿಯೆಲ್ಲಾ ನಿದ್ದೆಗೆಟ್ಟು ಹೈರಾಣಾಗಿದ್ಲು. ಒಂದ ಜಂಪ್ ನಿದ್ದೆನಾರು ಮಾಡೋಣ ಅಂದ್ಕೊಂಡು ಮನಿಗ ಬಂದು ನೋಡಿದ್ರೆ ಚಿಮ್ನಿ ಏನಕ್ಕೊ ಶ್ರಮ ಪಡ್ತಿರೋದು ಕಂಡವಳೆ ಓಡಿದ್ಲು. "ಅಕ್ಕಯ್ಯ ಏನಾತೇ, ಯಾಕಿಂಗೆ ತ್ರಾಸ ಪಡಾಕಹತ್ತಿ. ಏನಾತ ನಿನಗೆ" ಕೇಳಿದಳು. "ಓ! ಬಂದ್ಯಾ, ಏನು ಇಲ್ಲ ಕಣೆ ಕೆಟ್ಟ ಕನಸು" ಸುಮ್ಮನಾದ್ಲು.

"ಅಷ್ಟೇನಾ ಬಾ' ಅಂದವಳೆ ಅವಳ ಬಡಕಲು ದೇಹವನ್ನ ಒಮ್ಮೆ ಅಪ್ಪಿಕೊಂಡು ತನ್ನ ಪ್ರೀತಿಯನ್ನ ವ್ಯಕ್ತಪಡಿಸಿದಳು. "ಲೇ ಜಾಸ್ತಿ ಹಚ್ಕೊಳಾಕ ಹೋಗಬ್ಯಾಡ ಈ ಒಣ ಮರಾನ, ಒಳಗಡೆ ಅಲುಗಾಡ್ತಿರೊ ಜೀವ ಬಿಟ್ಟು ಹೋಗಾಕಿಲ್ಲ ನೋಡು" ನಗಾಕ ಪ್ರಯತ್ನಪಟ್ಟಳು. "ಏಯ್, ಸುಮ್ನಿರೆ, ಇಷ್ಟುಬೇಗ ನಿನ್ನ ನಮ್ಮಿಂದ ದೂರ ಮಾಡೋಕೆ ಯಾರಿಂದ ಸಾಧ್ಯವಿಲ್ಲ" ಆಕಳಿಸಿದ್ಲು. "ಹೋಗು ರಾತ್ರಿಯೆಲ್ಲಾ ದೀಪ ಹಿಡದು ಸುಸ್ತಾಗಿಯ, ಆಟ ಮಲಗು, ನಂದೇನು ಇವತ್ತಿಲ್ಲ ನಾಳೆ ಆರಿಹೋಗುವ ದೀಪ" ಅಂದವಳೆ ಕುಂತ್ಕೊಂಡ್ಲು. ರಾಮಿ ಅಲ್ಲೇ ಹಾಸಿದ್ದ ಗೋಣಿ ಚೀಲದ ಮೇಲೆ ಅಡ್ಡಾದ್ಲು. ದೇಹಬಡವಾದ್ರು ಚೈತನ್ಯ ಮಾತ್ರ ಕುಂದಿರಲಿಲ್ಲಾ. ನಾನು ಏನು ಮಾಡಲಿಲ್ಲ ಈ ಮನಿಗ ಅನ್ನೋ ಕೊರಗು ಇದ್ದೆ ಇತ್ತು. ಉಳಿಕೆ ದಿನಗಳು ಬಾಳ ಕಡಿಮೆ. ಅಷ್ಟರೊಳಗೆ ರಾಮಿ, ಸಾಂತಿ ಇನ್ನೊಂದಿ ಬ್ಬರು ಮದ್ವಿ ಆದ್ರೆ ಕಣ್ತುಂಬಾ ನೋಡಿ ನೆಮ್ಮದಿಯಿಂದ ಸತ್ತು ಹೊಕ್ತೀನನೋಡು. ಇರೋ ಒಂದೀಟು ಹೊಲದಾಗ, ಏನಂತ ಮಾಡ್ತಾನೆ ಅಪ್ಪ. ನೆನಪಮಾಡ್ಕೊಂಡ್ರೆ ಹೆದರಿಕೆ ಆಗುತ್ತೆ, ಈ ಹಿಂಡು ಹೆಣ್ಣು ಹುಡುಗರ ಭವಿಷ್ಯನಾದ್ರೂ ಏನು? ಹೋಗಲಿ ಬಿಡು, ಯಾವನಾರು ಕಟ್ಕೊಂಡ ಓಡಿಹೋದ್ರೆ ಅವನೆ ಅಳಿಯ ಆಗ್ತಾನ. ಎಷ್ಟು ಜನ ಹಿಂಗ ಮಾಡ್ಯಾರು. ನಮ್ಮ ಮನಿ ಮರ್ಯಾದೆ ಏನಾಗಬ್ಯಾಡ. ಹುಲಿಗಳಂತ ಅಣ್ಣಂದಿರು, ದೊಡಪ್ಪ ಅವರ ಬಗ್ಗೆ ಮಂದಿ ಏನಂದುಕೊಂಡಾರು. ನಾನರು ಬದಕಿದ್ರೆ ಎಲ್ಲರ ಮದ್ವಿ ಆದ ಮ್ಯಾಲ ಯಾವಾನಾರು ಒಪ್ಪಿ ಬಂದ್ರೆ ಮದವಿ ಅಕ್ಕಿದೆ. ಆಲೋಚನೆಗಳಿಗೆ ಕೊನೆ ಅನ್ನೋದೆ ಇರ್ಲಿಲ್ಲಾ. ಅಲ್ಲ ಹಾಳು ಮನಿರೋಗಕ್ಕೆ ಹೊತ್ತು ಗೊತ್ತು ಅನ್ನೋದೆ ಇಲ್ಲ. ಒಂದು ಐದೋ ಹತ್ತ ವರ್ಷ ತಡವಾಗಿಯಾದರೂ ಬರಬಾರದಿತ್ತೆ. ಒಂದ ಐದ ಮಂದಿ ತಂಗಿಯರದಾರು ಮದ್ವಿ ಮಾಡಿ ಮುಗಿಸ್ತಿದ್ದೆ. ಅಪ್ಪನ ಅರ್ಧ ಸಾಲ ತೀರಿಸಿ, ಭಾರ ಕಡಿಮೆ ಮಾಡ್ತಿದ್ದೆ. ಅಪ್ಪನಿಗೂ ತಿಕ್ಲು. ಒಂದೆರಡು ಹೆಣ್ಣುಹುಡುಗಿಯರ ಹುಟ್ಟಿದ ತಕ್ಷಣ ಅದೇನೊ ಅಪರೇಷನ್ ಅಂತೆ ಮಾಡ್ಕಂಡಿದ್ರೆ ನಾವಿಬ್ಬರೆ ಅಕ್ಕ ತಂಗಿ ಸುಖವಾಗಿರ ಬಹುದಾಗಿತ್ತು. ಏನೆ ಕಾಯಿಲೆಗಳು ಬಂದಿದ್ರು ಇಷ್ಟೊಂದು ಕಷ್ಟ ಪಡೋ ಜರೂರಿರಲಿಲ್ಲಾ. ಒಂದಾದ ಮೇಲೆ ಒಂದು ಸಾಲದಕ್ಕೆ ಎರಡನೇಯ ಮದುವೆ ಬೇರೆ ಕೇಡು. ಅವರವ್ವ ಘಾಟಿ ಮುದಕಿ ಅರ್ಧ ತಲೆ ತುಂಬಿದಳು. ಅವನ ತಂಗಿ ಕುಂಟಿ ಅರ್ಧ ಕೆಡಿಸಿದ್ಲು ಊರಾನ ಮಂದಿ ಮಾತು ಎಲ್ಲಾ ಸೇರಿ ಅವನ ತಲಿಮ್ಯಾಲ ಕಲ್ಲು ಚಪ್ಪಡಿ ಎಳ್ಕೊಂಡದಲ್ಲದೆ ನಮ್ಮ ತಲಿಮ್ಯಾಲೂ ಚಪ್ಪಡಿ ಎಳದ. ಒಂದ ವೇಳೆ ಅವನೇ

ದುಡ್ಡಿದ್ದೋನಾಗಿದ್ರೆ ಅದೆಲ್ಲೋ ಬೆಂಗಳೂರಂತೆ ಅಲ್ಲಿಗೆ ಕರ್‍ಕೊಂಡ ಹೋಗಿ ವಾಸಿ ಮಾಡಿಸ್ತಿದ್ದ. ನನ್ನ ಹಿಂಗೆ ಕೊಳಿಯಾಕ ಬಿಡ್ತಿರಲಿಲ್ಲಾ. ಅವನ ಪ್ರತಿಷ್ಠೆಗೆ ಜಗತ್ತು ನೋಡದ ನಾವು ಬಲಿಯಾಗಬೇಕು. ಇದ್ಯಾವ ನ್ಯಾಯ?

ಹೆಂಡದ ನಶೆಯೊಳಗೆ ಹೆಂಡ ಜೊತೆಗೆ ಕೂಡಿಕೊಂಡಾಗ ಗಟ್ಟಿಗೊಂಡ ಪಿಂಡಗಳು ನಾವು. ಇದ್ರಾಗ ಪ್ರೀತಿ ಅನ್ನೋದು ಲವ ಲೇಷವೂ ಕಾಣಂಗಿಲ್ಲ. ತಾನೊಬ್ಬ ಮಹಾಪುರುಷ ಅಂತ ಜಗತ್ತಿಗೆ ಸಾಬೀತು ಪಡಿಸೋದಕ್ಕೆ ವರ್ಷಕ್ಕೆ ಒಂದು ಹೆರಿಗೆ ಮಾಡಿಸಿದ. ಅವ್ವಗೆ ಯಾವ ಘನತೆ ಇದೆ ಈ ಮನೆಯೊಳಗೆ? ಎರಡನೇ ಮದುವೆ ಮುಂಚೆ ಒಂಚೂರು ಪ್ರೀತಿಯಿಂದನಾರು ಮಾತಾಡಿಕೊಂಡಿದ್ನೇನೊ. ಈಗಂತೂ ಆ ಮಾಟಗಾತಿ, ಈ ಮನಿಗ ಬರೋದಕ್ಕೂ ಬಿಡಂಗಿಲ್ಲ. ನಮ್ಮ ಹೇಲು-ಉಚ್ಚೆ ಬಳದು ಸಾಕಿದ್ದು ಸಾಲದಕ್ಕೆ ಮತ್ತೊಬ್ಬಾಕಿ ಬಾಣಂತನಾನು ಈಕೇನೆ ಮಾಡಬೇಕು. ಆ ಸೌತಿ ಏನಾರು ಕಿವಿ ಊದಿದರೆ ಮೂಳೆ ಮುರಿತಿದದ್ದು ನಮ್ಮವ್ವನವು. ಮುಂಜಾನೆ ಒಂದರೊಟ್ಟಿ, ಮಧ್ಯಾಹ್ನ ಆಟಕೂಳುಂಡು ಸಂಜಿಗ ಅವನಾಗಿ ತಂದ್ರ ಅರ್ಧಬಾಟಲ ಹೆಂಡ. ಇಲ್ರಿಕ್ರ ಏನೈತೊ ಉಂಡ್ಕಂಡು ಹಳೇ ದಿನದ ನೆನಪುಗಳನ್ನೆ ಮೆಲಕು ಹಾಕುತ್ತ ನಮ್ಮ ಭವಿಷ್ಯದ ಕನಸು ಕಾಣುತ್ತ ಮಲಗಿಬಿಡ್ತಾಳೆ. ಒಮ್ಮೊಮ್ಮೆ ಕನಸಿನೊಳಗೆ ನಗ್ತಾಳೆ, ಅಳ್ತಾಳೆ, ಏನೇನೊ ಬಡಬಡಿಸುತ್ತಾಳೆ. ಅವ್ವನ ಮೇಲೆ ಮರುಗಬೇಕೋ, ಅಸಹ್ಯಪಡಬೇಕೋ ಒಂದು ತಿಳಿಯಲ್ಲ. ಅವತ್ತೆ ಅಪ್ಪನ್ನ ಹದ್ದುಬಸ್ತಿನೊಳಗೆ ಇಟ್ಕಂಡಿದ್ರೆ. ಬಹುಶಃ ಗಂಡೆ ಹೀಗಿರಬೇಕು ಅವಕಾಶವಾದಿ, ರಾತ್ರಿ ಕತ್ತಲೊಳಗೆ ನಡೆಯುವ ಕ್ರಿಯೆಗಳು ಬೆಳಕಿನೊಂದಿಗೆ ಕದ ತಟ್ಟುವ ತನಕ ಬದುಕಲೇಬೇಕು. ಆದರೆ ಈ ಮುಗ್ದ ಮನಸುಗಳ ಪಾಡೇನು. ಯಾವ ಕಪಟ ಅರಿಯದ ತಮ್ಮ ನೆರಳನ್ನೆ ನೋಡಿಯೇ ಬೆಚ್ಚುಬೀಳುವ ನನ್ನ ತಂಗಿಯರ ಪಡಿಪಾಟ್ಲು, ನಾನೇನು ನಿಲ್ಲಲ್ಲ ಬಿಡು, ಯಾಕಿಷ್ಟು ಯೋಚಿಸಬೇಕು. ನನ್ನೊಂದಿಗೆ ಎಲ್ಲವೂ ಮುಗಿದು ಹೋಗೋಲ್ಲ. ಕಾಲ ತನ್ನ ಪಾಡಿಗೆ ತಾನು ನಡಿತಾನೆ ಇರುತ್ತೆ. ನಾವಂದ್ಕೊಂಡೆವೆ ಎಲ್ಲವೂ ನನ್ನಿಂದಲೇ ಅಂತ. ನನ್ನ ಜಾಗಕ್ಕೆ ಮತ್ತೊಂದು ಜೀವ ಬಂದಿರುತ್ತೆ. ಬಹುಶಃ ನನ್ನಿಂದಾಗಿ ರಾಮಿ ಹಿಂಜರಿದಿರಬಹುದು ನಾನು ಹೋದ ಮೇಲೆ ನನಗಿಂತಲೂ ಉತ್ತಮವಾಗಿ ಈ ಮನೆ ನಡೆಸಬಹುದು. ಆ ಭರವಸೆ ನನಗಿದೆ. ತಲೆಯೊಳಗೆ ವಿಚಾರಗಳು ಜೋಳ ತುಂಬುವ ಹಗೆ ಇದ್ದಂಗೆ, ತಗೆದಷ್ಟು ಆಳ ಹೆಚ್ಚಾಗ್ತಿವೆ. "ಹೂ ಹರಿಯೋದಕ್ಕೆ ರಾಮಕ್ಕನ್ನ ಕಳಸಾಕಂತೆ" ಬೇಬಿ ಬಂದು ಹೇಳಿದ್ದೇ ಅವಳೆ ಎದ್ದು

ಹೊರಟ್ಲು. "ಈಗ ತಾನೆ ಕಣ್ಣು ಮುಚ್ಚಿದ್ಲು ಪಾಪ. ರಾಮಕ್ಕ, ಏಳಲೇ ಹೂ ಹರಿಯಾಕ ಹುಡುಗಿಯರೆಲ್ಲಾ ಹೊಂಟಾರಂತೆ, ಹೌದು, ತಿನ್ನಾಕ ಏನೇನ ತಂದಿ, ತೋರ್ಸು ನಂಗೆ" ಅವಳ ತಿಂಡಿಯ ಪಟ್ಟಣವನ್ನ ಹುಡುಕಾಡ ತೊಡಗಿದಳು. "ಇಲ್ಲೆ ಐತಿ ನೋಡೆ, ಒಂದ ಬಟ್ಲ ಕೊಬ್ಬರಿ, ಮೈಸೂರುಪಾಕ್, ರಸಗುಲ್ಲ, ಸೇಬು. ಲೇ ಅಕ್ಕ ನೀನು ಒಂಚೂರು ಏನಾರು ತಿನ್ನೆ ಅದ್ರಾಗಿಂದ, ನನಗೊಬ್ಬಾಕಿಗೆ ತಿನ್ನಾಕ ಆಗಂಗಿಲ್ಲಾ" ಕೇಳಿಕೊಂಡ್ಲು. "ಇವೆಲ್ಲಾ ನಿನ್ನವು ಕಣೆ, ಹೋಗಿ ತಿನ್ನೋ ಆಟು ತಿಂದ ಬಾ ಉಳದಿದ್ದು ಹಂಚುವಂತೆ, ಈಗಲೆ ಮುಟ್ಟಬಾರ್ದು" ತಿಳಿಹೇಳಿದ್ಲು. 'ಅಯ್ಯ, ಅದ್ರಾಗೇನೈತಿ ಬಿಡೆ, ಆವಾಗ ಹಂಚೋದನ್ನ, ಈಗ ಹಂಚೋದು. ಒಂದೇ ರಾತ್ರಿ ಇಡಿ ನಿದ್ದೆಗೆಟ್ಟು ಆರೋಗ್ಯನ ಹಾಳಾಗಿರುತ್ತೆ ಇದ ಬೇರೆ ಸಿಹಿ ತಿನ್ನೋದು. ಬರೋ ಹುಡುಗರಿಗೆ ಲಾಭ ನೋಡು ಎಲ್ಲಾ ಹುಡುಗಿಯರ ತಾವ ತಿಂತಿವೆ ಬೇವರ್ಸಿಗಳು" ಹುಡುಗರ ಮೇಲೆ ತನ್ನ ಸಿಟ್ಟನ್ನ ಹೊರಹಾಕಿದ್ಲು.

"ಹಿಂಗ್ಯಾಕಂತಿಯೇ, ನಿನಗು ಅಣ್ಣ ತಮ್ಮ ಇದಿದ್ರ ಹಿಂಗ ಯೋಚ್ನೆ ಮಾಡ್ತಿದೆ ಯೇನು? ದೊಡ್ಡಪ್ಪನ ಮಕ್ಕಳು ಬಂದಿರ್ತಾವಪ್ಪ, ಕೊಟ್ಟೋರ ಹತ್ರ ಎಲ್ಲಾ ಇಸ್ಕಂಡ ತಿಂತಾರೆ ಹಾಗಂತ.........ಅವನದಾನಲ್ಲ ಚಿನ್ನು, ಅವನ ಮ್ಯಾಲಂತು ಆ ಮ್ಯಾಗಿನ ಓಣಿಯ ಚವ್ಹಾಣ್ ಹುಡುಗಿಯರು ಜೀವಾನೆ ಬಿಡ್ತವ. ನಂದ ತಗೋ, ನಂದತಗೋ ಅಂತೇಳಿ ಮ್ಯಾಲಬಿದ್ದ ಕೊಡ್ತವೆ, ಯಾರಿಗಬೇಡ ಅನ್ನಾಕ ಆಗುತ್ತೆ ಹೇಳು" ತನ್ನ ತಮ್ಮನ್ನ ವಹಿಸಿಕೊಂಡು ಮಾತಾಡಿದ್ಲು. "ಅವನ ಬಿಡವ್ವ, ಶ್ರೀ ಕೃಷ್ಣ ಇದ್ದಂಗವ್ನೆ, ಅದ್ರ ಹುಡುಗಿಯರಂದ್ರೆ ಅಷ್ಟೇ ಹೆದರಪುಕ್ಲ ಕಣೆ ಅವನು, ಹೆಚ್ಚು ಮಾತಕೂಡ ಆಡಂಗಿಲ್ಲ. ನಮ್ಮ ಹುಡುಗಿಯರ ಕೂಟಾಗ, ಆಟು ಮಾತಾಡ್ತಾನೆ, ಆದ್ರ ಅಪ್ಪಟ ಬಂಗಾರದಂತೋನು ಕಣೆ" ಅವಳು ಅವನ್ನ ಹೊಗಳಿದ್ಲು. "ಹೊತ್ತಾತು ಹೊರಡೆ ಹುಡುಗಿಯರು ಕಾಯ್ತಿರ ಬಹುದು ನಿನ್ನ, ಮದ್ಲು ನಾಯಕನ ಮನಿಗೆ ಹೋಗು ಅಲ್ಲೇ ಇರ್ತಾರ" ತಯಾರಿ ಮಾಡಿ ಕಳುಹಿಸಿದಳು. ಮುಂದಿನ ದೀಪಾವಳಿಗೆ ಯಾರು ಯಾರಿಗೆ ಹೇಳ್ತಾರೋ, ರಾಮಿ ಮದ್ವಿಯಾದ್ರ ಸಾಂತಿ ದೊಡ್ಡೊಳು ಅಕಿ ಸರತಿ ಬರುತ್ತೆ. ಅವಳ ಮದ್ವಿನೂ ಆಯ್ತು ಅಂದ್ರೆ ಅವಳ ಹಿಂದೆ ಒಬ್ಬೊಬ್ಬರೆ ಮನಿಬಿಟ್ಟು ಹೋದ ಮೇಲೆ ಅವ್ವ ಒಬ್ಬಳೆ ಈ ಖಾಲಿ ಮನಿಯೊಳಗೆ ಆವಾಗ ಏನಮಾಡಬಹುದು. ಅವ್ವ ಚಿಗವ್ವನ ಅಡಿಯಾಳಾಗಿರ್ತಾಳೆ. ಇರ್ಲಿಕ್ರ, ಈ ಮನಿಬಿಟ್ಟು ತನ್ನ ಮಕ್ಕಳ ಹತ್ತಿರ ಹೋಗಿ ಅಳಿಯನಿಗೆ ಭಾರವಾಗಿ ಬದಕ್ತಾಳೆ

ಅಷ್ಟೇ. ಯಾಕಂದ್ರ ಅವ್ವ ಈಗ ಮಕ್ಕಳ ಫಲವನ್ನ ಕಳೆದುಕೊಂಡಿದ್ದಾಳೆ. ಅಕೀಗ ಈಗ ಋತುಬಂಧ ಆಗಿ ಪ್ರಕೃತಿ ನಿಯಮದಂತೆ ಇನ್ನು ಅಕಿ ತಾಯಿ ಆಗಲ್ಲ. ಒಂದು ಗಂಡ ಮಗ ಹಡದಾಳು ಅನ್ನೋದಕ್ಕೆ ಈಗಲೇ ನಡದಾಗ ಕಸೂನೇ ಇಲ್ಲಿ ಇನ್ನೇನು ಆದೀತು. ಚಿಗವ್ವನ ಗಂಡಮಕ್ಕಳು ಏನಾರು ಹುಟ್ಟಿದ್ರೆ ಅವರವ್ವ ಅಪ್ಪನ್ನನ ನೋಡ್ಯಾರು ಆವಾಗ ಬೇಡವಾದವಳಂದ್ರೆ ಅವ್ವ. ಇರೋ ಆಸ್ತಿಯನ್ನೆಲ್ಲಾ ಗಂಡುಮಕ್ಕಳಿಗೆ ಹೋದ್ರೆ ಮನಿ ಬಿಟ್ಟು ಬೀದಿಯೊಳಗೆ ಹುಚ್ಚು ನಾಯಿಯಂತೆ ಅವ್ವ ಬದುಕಬೇಕಾಗುತ್ತೆ. ಈ ಮನಿಯನ್ನು ಅವರು ಈಸ್ಕೊಂಡಬಿಟ್ಟಾರೆ, ಅವ್ವನ ಬದುಕು ಅತಂತ್ರ. ಈ ಹದಿಮೂರು ಅನಾಥ ಹೆಣ್ಣು ಮಕ್ಕಳಿಗೆ ತೌರಿನ ಬಾಗಿಲು ಶಾಶ್ವತವಾಗಿ ಮುಚ್ಚಿದಂತೆ. ಚಿಗವ್ವನ ಹೆಣ್ಣು ಮಕ್ಕಳಿಗೆ ಅವರ ತಮ್ಮಂದಿರು, ಅವ್ವ, ಅಪ್ಪ ಸಿಗ್ತಾರೆ. ಇವಕ್ಕೆ? ಇರೋ ಮಟ ಅಷ್ಟೇ, ಆಮೇಲೆ ಸಂಬಂಧಗಳು ಕಿತ್ತು ಹೋಗ್ತಾವೆ. ಮದುವೆ ಆಗಿ ಹೊರಗೆ ಹೋಗುವ ನನ್ನ ತಂಗಿಯರಿಗೆ ಕಾಟೇಬಾರಿ ಶಾಶ್ವತವಾಗಿ ಇಲ್ಲವಾದಂತೆ ಅವರು ಹುಟ್ಟಿದ ಈ ಮನೆ, ಆಡಿ ಬೆಳೆದ ಈ ಅಂಗಳ ಕನಸು ತುಂಬಿದ ಈ ಮನೆ ಎಲ್ಲವೂ ಶೂನ್ಯ. ಬೇರೆ ಹುಡುಗಿಯರಂತೆ ಅಲ್ಲಾ ಅಲ್ವ ನಾವು. ಹೆಂಗೋ ಒಂದು, ಮದುವೆ ಅಂತ ಆದ್ರೆ ಸಾಕು, ಹೆಣ್ಣಿಗೆ ಬೇಕಾದ್ದು ಅದೇ ತಾನೆ. ಮದುವೆಯಾಗಿ ಗಂಡನ ಮನೆಗೆ ಹೋದಾಗಲೇ ಅವಳ ಬದುಕು ಪೂರ್ಣಗೊಳ್ಳುತ್ತೆ.

ಕರಿಹಬ್ಬಕ್ಕೆ ದಾವಣಗೇರಿ ಮಟನ್ ಮಾರ್ಕೆಟಿನಿಂದ ತಂದಿದ್ದ ಕಳ್ಳು ಪಚ್ಚಿಯನ್ನು ಸಣ್ಣಗೆ ಕೋಯ್ದು ಮಸಾಲೆ ಹಾಕಿ ಮಾಡಿದ ಮಾಂಸದ ಸಾರು ಪಾಡಿತ್ತು. ಚಿಮ್ನಿ, ಒಂದುವರೆ ರೊಟ್ಟಿ ತಿಂದಳು, ಯಾಕೋ ಅಜೀರ್ಣ ಅನಿಸಿತ್ತು. ಅವತ ರಾತ್ರಿ ಬಹಳ ಹೊತ್ತಿನವರಿಗೆ ನಿದ್ದೆ ಹತ್ತಿರ ಸುಳಿಯಲಿಲ್ಲ.

"ಇದ್ದಕ್ಕಿದಂತೆ ಏನಾದರೂ ಘಟಿಸಿ ಅಸಂಭವವಾದ್ದು ಸಂಭವಿಸಿದರೆ ಯಾರಾದರೂ ಪುಣ್ಯಾತ್ಮ ನನ್ನ ಈ ನರಳಾಟದ ನರಕದಿಂದ ಬಿಡುಗಡೆಗೊಳಿಸಿ ಮತ್ತೆ ನನ್ನನ್ನ ಮೊದಲಿನಂತೆ ಮಾಡಬಿಡಬಹುದೆ? ಅದು ಸಾಧ್ಯವೇ ಅಸಾಧ್ಯ. ಇನ್ನೂ ಕೆಲವೇ ದಿನಗಳು ಉಳಿದಿರಬಹುದು. ಎಲ್ಲವೂ ಮುಗಿದು ಹೋಗಿದೆ ಇನ್ನೇನು ಊಹಿಸಲು ಸಾಧ್ಯವಾದೀತು. ಒಂದುವರೆ ರೊಟ್ಟಿಯನ್ನ ಅರಗಿಸಿಕೊಳ್ಳದ ಸ್ಥಿತಿ. ಎಲ್ಲರೂ ಆರಾಮದಿಂದ ನಿದ್ದೆ ಮಾಡ್ತಿದ್ದರೆ, ನನಗೆ ನಿದ್ದೆಯೂ ಕೂಡ ಹತ್ತಿರ ಸುಳಿಯುತ್ತಾ ಇಲ್ಲ. ಹಾಳ ಎಲುಬುಗಳೆಲ್ಲಾ

ನೋವು, ಅಸಹನೀಯ ನೋವು. ಹೇ, ಪರಮಾತ್ಮ ಯಾವ ಜನ್ಮದ ಸೇಡನ ತೀರಿಸಿಕೊಳ್ತಿದ್ದೀಯ ತಂದೆ ಬಿಡುಗಡೆ ಮಾಡು ನನ್ನ ಈ ನರಕದಿಂದ." ಒಂದೇ ಸಮನೆ ಬೇಡಿಕೊಳ್ಳತೊಡಗಿದಳು. ಇದೆಂಥ ಹಾಳ ರೋಗನೋ, ಒಳಗೊಳಗೆ ಕೊಳೆಯುವಂತೆ ಮಾಡಿಬಿಡುತ್ತೆ. 'ಹೃದಯದ ರಂಧ್ರ, ದಿನೆ ದಿನೆ ದೊಡ್ಡದಾಗ್ತ ಕೆರಿ ಕೋಡಿ ಹೊಡ್ದು ನೀರು ಹೊರಗಹೋದಂಗೆ ರಕ್ತ ಎಲ್ಲಾ ಹೊರಗ ಬಂದ ಮೇಲೆನೆ ನನಗೆ ಬಿಡುಗಡೆ, ಅದು ಈಗ, ನಾಳೆ, ವಾರ, ತಿಂಗಳು ಯಾವಾಗಾದರೂ ಆಗಬಹುದು. ಯಾವಾಗಲಾದರೂ ಆಗ್ಲಿಬಿಡು ಅದಕ್ಕೇನಂತೆ, ಐದೋ ಹತ್ತೊ ನಿಮಿಷದ ನರಳಾಟ ಊರಮುಂದೆ ಕಾರಹುಣ್ಣಿಮೆ ದಿವಸ, ಸಾತುಭವಾನಿ, ಕಲ್ಲುಗಳಿಗೆ ಕೆಮ್ಮಣ್ಣು ಬಳಿದು ನಿಲ್ಲಿಸಿ, ಕೋಳಿ, ಹುಂಜಗಳನ್ನ ಬಲಿಕೊಡೊ ಮುಂದೆ ಚೆಂಡುಕೋಯ್ದು, ಹಾರಾಡೋದಕೆ ಬಿಸಾಕಿದಾಗ ಐದು ನಿಮಿಷ ಆಕಡೆ, ಈಕಡೆ ಹಾರಡಿ, ಹಾರಾಡಿ ಅಲ್ಲೇ ನಿಸ್ತೇಜಗೊಂಡ ದೇಹವನ್ನ ತಂದು, ಪುಕ್ಕಸುಲಿದು ಬೆಂಕಿಗೆ ಕಾಸಿ ಕಳ್ಳು ಪಟ್ಟಿ ತಗದು ಬಿಸಾಡಿ ಅಡುಗೆ ಮಾಡಿ ತಿನ್ನಲ್ವೆ. ಸಣ್ಣೋರಿದ್ದಾಗ ನೋಡೋದಕ್ಕೆ ಮಜ ಬರ್ತಾ ಇತ್ತು. ಅಲೇಲೆ ಜಿಮ್ರುನ ಹುಂಜ ನೋಡೆ ಹೆಂಗೆ ಹಾರಾಡ್ತಾ ಐತೆ ಅನ್ನೋದು ಸಾಂಬಂದು, ಬೀಮ್ಲಂದು........ ಅವತ್ತು ಮೋಜಿನ ಆಟವಾಗಿತ್ತು, ಈಗ ಅದು ಭಯಾನಕ ದೃಶ್ಯ. ಅಲ್ಲ ಈ ಜೀವ ಹೆಂಗಾರು ಹೊಕ್ಕೀದೀತು ಅಂತೀನಿ ರುಂಡ ಕೊಯ್ಯಲ್ಲ, ಗಾಯ ಆಗಲ್ಲ, ಎಲ್ಲಿಂದಾರು ಹೊಗಲಿಬಿಡು ಹೋದಾಗ ನೋಡ್ಕಂಡ್ರಾತು.

ನಿದ್ದೆ ಬಂದಿದ್ದೆ ಗೊತ್ತಾಗಲಿಲ್ಲಾ ಮುಂಜಾನೆ ಕಣ್ಣು ಬಿಟ್ಟಾಗ ಮನಿ ತುಂಬ ಬೆಳಕಿತ್ತು. ರಾಮಿ ತಯಾರಾಗ ಕುಂತಿದ್ಲು. "ಯಾಕೆ? ಮನ್ನೆನಾರು ದೀಪಾವಳಿಗ ಉಟ್ಕೊಂಡ ಬಟ್ಟೆನೆ ಹಾಕ್ಕೊಂಡಿಯ ಏನ್ಸಮಾಚಾರ" ಕುತೂಹಲದಿಂದ ಕೇಳಿದ್ಲು. "ಏನೂ ಇಲ್ಲ ಬಿಡೆ ಯಾವನೋ ನೋಡಕ ಬರ್ತಾನಂತೆ, ಹೋಗಬೇಕಲ್ಲವ್ವ ಅವನ ಮುಂದೆ ಅದೆಂಗದಾನೋ, ಏನ ಅವನೆ ಬರ್ತಾನ, ಅವರವ್ವ ಅಪ್ಪ ಬರ್ತಾರೊ ಯಾರಿಗೊತ್ತು?" ಆಸಕ್ತಿ ಇಲ್ಲದೇ ಮಾತಾಡ್ತಿದ್ಲು. "ನಿಜವೇನೆ, ಓ ದೇವರೆ, ಗಡಾನೆ ಇವಳ ಮದುವೇ ಮಾಡ್ಸಪ್ಪ, ಕಣ್ಣು ತುಂಬ ನೋಡಿ ನಿನ್ನ ಪಾದ ಸೇರ್ತಿನಿ. ಬಾರೆ, ಬಾರೆ..... ಇಷ್ಟು ಖುಷಿ ಆಗ್ತಿದೆಯಲ್ಲಾ ಈ ಖುಷಿಯೊಳಗೆ ನನ್ನ ಎದಿಹೊಡೆದು ಹೋಗೋ ಹಂಗಾಗ್ತಿದೆ" ಬಿಗಿಯಾಗಿ ಅವಳನ್ನ ಅಪ್ಪಿಕೊಂಡ್ಲು. "ಅಕ್ಕ, ಮೆಲ್ಲಗೆ ಸುಧಾರಿಸಿಕೋ, ಸುಮ್ನಿರೆ ನಮ್ಮವ್ವ, ನನ್ನ ಜೀವಾನೆ ಹೋಗಿತ್ತು. ಎಂಥ, ದೊಡ್ಡ ಗುಣಾನೆ ನಿಂದು. ನಿನಗ ಸಿಗದ ಸುಖ

ನನಗ ಸಿಕ್ಕರೂ, ನೀನೆ ಖುಷಿಪಟ್ಟಂಗೆ ಆಡ್ತಿಯಲ್ಲೇ, ನಿನಗ ನಾನು ಯಾವ ರೀತಿ ಧನ್ಯವಾದ ಹೇಳಲಿ, ನಿನ್ನ ಋಣಾನ ಯಾವ ಜನ್ಮದಾಗ ತೀರಿಸಲಿ." ರಾಮಿ ಬಾಯಿಯಿಂದ ಮಾತುಗಳೆ ಹೊರಡಲಿಲ್ಲ. "ನಾನು ಯಾವತ್ತು ಅದನ್ನ ಬಯಸಲೇ ಇಲ್ಲಾಕಣೆ, ನಾನು ಬದುಕಿದ್ರು ನಿಮ್ಮೆನೆಲ್ಲಾ ನೆಮ್ಮದಿಯಿಂದ ಇರೋದನ್ನ ನೋಡೋದೆ ನನ್ನ ಕನಸಾಗಿತ್ತು. ನನಗೊಂದು ಸಹಾಯ ಮಾಡ್ತಿ ಏನೆ" ದೈನ್ಯದಿಂದ ಕೇಳಿದ್ಲು. "ಹೇಳೆ , ನಿನ್ನ ಮಾತಿಗೆ ಯಾವಾಗ ನಾನು ಇಲ್ಲ ಅಂದಿನಿ ಹೇಳು. ನಿನ್ನ ಸಲುವಾಗಿ ನನ್ನ ಪ್ರಾಣ ಬೇಕಾರು ಕೊಡ್ತಿನಿ" ಉದ್ವೇಗಗೊಂಡಿದ್ದಳು ರಾಮಿ. "ಹುಚ್ಚಿ, ಪ್ರಾಣಗೀಣ ತಗಿಯೊಂತಾದ್ದೇನಲ್ಲ ಅವ್ವಗ ಹೇಳು ಒಂದ ತಿಂಗಳೊಳಿಗೆ ಮದ್ವೆ ಮಾಡ್ಕೊಳೋದಕ್ಕೆ ಹೇಳಂತ. ನಿನ್ನದೊಂದಾದ್ರು ಮದ್ವೆಯನ್ನ ಕಣ್ತುಂಬ ನೋಡಿ ಸಾಯ್ತಿನಿ ಕಣೆ". ಎದೆಯಾಳದೊಳಗೆ ಅಡಗಿದ್ದ ಆಶೆ ಹೊರಗ ಬಂದಿತ್ತು. "ಹೇಳ್ತಿನಿ, ನಿನಗೆ ಖುಷಿಯಾಗುತ್ತೆ ಅಂದ್ರೆ ನಾಳೆನೆ ಮದ್ವಿ ಮಾಡ್ಕೊಂತೀನಿ ನೀ ಏನು ಚಿಂತಿ ಮಾಡಬ್ಯಾಡ" ನಿಲ್ಲಾಕ ಆಗದೆ ಹೊರಗಡೆ ಹೋದ್ಲು.

ಮಂಗ್ಲ್ಯಾನಾಯ್ಕ ಏನಾದರೂ ಒಡಸುಟ್ಟು ತನ್ನ ಮಗಳು ಚಿಮ್ನಿ ಸಲುವಾಗಿ ಹದಿನೈದೆ ದಿನದಲ್ಲಿ ಮದುವೆ ಏರ್ಪಾಟು ಮಾಡಿದ. ಎಲ್ಲೆಲ್ಲ ಸಾಲ ಸಿಗಬಹುದೋ ಅಲೆಲ್ಲಾ ನೂರಿನ್ನೂರು ಅಂತು ಸಾಲಗಾರರ ಹತತ್ರಕ್ಕೆ ಸಾಲ ತಂದಿದ್ದ. ವರನ ಕಡೆಯವರು ಎಷ್ಟು ಜನ ಬರ್ತಾರೋ, ಎಷ್ಟು ದಿನಗಳ ಕಾರೇವು ಇಟ್ಕೊಂತಾರೊ ಅಂದಾಜು ಮಾಡಿದ. ಮನಿಗೆ ಬೇಕಾದ ಕಾಳುಕಡಿ, ಖರೀದಿಸಿ ಹೊಸ ಅರವಿ ಎಲ್ಲಾ ವ್ಯವಸ್ಥೆಯನ್ನ ಮಾಡಿಕೊಂಡ. ಚಿಮ್ನಿ ಸಂತೋಷಕ್ಕೆ ಮಿತಿನೆ ಇರಲಿಲ್ಲಾ. ರಾಮಿಯ ಹಿಂದಿಂದೆ ಅಡ್ಡಾಡ್ತಾ. "ನೋಡೆ, ಮದ್ವಿಯಾದ ಮ್ಯಾಲ, ಗಂಡನ್ನ ದೇವರಂಗ ನೋಡ್ಕಬೇಕು. ಅತ್ತೆ ಮಾವಂದಿರು ಏನೇ ಹೇಳಿದ್ರು ಎದರು ಮಾತಾಡಬಾರದು. ತೌವರ ಮನಿಗ ಯಾವತ್ತು ಕೆಟ್ಟ ಹೆಸರು ತರಬಾರದು. ಪರಪುರುಷನನ್ನ ಯಾವತ್ತು ಕಣ್ಣೆತ್ತಿ ನೋಡಬಾರದು. ವರ್ಷಕ ಒಂದ್ರಂತೆ ಮನಿತುಂಬ ಮಕ್ಕಳನ್ನ ಹಡಿಬೇಕು".......ಏನೇನೋ ಉಪದೇಶ ಮಾಡತೊಡಗಿದಳು. "ಸಾಕಮ್ಮ ತಾಯೆ, ಹಿಂಗೆ ಬಿಟ್ರೆ ಎಲ್ಲಾನೂ ನನ್ನ ತಲೆಗೆ ಹೊರಿಸ್ತೀಯ, ಹೌದು ಈ ತಿಳವಳಿಕೆ ಎಲ್ಲಾ ನೀ ಯಾವಾಗ ಕಲ್ತೆ ಅಂತ" ವಾರ್ಗಣಿಂದ ನೋಡಿದ್ಲು. "ನಾನು ನಿನಗಿಂತ ದೊಡ್ಡೋಳು ಅಟೇಯ, ಎಲ್ಲಿ, ಹೇಗೆ ಕಲಿತೆ ಅಂತೆಲ್ಲ ಕೇಳಬಾರದು. ಹೇಳಿದ್ರಾಗ ತಪ್ಪೇನಾರು ಐತೇನು?" ಅವಳನೇ ದಿಟ್ಟಿಸಿ ನೋಡಿದ್ಲು. "ಇಲ್ಲವ್ವ ಅಂಥದೇನು ಇಲ್ಲ ನನ್ನ ಮುದ್ದಿನ ಅಕ್ಕ ಯಾವತ್ತು ಕೆಟ್ಟದನ್ನ ಕಲಿಸೋದಿಲ್ಲ ನೀನು ಹಾರು ಅಂದ್ರೆ ಕಣ್ಣು

ಮುಚ್ಚಿ ಹಾರ್ತಿನಿ ಕಣೆ ಅಷ್ಟು ಭರವಸೆ ಐತೆ ನಿನ್ನ ಮೇಲೆ, ಇದೆಲ್ಲಾ ಯಾವ ಲೆಕ್ಕ" ಭರವಸೆ ಹುಟ್ಟಿಸಿದ್ನು. "ಆದ್ರ, ನಿನ್ನ ಮಕ್ಕಳನ್ನ ನೋಡ್ತಿನೋ ಇಲ್ವೋ ಅನ್ನೋದೊಂದೆ ಕೊರಗು" ಖಿನ್ನಳಾದಳು. "ನೀನು ಮಹಾ ಗಟ್ಟಿ ಮರಾಯ್ತಿ, ನಿನ್ನ ಆ ಆಶೆಯೂ ಈಡೀರುತ್ತೆ ಗಪ್ಪಾಗಿನ್ನ, ಹೆಚ್ಚು ಮಾತಾಡಿ ಸುಸ್ತ ಮಾಡ್ಕಬೇಡಾ" ಅವಳ ಕೈ ಹಿಡಿದು ಒತ್ತಿದ್ನು.

ಸೇವಾಬಾಯನ ಗುಡಿ ಎದುರಿಗೆ, ಹುಡುಗನ ಕಡೆಯವರಿಗೆ, ಹುಡುಗಿಯ ಕಡೆಯವರಿಗೂ, ಹಾಡಿನ ಚಕಮಕಿ ನಡೆದಿತ್ತು. ಹುಡುಗಿಯ ಕಡೆ, ಹೆಚ್ಚು ಹುಡುಗಿಯರಿ ದಿದ್ದರಿಂದ ಇವರ ಬಾಯಿಯೇ ಜೋರಾಗಿತ್ತು. ಹುಡುಗ, ಕಿವುಡ, ಮೆಳ್ಳ ಗಣ್ಣಿನವ, ಮೂಗು, ಮೂಸಡಿ, ಅವನ ಚರಿತ್ರೆಯನ್ನೆ ಹಾರಾಜಗಹಾಕಿದ್ರು. ಕಾಟೇಬಾರಿ ತಾಂಡದ ಹುಡುಗಿಯರು, ಅವನ ಅವನ ಅಕ್ಕ, ತಂಗಿ, ತಮ್ಮ ಎಲ್ಲರ ಮಂಗಳಾರಥಿಯೂ ಮಾಡಿಯಾಗಿತ್ತು. ಮಡಿಕೆ-ಕುಡಿಕೆ ತರೋರು ತಂದಿದ್ರು. ಬೆಲ್ಲದ ಶಾಸ್ತ್ರಕ್ಕೆ ಆ ಊರಿನ ಮತ್ತೆ ಕಾಟೇಬಾರಿಯ ಹಿರಿಕರು ಸೇರಿದ್ರು. ಯಾರೋ ಪಂಚಾಂಗ ಹಿಡಿದು ಹುಡುಗಿಯದು, ಹುಡುಗನ ರಾಶಿ, ಕುಂಡಲಿ ನೋಡಿ ಮಾಮೂಲು ಸೇರಪಾವು, ಜೋಳ, ಕುಡಿಕೆ ಬೆಲ್ಲ ಒಂದ ಮಡಿಕೆ ಹೆಂಡ ತಗೊಂಡಾಗಿತ್ತು. ಹುಡುಗ ಕುದುರೆ, ಹುಡುಗಿ ಜಿಂಕೆ, ಹಿರಕರೆಲ್ಲಾ ಒಪ್ಪಿಗೆ ಸರಿಯಾಗೆ ಐತೆ ಅಂತೇಳಿ ಒಪ್ಪಿದ ಮೇಲೆ ಬೆಲ್ಲಾ ಹಂಚಿ, ಬೀಗರ ಮೇಲೆ ಬಣ್ಣದ ಓಕುಳಿ ಚೆಲ್ಲಿದ ಮೇಲೆ ಊಟಕೆ ಹೊರಟರು. ಸಾಂತುನಾಯ್ಕ ತನ್ನ ಮನೆಯೊಳಗೆ ಗೋಧಿ ನುಚ್ಚು ಬೀಸಿ ಮಾಡಿದ ಹುಗ್ಗಿ, ಅವರ ಗದ್ದೆಯಲ್ಲೇ ಬೆಳದಿದ್ದ ಜಯಾಭತ್ತದ ಅನ್ನ ಸಾರು ಮಾಡ್ಸಿದ್ದ. ಬಂದ ಬೀಗರೆಲ್ಲಾ ಊಟ ಮಾಡಿ, ಹುಡುಗನ ಕೊತ್ಲೋದಿಂದ ಎಲೆ ಅಡಿಕೆ ತಿಂದಾದ ಮೇಲೆ ಅವರ ಶಾಸ್ತ್ರದ ಪ್ರಕಾರ ಕಾರೇವು ಆರಂಭಗೊಂಡಿದ್ದವು. ಮಡಿಕೆ ಕಟ್ಟುವುದು, ಹುಡುಗನಿಗೆ ಎರಡು ಮದುವೆ ಸ್ನಾನ, ಹುಡುಗಿಗೆ ಎರಡು ಮದುವೆ ಸ್ನಾನ, ಹುಡುಗಿಯ ತಾಯಿ ಹುಡುಗನ ಜುಟ್ಟಿಂದ ಬೀಳುವ ನೀರು ಕುಡಿಯುವುದು. ಖಾಸಡ ಬಚ್ಚಿಟ್ಟ ನಾದನಿಗೆ ದುಡ್ಡುಕೊಟ್ಟು ತಂದ ಮೇಲೆ, ಅಳಿಯನಾದವನು ಮಣ್ಣಿನ ತಟ್ಟೆಯನ್ನ ಜೋರಾಗಿ ಅವನ ಕಾಲಡಿಗೆ ಒಯ್ಯುವುದು ಹೊರಗಡೆ ತರುವುದು ಮಾಡ್ತಾನೆ. ಅದನ್ನ ಎಡ ಕಾಲಿಂದ ಕಸುಕಿತ್ತು ಅದನ್ನ ಹೊಡೆಯುತ್ತಾನೆ. ಚಿಗಪ್ಪನಿಗೆ ಗಂಡು ಮಕ್ಕಳೇ ಇಲ್ಲದಕ್ಕೆ ನನ್ನಣ್ಣನೆ ಆ ಕೆಲ್ಸ ಮಾಡಿದ. ಮುಂದೆ ಹುಡುಗಿ ಅಣ್ಣಾ ಅವಳಿಗೆ ಕುಂಕುಮ ಕೊಡುವ ಶಾಸ್ತ್ರವನ್ನು ಅವನೆ ಮಾಡಿದ.

ಮೂರು ದಿನಗಳಲ್ಲಿ ಮದುವೆ ಮುಗಿದಿತ್ತು. ರಾಮಿಗೆ ದುಃಖವಾಗ್ತಿದಿದ್ದು ತೌರುಮನೆ ಬಿಟ್ಟು ಹೋಗ್ತಿರೋದಕಲ್ಲಾ, ಅವಳನ್ನ ಅಣ್ಣನಂತೆ, ತಂದೆಯಂತೆ, ತಾಯಿಯಂತೆ ಸಲುಹಿದ ಅಕ್ಕ ಚಿಮ್ನಿ ಸಾಯುವಾಗ ಅವಳ ಹತ್ತಿರ ತಾನು ಇರುತ್ತಿಲ್ಲ ಅನ್ನೋದಕ್ಕೆ ಅತ್ತು ಅತ್ತು ಧ್ವನಿ ಇಲ್ಲದಾಗಿತ್ತು. ಎರಡು ಮೂರು ಸಾರಿ ಮೂರ್ಛೆ ಹೋಗಿದ್ಲು. ಒಳಗೊಳಗೆ ನೋವನ್ನ ನುಂಗಿಕೊಂಡು ನಿರ್ಲಿಪ್ತಳಾಗಿ ಗಮನಿಸುತ್ತಿದ್ದ ಚಿಮ್ನಿಯ ರಕ್ತದೊತ್ತಡ ಮೂರ್‍ನಾಕು ಬಾರಿ ಹೆಚ್ಚು ಕಡಿಮೆಯಾಗಿ ಹೋದ ಜೀವವನ್ನ ಬಹು ಪ್ರಯಾಸದಿಂದ ವಾಪಾಸು ತಂದಿದ್ಲು. "ಈಗ ಹೋಗೋ ಹೊತ್ತು ಬಂತು ಅಂತಕಾಣುತ್ತೆ ಹಾಳಮನಿ ಸಾವೆ, ಇಷ್ಟು ದಿನಾನೇ ತಡದೀಯ ಇನ್ನೊಂದು ಎರಡ ದಿನ ತಡಿಬಾರದೆ. ನನ್ನ ತಂಗಿ ಮನೆಯಿಂದ ಗಂಡನಮನಿಗೆ ಹೋಗ್ತಿದಂಗೆ ನಾನು ನಿನ್ನ ಕೂಡ ಬರ್ತಿನಿ". ಔಡುಗಚ್ಚಿ ಮಂಜಾಗುತ್ತಿರುವ ಕಣ್ಣುಗಳನ್ನ ಅತಿ ಪ್ರಯತ್ನಪೂರ್ವಕವಾಗಿ ತಗದು ಪ್ರತಿಯೊಂದು ಕಾರ್ಯಗಳನ್ನ ನೋಡುವ ಪ್ರಯಾಸಪಡುತ್ತಿದ್ದಳು.

ರಾಮಿಯ ವಿದಾಯಕ್ಕೆ ಎಲ್ಲಾ ತಯಾರಿ ನಡೆಯುತ್ತಿದ್ದವು. ನಾಕೈದು ಬಂಡಿಗಳು ಹನ್ಮಂತ ದೇವರ ಗುಡಿ ಮುಂದೆ ಸಜ್ಜಾಗಿದ್ವು. ತಾಂಡದ ಹೆಂಗಸರೆಲ್ಲಾ ಮದುಮಗಳ ವಿದಾಯಕ್ಕೆ ಹಾಡು ಹೇಳುತ್ತ ದೇವರ ಗುಡಿಗಳಿಗೆ ಕೊನೆಯ ನಮಸ್ಕಾರ ಹೇಳ್ತಾ ಹಿರಿಯರ ಆಶೀರ್ವಾದ ಪಡಿತಾ ಬಹಳ ಪ್ರಯಾಸದಿಂದ ಬರ್‍ತಾ ಇದ್ರು. ಹೊರಗ ತಗಿಯಾಕ ಧನಿ ಇಲ್ಲದೆ ಎರಡು ಸಲ ಮೂರ್ಛೆ ಹೋಗಿದ್ಲು ರಾಮಿ. "ಹಿಂಗಾದ್ರ ಹೊತ್ತು ಮುಳಗತ್ತೈತೆ, ದಿಬ್ಬಣ ಸೇರೋದು ಯಾವಾಗ? ಎತ್ಕಳ್ರಿ ಹುಡುಗಿನ ನಡೀರಿ" ಹಟ್ಟಿ ನಾಯಕ ಗದರಿಸಿದ. "ಇರ್ಲಿ ಬಿಡ್ರಿ, ಇನೇಷ್ಟೋತ್ತು ಇದ್ದಾಳು ಶಾಶ್ವತವಾಗಿ ಈ ಊರನ್ನ ಬಿಟ್ಟೆ ಹೊಂಟಾಳ" ಅವಳ ದೊಡ್ಡವ್ವ ಮನವಿ ಮಾಡಿದ್ಲು. "ಹಂಗಲ್ಲವ್ವ ವಿಷಯ ಸೂಕ್ಷ್ಮವಾಗೈತೆ ಯಾವ ಕ್ಷಣದಾಗ ಏನಾದೀತು ಅನ್ನೋ ಹೆದರಿಕೆ" ಹಟ್ಟಿ ನಾಯ್ಕ ಸೂಕ್ಷ್ಮತೆಯ ಅಂದಾಜನ್ನ ತಿಳಿಸಿದ.

ಒತ್ತಾಯದಿಂದ ರಾಮಿಯನ್ನ ಬಂಡಿ ಹತ್ತಿಸಿ ಜುಕ್ಕ ಜುಲ್ಮಿಯಿಂದ ಕೆಳಗೆ ಕುಂದ್ರಿಸಿದರು. ಹಿಡ್ಕೊಂಡವರ ಮೇಲಿಂದ ಕೆಳಗೆ ಜಿಗಿಯುವ ಪ್ರಯತ್ನ ಮಾಡಿದ್ಲು. "ಅರೇ, ನಿಲ್ಸೋ ಬಂಡಿನಾ ಗಾಲಿಯೊಳಗ ಬಂದ ಬಿಟ್ಲು". ಚಕ್ಕಡಿಗಾಡಿ ಹೊಡಿತ್ತಿದ್ದ ಅವಳ ಹಿರಿಯಣ್ಣ "ಈ ಹುಡುಗೀದ, ಭಾರಿ ಆತ ಬಿಡಪ್ಪ.......ಹೋ..ನಂದಿ, ಕುರವೆತ್ತಿ

ಹೋ...ಯವಾಗ ಏನೂಂತ ಹೆದರಿಕೆ ನಮಗೆ". ಅಂತೇಳಿ ಗಾಡಿ ನಿಲ್ಸಿದ. ರಾಮಿ ಜೀವ ಇಲ್ದಂಗೆ ನಿಸ್ತೇಜಳಾಗಿ ಬಿದ್ಲು. ಅಲ್ಲಿ ಚಿಮ್ನಿ, ಎರಡು ಕ್ಷಣ 'ರಾಮಕ್ಕ' ಅಂತ ಉಸರು ತಗದವಳೆ ಹೆಣವಾಗಿದ್ಲು. ಗಾಡಿಗಳು ತಮ್ಮ ಪಾಡಿಗೆ ತಾವು ಹುಡುಗನ ಊರು ತಲುಪಿದವು. ಕಾಟೇಬಾರಿ ತಾಂಡಕ ತಾಂಡಾನೇ ರವರವಾ ಅಂತಿತ್ತು. ಚಿಮ್ನಿ ಅನ್ನೋ ಪಾದರಸದಂತ ಹುಡುಗಿ ಕನಸು ತುಂಬಿದ ಕಣ್ಣುಗಳನ್ನ ಬಿಟ್ಕಂಡು ಕಾಟೇಬಾರಿ ತಾಂಡಕ್ಕೆ ಕೊನೆಯ ವಿದಾಯ ಹೇಳಿದ್ಲು.

ರಾಮಿಗೆ ಅಳಾಕೆ ಕಣ್ಣೀರು ಸಹ ಇರ್ಲಿಲ್ಲಾ ಶೂನ್ಯವನ್ನ ದಿಟ್ಟಿಸುತ್ತಾ "ಅಕ್ಕ, ಅಕ್ಕ" ದೂರದಲೆಲ್ಲೋ ಪ್ರತಿಧ್ವನಿ ಕೇಳಿಸದಂಗೆ, ಎಲ್ಲೂ ಕಾಣದ ದೂರದ ಲೋಕ ಒಂದರಲ್ಲಿ ಲೀನಳಾಗಿದ್ಲು. ಚಿನ್ನಿಬಾಯಿ ಎಳಾಕ ಆಗದೆ ಮಲಗಿದ್ಲು, ಅವಳಪ್ಪ ಮಗಳ ಅಗಲಿಕೆಯನ್ನ ಸಹಿಸಿಕೊಳ್ಳಾಕ ಆಗದೆ ಹೆಂಡ ಕುಡಿಯುತ್ತಿದ್ದ. ಬದಕು ಯತಾವತ್ತಾಗಿ ಸಾಗ್ತಾಯಿದೆ.

ಚಿಮ್ನಿ ಸತ್ತು ಎಷ್ಟೋ ವರ್ಷಗಳಾದವು. ಅವಳನ್ನ ಒಂದೇ ಕಟ್ಟಿಗೆಯ ಮೇಲೆ ಹೆಡ ಮುರಗಿ ಕಟ್ಕೊಂಡು ಹೋಗಿ ತಾಂಡದ ಮುಂದಿನ ಈಚಲೊಳಗ ಆರಡಿ ಮೂರಡಿ ನೆಲ ಬಗದು ಮಣ್ಣಾಗ ಹೂತ ಬಂದ್ರು. ಯಾಕಂದ್ರ ಹರೆದ ಹುಡುಗಿ ಆಶೆಗಳು ಬಹಳ ಇದ್ವು, ಸತ್ತು ದೆವ್ವ ಆಗಿ ಇಡಿ ತಾಂಡನೇ ನಾಶ ಮಾಡ್ತಳಂತೆ ಕೆಲವರ ವಾದ. ಇನ್ನೂ ಕೆಲವರು ಛೇ, ಛೇ, ರೋಗದಲ್ಲಿ ಕರಗಿ ಇದೇ ಜನ್ಮ ಸಾಕಂತ ಜಿಗುಪ್ಸೆ ಪಟ್ಕೊಂಡು ಸತ್ತೋಳೇನು ದೆವ್ವ ಆಗಾಕ ಸಾಧ್ಯ. ತಮ್ಮ ಅನುಭವದ ಆಧಾರದ ಮೇಲೆ ವಾದಗಳನ್ನ ಮಂಡಿಸಿದ್ರು. ಅಳೋರು ಅತ್ತರು, ಅಳದಿದ್ದೋರು ಮಮ್ಮಲ ಮರಗಿ ಸುಮ್ಮನಾದ್ರು. ಚಿಮ್ನಿ ಮಾತ್ರ ಎಲ್ಲಾ ಸಂಬಂಧಗಳನ್ನ ಮುರ್ಕೊಂಡು ಹೋದ್ಲು. ಅವಳ ದುಡಿದ ಜಾಗ, ಮಾಡಿದ ಕೆಲಸ ಮಂದಿಗ ನೆನಪಿಲ್ಲ.

ಅವಳು ಸತ್ತು ವರ್ಷಕ್ಕೆ ಅವಳ ಚಿಕ್ಕತಾಯಿಗೆ ಮದಲನೇ ಗಂಡ ಮಗು ಹುಟ್ಟಿದ, ಎರಡನೇ ವರ್ಷಕ್ಕೆ ಹೆಣ್ಣು ಮೂರಕ್ಕೆ ಮತ್ತೊಂದು ಗಂಡು, ನಾಲ್ಕನೇ ವರ್ಷಕ್ಕೆ ಮಂಗ್ಲ್ಯಾನ ಪೌರುಷಕ್ಕೆ ಸರಿಸಾಟಿನೆ ಇಲ್ಲದಂಗೆ ಅರ್ಧ ಊರನ್ನೆ ಸೃಷ್ಟಿಸಿದ. ಇದು ಅವನ ಹಿರಿಯಣ್ಣ ಸಾಂತುನಾಯ್ಕನ ಜಿದ್ದಿಗೆ ಬಿದ್ದು ಮಾಡಿದ ಕೆಲಸ ಅಂತ ಬಹಳ ತಡವಾಗಿ ಘೋಷಣೆ ಮಾಡಿದ್ದ. ಉಳಿದವುಗಳಲ್ಲಿ ವರ್ಷಕೊಂದೊ, ಎರಡೋ ಮದ್ವೆ ಮಾಡ್ತಾನೇ ಇದ್ದ ಸತ್ತ ಹೋದೋವು ಉಳ್ಕೊಂಡುವಗಳಿಗೆ ದಾಖಲೆನೆ ಇಲ್ಲ. ಇಷ್ಟು ಮಾತ್ರ ಸತ್ಯ, ಕೆಲವರ

ಮದುವೇಗೆ ಇದ್ದ ಬಿದ್ದ ಹೊಲದಲ್ಲಿ ಸ್ವಲ್ಪ ಸ್ವಲ್ಪ ಮಾರಿದ, ಇನ್ನೂ ಕೆಲವನ, ಸಾಲಸೂಲ ಮಾಡಿ ಕೂಲಿ ಕಂಬಳ ಗೇಯ್ದು ಇತ್ತೀಚಿನವರೆಗೂ ಮದುವೆ ಮಾಡ್ತಾನೆ ಇದ್ದ.

ತಾಂಡ ಬಿಟ್ಟ ಮೂವತ್ತು ವರ್ಷಗಳೇ ಆದ್ರು ನನಗೆ ನನ್ನಕ್ಕ ಚಿಮ್ನಿಯ ನೆನಪು ಮಾತ್ರ ಮಾಸಿರಲಿಲ್ಲಾ. ಎದೆ ಗೂಡಿನೊಳಗೆಲ್ಲೋ ಹಾಗೆ ಕಾಡುತ್ತ ಉಳ್ಕೊಂಡಿತ್ತು. ಮಾಳಗಿ ಮನೆ ಅಟ್ವಾಳಗಿಯಲ್ಲಿ ಅವಳಾಡಿದ ಮಾತುಗಳು ನನ್ನ ಸ್ಮೃತಿಪಟಲದ ಟೇಪಿನೊಳಗೆ ಅಳಿಸಿ ಹೋದವು. ಹೋದ್ರು ಉಳ್ಕೊಂಡುವನ್ನ ಜಗತ್ತಿಗೆ ತಿಳಿಸಲೇಬೇಕಂಬ ಹಂಬಲ ಅದಮ್ಯವಾಗಿತ್ತು. ಯಾಕಂದ್ರ ಈಗ ಇರೋರರನ್ನ ಚಿಮ್ನಿಯಾರು ಅಂತ ಕೇಳಿದ್ರೆ ಗೊತ್ತಿಲ್ಲಾ ಅಂತಾರೆ. ನಾನು ತಾಂಡಕ್ಕೆ ಹೋದಾಗೊಮ್ಮೆ ಅವಳ ಸ್ಮಶಾನವನ್ನ ನೋಡಾಕ ಹೋಗಿ ನಿರಾಶೆಯಿಂದ ವಾಪಾಸಾಗಿದ್ದೆ. ಯಾಕಂದ್ರೆ ಆ ಸ್ಮಶಾನವನ್ನ ಕಾಪಾಡಿ ಅದರ ಮೇಲೆ ಗೋರಿಕಟ್ಟಲು ಅವಳೇನು ಈ ದೇಶದ ಪ್ರಧಾನ ಮಂತ್ರಿನೇ. ಹೂತ ಮೇಲೆ ಮಣ್ಣು ಮುಚ್ಚಿ ಎರಡು ಕಲ್ಲಿಟ್ಟು ಬಂದಿದ್ರು. ಹೆಣ ಕೊಳತ ಮೇಲೆ ಹುಲ್ಲು ಕಸ ಬೆಳ್ಕೊಂಡಿತ್ತು. ಸೊಂಪಾಗಿ ಬೆಳದ ಹುಲ್ಲನ್ನ ದನಗಳು ಮೆದ ಮೇಲೆ ಬಯಲಾಗಿ ಹುಲ್ಲುಮೊಟಾಗಿ ಬೇಸಿಗೆಗೆ ಒಣಗಿತ್ತು. ಮತ್ತೆ ಯಾರಾದ್ರು ಸತ್ತಾಗ ಹೂತ ಮೇಲೆ ಅವರ ಸ್ಮಶಾನದ ಗುರುತಿಗೆ ಇಲ್ಲಿದಕಲ್ಲು ಬೇರೆಯವರ ಕೈಗೆ ಸಿಕ್ಕಿದ್ದರಿಂದ ಅವನ್ನೇ ಎತ್ತಿಡಲಾಯ್ತು. ಮಳೆಗೆ ಮಣ್ಣೆಲ್ಲಾ ಕೊಚ್ಚಿಕೊಂಡು ಇಂಥದ್ದೆ ಜಾಗ ಎಂಬುದು ಕೂಡ ಮರೆತೆಹೋಗಿತ್ತು.

ತಾಂಡದಲ್ಲೀಗ ಗುಡಿಸಲುಗಳೇ ಇಲ್ಲಾ ತಾಂಡದ ಮುಂದಿನ ಕೆಂಧೂಳಿಗ ಹಾರಿಸಿಕೊಂಡು ಹೋಗಾಕೆ ಹುಲ್ಲು, ಆಪ್ರ ಇಲ್ಲ, ಸರ್ಕಾರದ ನೂರಾರು ಯೋಜನೆಗಳು ಇದ್ದೋರಿಗೂ, ಇಲ್ಲದವರಿಗೂ ಜನತಾ ಮನೆ ಅದ್ಯಾವುದೋ ಸ್ಕೀಮಿನೊಳಗೆ ಪುಗಸಟ್ಟೆ ಕರೆಂಟು ಕೊಟ್ಟಿದೆ. ನಮ್ಮ ಮನೇನೂ ಒಡದು ಚೂರಾಗಿ ಎಂಟೊಂಬತ್ತು ಅಣ್ಣ ತಮ್ಮಂದಿರು ಬೇರೆ ಹೋದ ಮೇಲೆ ಮಳೆಗಾಲಕ್ಕೆ ಸುತ್ತ ಗೋಡೆ ಬಿದ್ದು ಮಾಳುಗಿ ಮೇಲೆ ಬೆಳೆದ ಹುಲ್ಲನ್ನ ನೋಡಿ ಯಾರು ಮನೆ ತಗೆದುಕೊಳ್ಳಲು ಮುಂದೆ ಬರಲಿಲ್ಲಾ. ಮನೆ ಬೇಕೆ ಬೇಕು ಎರಡು ಬಯಕೆ ಹೊಂದಿದ ಅಣ್ಣನೊಬ್ಬನ ಪಾಲಿಗೆ ಬಂದಿದೆ, ಒಂದಿಷ್ಟ ದುಡ್ಡು ಹಾಕಿ ಬಿದ್ದ ಮನೆಯನೆಲ್ಲಾ ಸೋಸಿ ಮುಟ್ಟು ತೆಗೆದು ಕೆಂಪು ಹಂಚಿನ ಮನೆ ಕಟ್ಕೊಂಡಿಂದೆ ಅಟವಾಳಿಗೆಯಲ್ಲಿದ ವಾಗಜಾಯ ದೇವಿಕಲ್ಲುಗಳು ಎಲ್ಹೊದವೊ ಗೊತ್ತಿಲ್ಲ. ನಮ್ಮ ಮನೆಯೊಳಗೆ ಯಾವುದೇ ಮದುವೆ ಆದ್ರೂ ಗಂಡ ಹೆಂಡತಿ ಬಂದು

ಕೊಬ್ಬರಿ ಬಟ್ಟಲು ಹರಕೆ ಕೊಟ್ಟು, ಒಳಂಗ ಹೇಳುವ ಶಾಸ್ತ್ರ ಕೂಡ ಕಲ್ಲುಗಳ ಜೊತೆಗೆ ಸತ್ತು ಹೋಗಿತ್ತು. ಚಿಗಪ್ಪನ ಮಾಳಗಿಮನಿ ಕೆಡವಿ ಕೆಂಪು ಹಂಚಿಂದಾಗಿತ್ತು. ಆ ಕಡೆಗಿದ್ದ ಗುಡಿಸಲು ಕೂಡ ದೂರವಾಗಿ ಸರ್ಕಾರದವರ ಕೊಟ್ಟ ಜನತಾ ಮನೆಗೆ ಕೈಯಿಂದ ಒಂದೀಟು ಹಾಕಿ ದೊಡ್ಡ ಸೈಜಿನ ಮನೆ ಮಾಡಿಕೊಂಡಿದ್ರು. ಮೂಡಲದಿಂದ ಬಂದ ಒಬ್ಬ ಮುದುಕನ ಒಂದು ಮನೆಯಿಗ ಅರ್ಧ ಊರಾಗಿದೆ. ಅವರ ದುಡಿಮೆಗೆ ಹೊಟ್ಟೆ ಉರಿಪಟ್ಟಿದ ಜನರೆಲ್ಲಾ ಹೊಟ್ಟೆ ಉರಿಸಿಕೊಳ್ಳೊದನ್ನ ಕಡಿಮೆ ಮಾಡಿಕೊಂಡಿಲ್ಲ.

ನಮ್ಮ ಚಿಗಪ್ಪನ ಸಂತಾನದ ದಾಖಲೆ ಅವನ ಹತ್ರನೆ ಇಲ್ಲ. ಯಾವೂರೊಳಗೆ ಯಾರನ್ನ ಮದ್ವಿ ಮಾಡಿಕೊಟ್ಟಿದ್ದಾನೆ ಎಂಬುದು ಅವನಿಗೆ ಗೊತ್ತಿಲ್ಲ. ತಾಂಡದ ದುರಗಮ್ಮನ ಹಬ್ಬಕೊಮ್ಮೆ ಬ್ಯಾಟಿ ಕೊಡುವಾಗ ಯಾರ್ಯಾರೋ ಸೇರ್ತಾರೆ, ಯಾರಾದ್ರು ಸುಮಾರು ವರ್ಷಗಳ ಹಿಂದೆ ಸತ್ತು ಹೋಗಿದ್ದ ಚಿಮ್ಮಿ ನೆನಪು ತಗಿತಾರೇನಂತ ಬಹಳ ಕಾತರದಿಂದ ಕಿವಿ ನಿಮಿರಿಸಿ ಕೇಳುತ್ತೇನೆ. ಅವಳಪ್ಪ, ಅವ್ವ, ಚಿಗವ್ವ, ತಂಗಿಯಂದಿರು ಅಕ್ಕ ಊಹೂಂ. ಯಾರು ಯಾರ ಬಗ್ಗೆ ಮಾತಾಡದಾಗ ನಿರಾಶೆಯಿಂದ ಆ ಜಾಗಬಿಟ್ಟು ಬರುತ್ತೇನೆ. ಎಷ್ಟು ಬೇಗ ಸಂಬಂಧದ ಕೊಂಡಿ ಕಳಚಿ ಬಿಡುತ್ತದೆ. ಮನುಷ್ಯನ ಗುಣವೇ ಅಂತಹದ್ದಿರಬೇಕು. ಎಲ್ಲವನ್ನು ಮರೆಯುವಂತಹದ್ದು. ಯಾಕಂದ್ರೆ ದುಃಖ ತರುವ ವಿಷಯಗಳನ್ನ ನೆನಪು ಮಾಡಿಕೊಳ್ಳೋದಕ್ಕೆ ಯಾರು ಇಷ್ಟ ಪಡುವುದಿಲ್ಲ. ಕೆಲವರನ್ನ, ಕೆಲವು ಘಟನೆಗಳನ್ನ ವ್ಯಕ್ತಪಡಿಸೋದಕ್ಕೆ ಆಗೋದಿಲ್ಲ. ಒಳಗೊಳಗೆ ಮನಸ್ಸಿನೊಳಗೆ ಸಂಚರಿಸುವ ವಿದ್ಯುತ್ ಪ್ರವಾಹದಂಗೆ ಮನಸು ಮೆದುಳಿನ ತುಂಬೆಲ್ಲಾ ಸಂಚರಿಸುತ್ತಿರುತ್ತವೆ, ಬಹುಶಃ ಚಿಮ್ಮಿನೂ ಹಾಗೆ ಅಂತ ಅನ್ಸುತೆ.

ನಾನು ಕಂಡ ಹಾಗೆ ಅನೇಕ ಮಂದಿ ನಮ್ಮೂರೊಳಗೆ ಸತ್ತು ಹೋಗಿದ್ದಾರೆ. ನನ್ನ ಜೊತೆಗೆ ಗೋಲಿ ಆಡ್ತಾ, ಈಜಾಡ್ತಾ ಶೇಂಗಾ ಆರಿಸುತ್ತಾ ಬೆಳೆದ ಬದಿಯಾ, ಇಬ್ಬರು ಹೆಂಡಿರ ಸವಾಸಕ್ಕೆ ಬಿದ್ದು ಕಟ್ಕೊಂಡವಳನ್ನ ಬಿಟ್ಟು ಇಟ್ಕೊಂಡವಳ ಸಲುವಾಗಿ ತಾಂಡ ಬಿಟ್ಟ ಕಾಫಿ ತೋಟಕ್ಕೆ ಹೋದವನನ್ನ ಯಾರೋ ಕೊಲೆ ಮಾಡಿದ್ರು ಅಂತ ಕೇಳಿದಾಗ ಬಹಳ ದುಃಖವಾಗಿತ್ತು. ಅವನ ಹೆಣ ಊರಿಗೂ ಸಹ ತರದೆ ಅರ್ಧಬರ್ದ ನಾಯಿ ನರಿ ತಿಂದಿದ್ದನ ಅಲ್ಲೆ ಸಿಕ್ಕ ಚೂರು ಪಾರು ಕಟ್ಟಿಗೆ ರಾಶಿಯಲ್ಲಿ ಮುಚ್ಚಿ ಯಾರೋ ನಾಕ ಮಂದಿ ಸೇರಿ ದಿನ ಮಾಡಿ, ಒಂದೆರಡು ಕೋಳಿ ಕೊಯ್ದುದು ಶಾಸ್ತ್ರ ಮುಗಿಸಿದ್ರಂತೆ

ಹಿಂಗ ಎಷ್ಟೋ ಜನ ಸತ್ರು. ಅವ್ವ, ಅಪ್ಪನೂ ಬಿಟ್ಟ ಹೋದ್ರು ಆದ್ರ ಅವರ ಸಾವು ನನ್ನ ಈ ಪರಿ ಕಾಡಿರಲಿಲ್ಲ. ಅವರದ್ದು ವಯಸ್ಸಿಗೆ ಮೀರಿದ ಸಹಜ ಸಾವು. ಅವ್ವ ಹಾಸಿಗೆ ಹಿಡಿದಾಗ ಮಕ್ಕಳ, ಮೊಮ್ಮಕ್ಕಳ, ಮರಿಮಕ್ಕಳ ಮದುವೆಯಾಗಿ ಅವರಿಗೂ ಮಕ್ಕಳಿದ್ರು. ಅಪ್ಪ ನೂರು ವರ್ಷ ಅಲ್ಲದಿದ್ರೂ ತೊಂಬತ್ತರ ಆಸುಪಾಸು, ತನ್ನೆಲ್ಲಾ ಜೀವನದ ಅಂತಿಮ ಘಳಿಗೆಗಳನ್ನ ಅನುಭವಿಸಿ ಸತ್ತ. ಆದರೆ ಚಿಮ್ನಿ ಮಾತ್ರ ಯಾವ ಸಾರ್ಥಕತೆಯನ್ನು ಕಾಣದ ಅತೃಪ್ತಳಾಗಿ ಸತ್ತಿದ್ಲು. ಅವಳ ಒಂದೊಂದು ಮಾತುಗಳು ನನ್ನನ್ನ ಸುಮಾರು ಮೂವತ್ತೈದು ವರುಷಗಳಿಂದ ಕಾಡ್ತಿದ್ದವು. ಎಷ್ಟೊ ಸಲ ಬರೆಯಲು ಕುಂತವನಿಗೆ ಬರೆಯಲು ಆಗದೆ ಹಾಗೆ ಬಿಟ್ಟಿದ್ದೆ. ಯಾಕಂದ್ರೆ ಅವತ್ತು ಅಕಿ ಸಾಯುತ್ತೆನೆಂಬ ಸಾವಿನ ನಡುವೆ ಬದುಕಿದ್ದಳು. ಅವಳನ್ನು ಹುಟ್ಟಿಸಿದವನೇನಾದರೂ ಸ್ಥಿತಿವಂತನಾಗಿದ್ದರೆ ಖಂಡಿತ ಬದಕಬಹುದಾದವಳು. ಅದೊಂದು ಕೊಲೆ, ಅದಕ್ಕೆ ಕಾರಣ ಯಾರು ಅಂತ ಹುಡುಕೋದಕ್ಕೆ ಬಹಳ ಪ್ರಯತ್ನ ಪಟ್ಟೆ. ಕಡೆಗೆ ಸಿಕ್ಕ ಕೊಲೆಗಾರ ಬಡತನವೆಂಬ ಅಸಹಾಯಕ. ಮನೆತುಂಬ ಮಕ್ಕಳು ಒಂದಕಿದ್ರೆ ಒಂದಕ್ಕಿಲ್ಲ ಅಂಥ ಸ್ಥಿತಿಯಲ್ಲಿ ಶಸ್ತ್ರಚಿಕಿತ್ಸೆ ಅಸಾಧ್ಯದ ಮಾತು. ರೂಪಾಯಿ ನೋಟುಗಳೆಂದರೇನೆ ದೊಡ್ಡ ಮೊತ್ತ. ಕೂಲಿ ಹೋದರೆ ಕಾಳುಸಿಗ್ತಿತ್ತೆ ವಿನಃ ಕಾಸಿಲ್ಲ. ಹಣಬೇಕಂದ್ರೆ ಸಾವುಕಾರರಿಗೆ ಸಲಾಂ ಹೊಡದು ವಾರಗಟ್ಟಲೇ ಹಿಂದೆ ಸುತ್ತಾಡಬೇಕು. ಅಂಥ ಸ್ಥಿತಿಯಲ್ಲಿ ಮಂಗ್ಲ್ಯಾ ನಾಯ್ಕನಿಗೆ ಅಸಾಧ್ಯವಾಗಿತ್ತು. ಆತನ ಎಷ್ಟೋ ಕೂಸುಗಳು ಸಾಮಾನ್ಯ ವಾಸಿಯಾಗಬಹುದಾದ ಕಾಯಿಲೆಗೆ ಬಲಿಯಾಗಿ ಸತ್ತಂತಹವು. ನನಗನಿಸುತ್ತೆ ಆತ ತನ್ನ ಮಕ್ಕಳಿಗೆ ಅನ್ಯಾಯ ಮಾಡಿದ್ದಾನೆ. ದುಡಿದು ಹಾಕುವ ತಾಕತ್ತು ಇಲ್ಲದವನಿಗೆ ಮಕ್ಕಳನ್ನ ಹುಟ್ಟಿಸುವ ಅಧಿಕಾರವೂ ಇಲ್ಲ. ಒಂದಕ್ಕೆ ಎಣ್ಣೆ, ಬೆಣ್ಣೆ ಇಲ್ಲ ಮತ್ತೊಂದು ಬೇಡಿದ್ನಂತೆ. ಎರಡೆರಡು ಮದುವೆ. ಇಬ್ಬರು ಹೆಂಡಿರಿಗೂ ಅನ್ಯಾಯ ಮಾಡಿದ್ದ. ಹಾಗಂತ ಅವನಾದ್ರು ಸುಖವಾಗಿದ್ನೆ ಇಬ್ಬರು ಹೆಂಡತಿಯರು ಅಂದಾಗ ನರಗೊಳು. ಅವಳ ಮೇಲೆ ಇವಳು ಚಾಡಿ, ಇವಳ ಮೇಲೆ ಅವಳ ಚಾಡಿ, ಅವೆರಡು ಸರಿ ಇದ್ರೆ ಊರಾಗ ಗಲಾಟಿ ಇದ್ದೆ ಇರ್ತಿತ್ತು. ಯಾವ ಕಡೆಯಿಂದ ನೆಮ್ಮದಿ ಸಿಕ್ಕಿತು. ಇಂತ ನರಕದ ಕೂಪವನ್ನ ಮಂಗ್ಲ್ಯಾನೆ ಖುದ್ದಾಗಿ ನಿರ್ಮಿಸಿಕೊಂಡಿದ್ದ. ಅದಕ್ಕೆ ಪೂರಕವಾಗಿ ಅವನ ಸಮಾಜದ ಜನರು. ಮನೆತನದ ವಾರಸುದಾರಿಕೆಗೆ ಗಂಡು ಬೇಕೆಬೇಕು. ಈ ಎಲ್ಲಾ ಜೀವನದ ಸುಳಿಯೊಳಗೆ ಸಿಕ್ಕು ಸೂತ್ರವಿಲ್ಲದ ಗಾಳಿಪಟದಂತೆ ದಿಕ್ಕು ದೆಸೆಯಿಲ್ಲದೆ ಸುತ್ತಾಡಿದ ಮಂಗ್ಲ್ಯಾನಾಯ್ಕ ಮತ್ತೆ ಹೊಸ ವಿವಾದಕ್ಕೆ ಸಿಲುಕಿದ್ದ.

ಹಿರೆ ಹೆಂಡತಿ ಮನೆ ಬಿಟ್ಟು ಅದ್ಯಾವುದೋ ಮಗಳ ಹತ್ರ ಹೋಗಿ ವಾಸವಾಗಿದ್ಲು. ಅವಳ ಮದುವೆಯಾಗದ ಕೊನೆಯ ಹೆಣ್ಣು ಮಕ್ಕಳು ತಮ್ಮ ನ್ಯಾಯಕ್ಕಾಗಿ ಕೋರ್ಟಿಗೆ ಹೋಗಿ ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಹಕ್ಕಿದೆ ಎನ್ನೋ ಕೇಸ್ ಫಿಟ್ ಮಾಡಿ ಕೋರ್ಟಿಗು ಅಲೆಸಿ, ಮೇಲೆ ಕುಂತ ಜಡ್ಜ್‌ಗೆ ವಿನಂತಿ ಮಾಡಿದ. "ಸೋಮಿ, ನಾನು ಮಕ್ಕಳಂದಿಗ. ಮದಲನೇ ಹೆಂಡತಿಯ ಹದಿನಾರು ಹೆಣ್ಣು ಮಕ್ಕಳು ಅದರಲ್ಲಿ ಹನ್ನೆರಡಕ್ಕೆ ಮದುವೆ ಮಾಡ್ಸಿವ್ನಿ. ಎರಡನೇಯವಳಿಗೆ ಎಂಟು ಹೆಣ್ಣು ನಾಲ್ಕು ಗಂಡು" ವಿವರಿಸ್ತಾನೆ ಇದ್ದ. ಜಡ್ಜ್ ಸಾಹೇಬಗೆ ತಲೆ ಚಕ್ರ ಬಂದು ಸುಸ್ತಾಗಿ ಕುರ್ಚಿಗೆ ತಲೆಯೊರಗಿಸಿದ್ದ. "ನನಗೆ ನ್ಯಾಯ ಕೊಡಿ ಪ್ರಭು. ನಾನು ಜೀವನದಾಗ ಸೋತು ಹೋಗೀನಿ, ಇನ್ನೂ ಹೋರಾಡಲಾರೆ" ಅಂಗಲಾಚಿದ್ದ. "ಇನ್ನೊಂದು ಮದುವೆ ಆಗ್ತಿಯಾ" ಜಡ್ಜ್ ಸಾಹೇಬ ಕೇಳಿದ. ಮಂಗ್ಲ್ಯಾ ಗಾಬರಿಯಿಂದ ವಿಚಲಿತನಾದ "ಜೀವನದಾಗ, ಬಹಳ ದೊಡ್ಡ ತಪ್ಪು ಹಿಂದೆ ಮಾಡೀನಿ ಸಾಹೇಬ್ರ, ಅಂಥ ತಪ್ಪನ ಇನ್ನೆಂದು ಮಾಡಲಾರೆ, ಬಹಳ ಕಷ್ಟ ಅನುಭವಿಸೀನಿ. ಜೀವನದ ಸಲುವಾಗಿ ಬಹಳಷ್ಟ ಎಡತಾಕೀನಿ. ಈಗ ಸಾಧ್ಯವಾಗದ ಮಾತು" ತಪ್ಪನ್ನ ಒಪ್ಪಿಕೊಂಡಿದ್ದ. "ನೀನು ಹಿಂದೆ, ಮಾಡಿದ ತಪ್ಪಿಗೆ ಶಿಕ್ಷೆ ನಿನಗೆ ವಿನಃ ಮತ್ತ್ಯಾರಿಗೂ ಅಲ್ಲ. ಬಹಳ ಮಂದಿ ತಪ್ಪು ತಿಳಿದುಕೊಂಡಿದ್ದಾರೆ ಇಲ್ಲಿ ತಪ್ಪು ಮಾಡಿದ್ರೆ ಶಿಕ್ಷೆ ನರಕದಲ್ಲಿ ಅಂತ ಹಿಂದೆ ಹೇಗೆ ಅನುಭವಿಸಿ ದ್ದೆಯೋ ಹಾಗೇ ಈಗಲೂ. ನಮ್ಮ ಕಷ್ಟ-ಸುಖವನ್ನ ನಿರ್ಧಾರ ಮಾಡೋರು ನಾವೇ ಮಂಗ್ಲ್ಯಾನಾಯ್ಕ. ಎಲ್ಲರೂ ಆ ದೇವರ ಮೇಲೆ ಹೊರಸಿ ತಮ್ಮ ಜವಾಬ್ದಾರಿಯನ್ನ ಕಳೆದುಕೊಳಾಕ ನೋಡ್ತಾರೆ." ಜಡ್ಜ್ ಮಾತಾಡ್ತಾನೇ ಇದ್ದ. ಮಂಗ್ಲ್ಯಾ ನಾಯ್ಕನಿಗೆ ಇಡಿ ಜಗತ್ತೆ ಗಿಮಿಗಿಮಿ ತಿರಗ್ತಿರೊ ಅನುಭವ ಆಗಾಕ ಹತಿತ್ತು. ಕೋರ್ಟ್‌ಮೆಟ್ಲು ಹತ್ತಿದ ಅವನ ಕಿರಿ ಮಗಳು ಮತ್ತು ಆಕಿಗಿಂತ ಹಿರಿಯೊಳು ಸತ್ತ ದನದ ಚರ್ಮ ಎಬ್ಬಿ ಮಾಂಸಕ್ಕಾಗಿ ಕಚ್ಚಾಡೋ ಮೇಲನೊಣಿ, ಕೆಳಗಿನ ಓಣಿಯ ನಾಯಿಗಳಂತೆ ವಿಕೃತ ಭಾವನೆಗಳ ವ್ಯಕ್ತ ಪಡಿಸ್ತಾ ಹಲ್ಲಕಿಸಿದು, ಗುರ್‌ಂತ ಹೆದರಿಸ್ತಿರೊ ಹಂಗ ಅನಿಸಿತು. ಮಾಡಬಾರ್ದ ಮಾಡಿದ್ರ ಆಗಬಾರದ ಆಗುತ್ತೆ ಅಂತ ಗೊತ್ತಿದ್ರು, ವಂಶೋದ್ಧಾರಕನ ಹಿಂದ ಬಿದ್ದು ಹತ್ತ, ಇಪ್ಪತ್ತು, ಇಪ್ಪತ್ತೈದು ಬದುಕಿ ಉಳಿದವು. ಸತ್ತೋವು ಅದೇಟೋ ಲೆಕ್ಕವಿಲ್ಲಾ, ಅಂತು ಅವನು ಅವನಿಬ್ಬರ ಹೆಂಡ್ರು ಬೋ ಸುಖವಾಗೆ ಇದ್ರು ಆದ್ರ ಕಾಲ ಕಳದ ಹಾಗೆ ಹುಲಿಮುಪ್ಪಾದ್ರೆ ನಾಯಿ ತಿಕ ಮೂಸಿದಂಗೆ, ಈಗ ಕೈಯಾಗ ಕಾಸಿಲ್ಲ, ಮೈಯಾಗ ಉಸರಿಲ್ಲ.

ಎಲ್ಲಾ ಅವರದೇ ಕಾರುಬಾರು, ಒಬ್ಬರ ಮಾತು ಇನ್ನೊಬ್ಬರು ಕೇಳಂಗಿಲ್ಲ. ಸಣ್ಣೋರು ಅನ್ನಂಗಿಲ್ಲ ದೊಡ್ಡೋರು ಅನ್ನಂಗಿಲ್ಲ. ಕೂಲಿ ಮಾಡಿದ ಕಾಸು ಕೊಟ್ರೆ ಕೊಟ್ರು ಇಲ್ಲಕ್ರ ಅವರೇ ಇಟ್ಕಂಡ ತಮಗ ಬೇಕಾದ್ದ ಕೊಂಡ್ಕೊಳೋದು. ಅಪ್ಪ ಅನ್ನಂಗಿಲ್ಲ ಅವ್ವ ಅನ್ನಂಗಿಲ್ಲ. ಮಂಗ್ಲ್ಯಾನಿಗೆ ತನ್ನ ಕಾಲದ ರೀತಿ ರಿವಾಜು ನೆನಪಾಗದೆ ಇರ್ಲಿಲ್ಲಾ. ಈಗ ನಿರ್ಲಿಪ್ತತೆ ಅವನಿಗೆ ಅನಿವಾರ್ಯವಾಗಿತ್ತು. "ಮಗಳಂದ್ರೆ ಒಬ್ಬಳೆ ಕಣ್ರೀ ಚಿಮ್ನಿ. ಸಾವನ್ನ ಬೆನ್ನಿಗ ಕಟ್ಕಂಡು ಮನಿ ಮಂದಿಗ ಮಾದರಿಯಾಗಿದ್ಲು. ಅಷ್ಟು ಮಂದಿ ತಂಗಿಯರನ್ನ ಕೂಲಿಗ ಕರ್ಕಂಡ ಹೋಗಿ ಮಾಡಿದ ಕೆಲ್ಸದ ದುಡ್ನೆಲ್ಲಾ ತಂದು ಜೋಪಾನವಾಗಿ ತಂದು ಅಪ್ಪನ ಕೈಯಲ್ಲೇ ಕೊಡ್ತಿದ್ಲು. ಮಂದಿ ಎಷ್ಟು ಕಲಿಸಿದ್ರು, ಅಯ್ಯೋ ನನ್ನ ಸೌತಿ, ನಿಂಗಂತ ನಾಕ ಕಾಸು ಇಟ್ಕ ಅಂತ. ಅಪ್ಪ ಅಮ್ಮ ಇರುವಾಗ ನಂಗ್ಯಾಕೆ ಕಾಸು ಅಂದೋಳು ಮಣ್ಣಾಗಹ್ವಾದ್ಲು. ಇರೋ ಪೀಡೆಗಳು ನನ್ನ ಕಿತ್ತು ತಿಂತವೆ" ಅಂತೇಳಿ ಕುಂತ ಹತ್ರಾನೆ ಹಳಹಳಿಸುತ್ತಿದ್ದ. ಎಲ್ಲವೂ ಕಾಲನ ಮಹಿಮೆ ಅವನು ಮುಂದೆ ಮುಂದೆ ಹೋಗ್ತಿದ್ದಂಗೆ ನಮ್ಮ ಬಾಲ್ಯ, ಯೌವ್ವನ, ಕಳದು ಮುಪ್ಪಾನವರಿಸುತ್ತೇ, ಆ ಮುಪ್ಪಿನ ಕಾಲಕ್ಕೆ ಆಸರೇಗಂತ ಯಾರಾರು ಬೇಕು. ಯಾರು? ಮಂಗ್ಲ್ಯಾಗೆ ದೊಡ್ಡ ಪ್ರಶ್ನೆ ಎದ್ದಾಗಿತ್ತು. ಯಾವದೋ ಅವ್ಯಕ್ತ ಭಾವ ಅವನನ್ನ ಹಿಂಡಿ ಹಿಪ್ಪೆ ಮಾಡ್ತಿತ್ತು. ಯಾರು ಹೋದ್ರುವೇ ಸತ್ತ ಎಷ್ಟೋ ಹೆಣ್ಣು ಸಂತಾನಗಳಲ್ಲಿ ಅವನು ಮಾತಾಡೋದೆ ಚಿಮ್ನಿ ಬಗ್ಗೆ. ಹಾಳಮನಿ ದೇವ್ರು ಒಳ್ಳೆದನ್ನೆ ಮದ್ಲ ಒಯ್ತಾನ, ಯಾಕಂದ್ರ ಅವನ ತಾವ ಕೆಟ್ಟ ಮಂದಿ ಗುಂಪಿರತೈತಲ್ಲಾ ಅದ್ರಾಗ ಒಳ್ಳೆಯವರು ಸೇರ್ಕಂಡ್ರ ಎಲ್ಲಾ ಸರಿಯಾಗುತ್ತೆ ಅನ್ನೋ ಅನುಮಾನ ಅವನಿಗೆ. ಪಾಪಿಗಳು ನೂರು, ನೂರಾರು ವರ್ಷಗಳ ಮಟ ಬದಕ್ತಾನೆ ಇರ್ತಾರ. ಸಾವು ಸಹಿತ ಹತ್ರ ಸುಳಿಯಾಕಿಲ್ಲಾ. ಮಂದಿ ಸಾಮಾನ್ಯವಾಗಿ ಮಾತಾಡೋದು, ಅವನಿಗ ಅರ್ಥನೆ ಆಗಿರಾಕಿಲ್ಲ.

ಮಂಗ್ಲ್ಯಾಗೂ ಜೀವನ್ನೋ ಜೀವ ಬ್ಯಾಸರಾಗಿತ್ತು. ಅವನ ಅಕ್ಕ ಪಾಮಿಸತ್ಲು, ಅಣ್ಣ ಸಂತು ನಾಯ್ಕ ಸತ್ತ. ಅತ್ತಿಗಿ ಬೇವಿಸತ್ಲು. ಆದ್ರ ಇಂವ ಮಾತ್ರ ಹಾಳೂರಿಗೆ ಇರೋನೆ ಗೌಡ ಅಂತೇಳಿ ಉಳ್ಕಂಡಿದ್ದ. "ಥು ಇವ್ನವ್ವ ಹಾಳ ಮನಿ ಸಾವು ಮಂದಿನೆಲ್ಲಾ ತಗಂಡ ಹೋತು, ನಂತಾವ ಸುಳಿಯಾಕ ತಯಾರಿಲಿಲ್ಲ" ಕಟ್ಟಿ ಮ್ಯಾಲ ಕುಂತು ಗ್ವಾಡಿ ಕೂಡ ತನ್ನ ವೇದನ ತೋಡ್ಕಂತಿದ್ದ. ಯಾಕಂದ್ರ ಕೇಳಾಕ ಯಾರು ಇರ್ಲಿಲ್ಲ. ಮನ್ನೆ ಮನ್ನೆ ಅವನ ಹೀರೆ ಹೇಣ್ತಿ ಚಿನ್ನಿನೂ ಲೋಕಬಿಟ್ಲು. ಅವನ ವಯಸ್ಸಿನ ಒಂದ ಕಾಗಿನೂ

ಊರಾಗ ಇಲದಂಗಾದ್ವು ಇಂವ ಮಾತ್ರ ಉಳಿದಾನ. ಇನ್ನೇನು ಕೇಳಬೇಕೋ, ನೋಡಬೇಕೋ ದೇವರಿಗೆ ಗೊತ್ತು. ಯಾಕಂದ್ರ, ದೃಷ್ಟಿ ಹೋಗ್ಯಾವ, ಕೈಯಾಗ ಕಾಸು ಇಲ್ಲ ಕುಂತ ಹತ್ರಾನೆ ಎಲ್ಲಾನು ಮಾಡ್ಕಬೇಕು. ಮಂದಿ ಅವನ ಬದಕಿನ ಬಗ್ಗೆ ಹೈರಾಣ ಆಗ್ಯಾರ. ಯಾರೋ ಅಂತಿದ್ರಂತೆ "ಅಲ್ಲಾ ಈ ಮುದಕ ನಡಿಯಂಗಿಲ್ಲ ಅಂತಾನ, ಸವರಾತ್ರಿಯೊಳಗ ಕಟ್ಟಿ ಮ್ಯಾಲ ಕುಂತು ಯಾರದೋ ಕೂಡ ಮಾತಾಡ್ತಿದ್ದನ್ನ ನಾನೇ ಕಣ್ಣಾರೆ ಕಂಡೀನ" ಅಂತ. ಇನ್ಯಾರೋ ಅಂತಾರ ಇಲ್ಲಾ ಅವನಿಗೆ ನಡಿಯಾಕ ಬರುತ್ತೆ, ಮನ್ನೆ ರಾತ್ರಿ, ನಾನು ತುಂಬಕಿತ್ತು ಅಟು ನೀರು ಹಾಸನಂತೇಳಿ ಕೆರಿ ಏರಿಮ್ಯಾಲ ಹೊಂಟೀನ ಯಾರದೋ ಕೈ ಹಿಡ್ಕಂಡು, ಮಾತಾಡ್ಕೊಂತ ಹೊಂಟವನೆ, ಅಂದ್ರು. ಏ! ಅವನ ಮಗಳ ಚಿಮ್ನಿ ಹ್ಯಾಂಗ ಹುಟಿದ್ಲಲ್ಲಾ ಹಂಗೆ ಸತ್ತಿದ್ದೆ ದೇವರು ಮುಟ್ಟಿ ಹಂಗೆ ದೇವರ ಮಾಡಿ ಕಳಸ್ಯನಂತೆ, ಅಕಿಕೂಡ ಇಂವ ದಿನರಾತ್ರಿ ಹಿಂಗ ನಾಟ್ಕ ಹಚ್ಯಾನ ನೂರೆಂಟು ಊಹೆಗಳು ಹುಟ್ಕೊಂತಿದಂಗೆ ಮಂಗ್ಲ್ಯಾ ರಕ್ತ ಬೇಧಿಯಿಂದ ನಿತ್ರಾಣ ಆದ. "ಇನ್ನ ಮುಗಿತ ಬಿಡು ಇವನ ಕತಿ ಇನ್ನೇನು ಬದ್ಯಾಕನು" ಅವನ ಎರಡನೆ ಹೆಣ್ತೆ ಮಾರಿಮ್ಯಾಲ ಮುಕ್ಕರಿದ್ದ ನೊಣ ಓಡಿಸಿ ದುಪ್ಟಿ ಮುಚ್ಚಿ ಹೆಣದ ಪಕ್ಕ "ಅಯ್ಯ ಹ್ವಾದಲ್ಲೋ ಹಿರಿಯಾ ನನಗೆ, ನಿನ್ನ ಬಂಗಾರದಂತೆರಡು ಮಕ್ಕಳಿಗೆ ಏನೂ ಹೇಳಲಿಲ್ಲಾ ಬರ್‍ರೆಯವ್ವ ಹೋಗ ಬಿಟ್ಟಿ ನನ ಗಂಡ, ಹೆಣ ನಾರೋದ್ರಾಗ ಸುಡಗಾಡ ಕಾಣಸ್ರೀ, ಲೇ ಬೇವರ್ಸಿನನ ಮಕ್ಳ ಕರೀರು ಬೀಗ್ರನ್ನ" ಜೋರ ಬಾಯಿಮಾಡಿ, ತಾಂಡಕ್ಕೆ ಕೇಳೋ ಹಂಗ ಅಳ್ತಿದ್ರೆ ಮಾರಿಮ್ಯಾಲಿನ ದುಪ್ಟಿ ತನ್ನ ಪಾಡಿಗ ತಾನೆ ಸರದು ಮಕ್ಕೊಂಡಿದ್ದ ಮಂಗ್ಲ್ಯ ಮೇಲೆದ್ದು. "ಏಯ್ ಬೇವರ್ಸಿ ಹಿಂಗ್ಯಾಕ ಸತ್ತೋರ ಮನಿಯಾಗ ಅತಂಗ ಅಳಾಕತ್ತಿ ನಾನಿನ್ನು ಗಡದ್ದಾಗೆ ಅದೀನಿ" ಅಂತೇಳಿ ಕಣ್ಣುಬಿಟ್ಟ. ಅದೇ ಕಟ್ಟೆಮೇಲೆ ನಿತ್ರಾಣ ದೇಹ ಹೊತ್ತು ಮಲಗಿದ್ದ ಮಂಗ್ಲ್ಯನಾಯ್ಕ. ಜೀವ ಎಲ್ಲೊ ಸಿಗಾಕಿಕೊಂಡಂಗ್ಯೆತೆ ಜೋರಾಗಿ ಕೆಮ್ಮಿದ್ರೆ, ಇಲ್ಲ ಸೀನಿದ್ರೆ ಹೋಗಬಹುದೇನೋ ಆದರೆ ಅವು ಯಾವು ಬರೋದಕ್ಕೆ ಸಾಧ್ಯವಿಲ್ಲದಷ್ಟು ಜೀರ್ಣಗೊಂಡಿದ್ದ. ಇಡಿ ದೇಹದ ಮಾಂಸಖಂಡಗಳು ಕರಗಿ ನೀರಾಗಿದ್ದವು. ಮಾಂಸವಿಲ್ಲದ ಚರ್ಮ ಜೋತು ಬಿದ್ದಿತ್ತು. ಕಣ್ಣು ಕಾಣದೆ ಕುಂತಲ್ಲೆ ತಡವರಿಸುತ್ತ, ನಾಕುಹನಿ ಒತ್ತರಿಸಿ ಬರುವ ಮೂತ್ರ ಪಂಚೆಯೊಳಗೆ ಮಾಡಿಕೊಂಡು, ಅಲ್ಲೇ ಕಕ್ಕಸು. ಇಡಿ ವಾತಾವರಣ ಗಬ್ಬು ನಾರುತ್ತಿತ್ತು. ಆದರೂ ಗಟ್ಟಿ ಜೀವ ಬಿಡುಗಡೆಗೆ ಕಾಯುತ್ತಿತ್ತು. "ಯಾರಪ್ಪ ನೀನು, ಅಲ್ಲ ಆ ದೇವರಿಗೆ ನನ ಮೇಲೆ ಅದೆಂಥ ಸೇಡು ಅಂತೀನಿ, ಎಲ್ಲರನೂ ಸಸೂತ್ರವಾಗಿ

ಕರ್ಕಂಡ. ನನ್ನ ಮಾತ್ರ ಹಿಂಗ ಕೊಳಿಹಾಕಿದ. ಏನ ಮಾಡಲಿ, ಸಾಯಬೇಕು ಕಣಪ್ಪ ನಾ ಸಾಯಬೇಕು ಈ ಬದುಕು ದೊಡ್ಡಹೊರೆಯಾಗಿದೆ. ಲೇ ತಮ್ಮ ನಿಂತಾವ ಏನಾದರು ಸಾವಿದ್ರೆ ಕಳಸೋ" ಒಂಟಿ ಎಲಬು ನೆಲಕ್ಕೆ ಚುಚ್ಚಿ ಜೀವನವೇ ಬೇಸರಗೊಂಡು ಮಂಗ್ಲ್ಯನಾಯ್ಕ ಬಡಬಡಿಸುತ್ತಿದ್ದ.

ನಾನು ಕಾಟೇಬಾರಿ ತಾಂಡಕ್ಕೆ ಹೋದಾಗೊಮ್ಮೆ ಆತನಿಗೆ ಪ್ರಿಯವಾದ ಸರಾಯಿ ಪಾಕೇಟು ಹಿಡಕಂಡು ಹೋಗಿ ಅವನ ಪರಿಸ್ಥಿತಿಯನ್ನು ಕಂಡು ಮರುಕಪಟ್ಟು ಬರ್ತಿದ್ದೆ. ಒಂದು ಕಡೆಗೆ ಪೌರುಷದ ಪ್ರತೀಕ ಮತ್ತೊಂದೆಡೆ ಅಸಹಾಯಕನಾಗಿ ನಿರ್ಲಿಪ್ತ ಅವಸ್ಥೆ. ಈ ಗೊಂದಲದ ನಡುವೆ ಬದುಕಿರುವ ಮಂಗ್ಲ್ಯನಾಯ್ಕನ್ನ ಮಾತಾಡಿಸುವಾಗೊಮ್ಮೆ ಚಿನ್ನಾ ನಾಯ್ಕನಿಗೆ ಚಿಮ್ನಿ ಎಂಬ ಅವನ ಅಕ್ಕ ನೆನಪಾಗದೆ ಇರುತ್ತಿರಲಿಲ್ಲಾ. ಅವಳೀಗ ಬದುಕಿದ್ದರೆ ಐದಾರು ಮಕ್ಕಳ ತಾಯಿಯಾಗಿರುತ್ತಿದ್ದಳು, ಮೊಮ್ಮಕ್ಕಳನ್ನು ಕಂಡಿರುತ್ತಿದ್ದಳು.

* * * * *



ಶಿರಗಾನಹಳ್ಳಿ ಶಾಂತನಾಯ್ಕ

ಬದುಕಿನ ಬಗ್ಗೆ ಕನಸು ಕಾಣದವರಿದ್ದಾರೆ, ಆದರೆ ಕನಸು ಕಂಡವರ ಕನಸುಗಳು ಯಾವತ್ತು ಈಡೇರುವುದೇ ಇಲ್ಲಾ, ನುಚ್ಚು ನೂರಾಗಿ ಬಿಡುತ್ತವೆ. ಇಂತಹ ಕರಾಳ ಕನಸು ಕಂಡು ಬದುಕಬೇಕೆಂದು ಹಂಬಲಪಟ್ಟಿದ್ದ ಚಿಮ್ನಿಗೆ ಅವಳ ಎದೆಯೊಳಗೆ ತೂತಾಗಿದೆ ಎಂದು ಕೇಳಿದಾಗ ನಿಂತ ನೆಲ ಕಾಲಡಿ ಕುಸಿದಿತ್ತು. ಸಾವನ್ನ ಹೊತ್ತು ಬದುಕುವುದು ಬಹಳ ಕಷ್ಟ. ಒಂದು ನಿರ್ದಿಷ್ಟ ಗೆರೆಯನ್ನು ಎಳೆದು ಇಲ್ಲಿಂದ ಇಲ್ಲಿಯವರೆಗೆ ಮುಂದೆ ದಾಟುವುದಿಲ್ಲವೆಂದಾಗ ಖಂಡಿತ ಅದು ಪ್ರಯಾಸವಾಗುತ್ತದೆ, ಶೋಚನೀಯವಾಗಿ ಬಿಡುತ್ತದೆ. ಹೀಗೆ ಅವಳಿಗೂ ಆಗಿದ್ದು. ಬಡತನ, ದಾರಿದ್ರ್ಯ, ಮನೆ ತುಂಬ ಮಕ್ಕಳು ಕೇಳುವವರ್‍ಯಾರು ಹುಟ್ಟಿದ್ದು ತಮಗೆ, ಉಳದ್ರ ನಸೀಬಗಟ್ಟಿ ಐತೆ ಅಂದ್ಕೊಳೊದು, ಸತ್ರೆ ಶಿವನವು ಅಂದ್ಕೊಂಡು ಹೊಟ್ಟೆ ತುಂಬ ಹೆಂಡಸರಾಯಿ ಕುಡಿದು ಅಮಲಿನಲ್ಲಿ ವಾರ ಹದಿನೈದು ದಿನಗಳ ಕಾಲ ನೆನಪು ಮಾಡಿಕೊಂಡು ಬೇಸರಪಟ್ಟು, ಮತ್ತೆ ಯತಾಸ್ಥಿತಿಗೆ ಮರಳುವ ಬದುಕಿಗೆ ಹೊಣೆ ಯಾರು?

ಚಿಮ್ನಿ ಎಂಬ ಹುಡುಗಿಯ ಆತ್ಮಚರಿತೆ - ಲಂಬಾಣಿ ಸಮುದಾಯದ ಹುಡುಗಿಯೊಬ್ಬಳ ಕತೆ, ಅನಕ್ಷರಸ್ಥ ಬಡ ಕುಟುಂಬದ ಅನೇಕ ಮಕ್ಕಳು ಹೀಗೆ ಹಾದಿ ಹೆಣವಾಗುತ್ತಾರೆ. ಅಂತಹವರ ಸಾವು ದಾಖಲಾಗುವುದೇ ಇಲ್ಲ. ಅಂತಹದೊಂದು ಸಾವು ನನ್ನನ್ನ ಬಹಳ ವರ್ಷಗಳಿಂದ ತೀವ್ರವಾಗಿ ಕಾಡಿತ್ತು. ಅದು ಈಗ ಕೃತಿರೂಪದಲ್ಲಿ ಬಂದಿದೆ. ಇದನ್ನು ಕನ್ನಡ ಸಾರಸ್ವತ ಲೋಕ ಸ್ವೀಕರಿಸುತ್ತೆ ಅಂದುಕೊಂಡಿದ್ದೇನೆ.

ಶಿರಗಾನಹಳ್ಳಿ ಶಾಂತನಾಯ್ಕ
ಬಳ್ಳಾರಿ